(ಸಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ನಡುವೆ ಅಂತರ್ ರಾಜ್ಯ ಸ್ಪರ್ಧೆಗಳನ್ನು ಸಹ ವ್ಯವಸ್ಥೆಗೊಳಿಸತಕ್ಕದ್ದು. [7ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

7ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಮಾಡಿದ ಮೇಲ್ಕಂಡ ಶಿಫಾರಸುಗಳ (ಬಿ) ಭಾಗದ ಪಾಲನೆಯಲ್ಲಿ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ - ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ನೀಡುವುದಕ್ಕಾಗಿ ಈ ಯೋಜನೆಯನ್ನು ರೂಪಿಸಿದೆ.

ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆಯ ಅನ್ವಯ ಮಾನ್ಯತೆ ಪಡೆದ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. 2010-11ನೇ ಸಾಲಿನಿಂದ ಈ ಕೆಳಗೆ ನಮೂದಿಸಿರುವ ಮಾರ್ಗಸೂಚಿಗಳನ್ವಯ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲಾಗುವುದು.

1. **ಯೋಜನೆಯ ಉದ್ದೇಶ:–** ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರಪಡಿಸುವ, ಶಿಸ್ತು, ಇತರರ ಅಭಿಪ್ರಾಯಗಳ ಬಗ್ಗೆ ಗೌರವ, ತಾಳ್ಮೆ ಮುಂತಾದ ಆರೋಗ್ಯಕರ ಗುಣ ವಿಶೇಷಗಳನ್ನು ಮೈಗೂಡಿಸುವ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ಸಂಸತ್ ಕಾರ್ಯ ಕಲಾಪದ ಬಗ್ಗೆ ಅರಿವು ಮೂಡಿಸುವುದೇ ಇದರ ಉದ್ದೇಶ.
2. **ಯೋಜನೆಯ ಕಾರ್ಯಾಚರಣೆ:–** ಈ ಯೋಜನೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಸಹಯೋಗದೊಂದಿಗೆ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಮಾರ್ಗದರ್ಶನದಲ್ಲಿ ಕಾರ್ಯಗತಗೊಳಿಸಲಾಗುವುದು.
3. **ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಅರ್ಹತೆ:–** ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ಪದವಿ ಪೂರ್ವ ಕಾಲೇಜುಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಹೊಂದಿವೆಯೆಂದು ಪರಿಗಣಿಸಬಹುದು. ಭಾಗವಹಿಸುವ ಶಾಲೆಗಳ ಪಟ್ಟಿಯನ್ನು, ಪ್ರತಿವರ್ಷದ ಮಾರ್ಚ್ 31ರೊಳಗೆ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯವು ಅಂತಿಮಗೊಳಿಸುತ್ತವೆ.
4. **ಯುವ ಸಂಸತ್ ಸ್ಪರ್ಧೆಯನ್ನು ನಡೆಸುವ ಅವಧಿ:–** "ಯುವ ಸಂಸತ್ ಸ್ಪರ್ಧೆ" ಯನ್ನು ಪ್ರತಿ ವರ್ಷವು ನಡೆಸಲಾಗುವುದು. ಈ ಬಗ್ಗೆ ಸವಿವರ ಕಾರ್ಯಕ್ರಮವನ್ನು ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ರೂಪಿಸತಕ್ಕದ್ದು ಮತ್ತು ವಾರ್ಷಿಕ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ತಿಳಿಸತಕ್ಕದ್ದು.
5. **ಯುವ ಸಂಸತ್ತಿನಲ್ಲಿ ಭಾಗವಹಿಸುವವರ ಸಂಖ್ಯೆ:–** ಪ್ರತಿಯೊಂದು ಪದವಿ ಪೂರ್ವ ಕಾಲೇಜಿನಲ್ಲಿ "ಯುವ ಸಂಸತ್ ಸ್ಪರ್ಧೆಯನ್ನು" ನಡೆಸುವುದಕ್ಕಾಗಿ ಬೇಕಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಯಾವುದೇ ಮಿತಿ ಇಲ್ಲ. ಆದಾಗ್ಯೂ, ಅಧಿವೇಶನದ ಅವಧಿಯನ್ನು ಸೀಮಿತಗೊಳಿಸುವುದು ಅಪೇಕ್ಷಣೀಯವಾಗಿರುವ ಕಾರಣ, ಭಾಗವಹಿಸಿರುವ ವಿದ್ಯಾರ್ಥಿಗಳಲ್ಲಿ ಹಲವರು ಸಂಸತ್ತಿನ ಅಧಿವೇಶನದ ಒಂದು ಚಿತ್ರಣವನ್ನು ಮೂಡಿಸುವುದಕ್ಕೆ ಮಾತ್ರವೇ ಸುಮ್ಮನೆ ಕುಳಿತುಕೊಂಡಿರಬೇಕಾಗುತ್ತದೆ ಮಾತ್ರವಲ್ಲದೆ ಅವರಿಗೆ ಮಾತನಾಡುವ ಅಗತ್ಯವಿರುವುದಿಲ್ಲ.
6. **ಯುವ ಸಂಸತ್ತಿನ ಅಧಿವೇಶನದ ಅವಧಿ:–** ಯುವ ಸಂಸತ್ತಿನ ಅಧಿವೇಶನದ ಅವಧಿಯು ಒಂದು ಗಂಟೆ ಅವಧಿಯನ್ನು ಮೀರತಕ್ಕದಲ್ಲ ಮತ್ತು ಇದರಲ್ಲಿ, ಸುಮಾರು 20 ನಿಮಿಷಗಳ ಅವಧಿಯನ್ನು ಪ್ರಶ್ನೆಗಳಿಗೆ ಕಾಯ್ದಿರಿಸತಕ್ಕದ್ದು.
7. **ಯುವ ಸಂಸತ್ತಿನ ಅಧಿವೇಶನದಲ್ಲಿಯ ಚರ್ಚೆಯ ವಿಷಯ:–** ಪ್ರಶ್ನೋತ್ತರಗಳಿಗೆ ಅಥವಾ ಇತರ ಚರ್ಚೆಗೆ ಯಾವುದೇ ನಿರ್ದಿಷ್ಟ ವಿಷಯಗಳನ್ನು ಗೊತ್ತುಪಡಿಸಿರುವುದಿಲ್ಲ. ಆದಾಗ್ಯೂ, ಯುವ ಸಂಸತ್ತಿನಲ್ಲಿ ಕೇಳಲಾಗುವ ಪ್ರಶ್ನೆಗಳು, ಇತ್ತೀಚಿನ ಕ್ಷೇಮಾಭ್ಯುದಯ ಕಾರ್ಯ ಚಟುವಟಿಕೆಗಳು, ರಾಷ್ಟ್ರದ ರಕ್ಷಣೆ, ಸಾಮಾಜಿಕ ನ್ಯಾಯ, ಸಮಾಜ ಸುಧಾರಣೆಗಳು, ಆರ್ಥಿಕ ಅಭಿವೃದ್ಧಿ, ಶಿಕ್ಷಣ, ಮತೀಯ ಸಾಮರಸ್ಯ, ಆರೋಗ್ಯ, ವಿದ್ಯಾರ್ಥಿಗಳಲ್ಲಿ ಶಿಸ್ತು ಮುಂತಾದವುಗಳಿಗೆ ಸಂಬಂಧಿಸಿದ ವಿಷಯಗಳಾಗಿರುವುದು ಅಪೇಕ್ಷಣೀಯ.
8. **ಭಾಷೆ:–** ಭಾಗವಹಿಸುವವರು, ಕನ್ನಡ ಹಿಂದಿ ಅಥವಾ ಇಂಗ್ಲೀಷ್ ಅಥವಾ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ದಿಷ್ಟಪಡಿಸಬಹುದಾದಂಥ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಬಹುದು.
9. **ಯುವ ಸಂಸತ್ ನಡೆಯುವ ಸ್ಥಳ:–** ಯುವ ಸಂಸತ್ ಸ್ಪರ್ಧೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಒಂದು ಶಿಕ್ಷಣ ಸಂಸ್ಥೆಯು ತನ್ನದೇ ಆದ ಕಟ್ಟಡದಲ್ಲಿ ಅಥವಾ ಅವು ಇಚ್ಚಿಸುವಂಥ ಯಾವುದೇ ಇತರ ಸ್ಥಳದಲ್ಲಿ ನಡೆಸತಕ್ಕದ್ದು, ಸ್ಪರ್ಧೆಯಲ್ಲಿ ಭಾಗವಹಿಸುವ ಸಂಸ್ಥೆಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶನಾಲಯಕ್ಕೆ ಚರ್ಚೆಯ ವಿಷಯಗಳ ಮಾಹಿತಿಯೊಂದಿಗೆ ಸ್ಪರ್ಧೆ ನಡೆಸುವ ಸ್ಥಳದ ವಿವರಗಳನ್ನು ಸ್ಪರ್ಧೆಯ ದಿನಾಂಕಕ್ಕಿಂತ ಹತ್ತು ದಿನಗಳ ಮೊದಲೇ ತಿಳಿಸತಕ್ಕದ್ದು.
10. **ಬಹುಮಾನಗಳು:–** ಈ ಮುಂದಿನ ಬಹುಮಾನಗಳನ್ನು ಇರಿಸಲಾಗಿದೆ:–
    (i) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಗೆ ಪಾರಿತೋಷಕ (ಸಂಸದೀಯ ಪಾರಿತೋಷಕ).
    (ii) ಅರ್ಹತೆಯ ಆಧಾರದ ಮೇಲೆ ಸ್ಪರ್ಧೆಯಲ್ಲಿನ ಉತ್ತಮ ಗುಣಮಟ್ಟದ ಪ್ರದರ್ಶನಕ್ಕಾಗಿ ಮೊದಲ ಐದು ಸ್ಥಾನ ಪಡೆದ ಸಂಸ್ಥೆಗಳಿಗೆ ಟ್ರೋಫಿಗಳು.
    (iii) ಪ್ರತಿಯೊಂದು ಸಂಸ್ಥೆಯಿಂದ ಭಾಗವಹಿಸಿರುವ ವಿದ್ಯಾರ್ಥಿಗಳಿಂದ ಆಯ್ಕೆ ಮಾಡಲಾದವರಿಗೆ ಪದಕಗಳು/ಕಪ್ಪುಗಳು/ಪುಸ್ತಕಗಳ ರೂಪದಲ್ಲಿ ವೈಯಕ್ತಿಕ ಬಹುಮಾನಗಳು. ಬಹುಮಾನಗಳ ಒಟ್ಟು ಸಂಖ್ಯೆಯು ೮೦ನ್ನು ಮೀರತಕ್ಕದ್ದಲ್ಲ.
    (iv) ಇತರೆ ವೆಚ್ಚಗಳು.

ಸೂಚನೆ:– ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಥಳೀಯ ಪರಿಸ್ಥಿತಿಗಳಿಗೆ ಅನುಸಾರವಾಗಿ ಮೇಲಿನ ನಾಲ್ಕು ಬಾಬುಗಳಿಗೆ ಸಂಬಂಧಿಸಿದ ವೆಚ್ಚವನ್ನು ವ್ಯತ್ಯಾಸಗೊಳಿಸಬಹುದು. ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದಿಂದ ಮರುಸಂದಾಯವಾಗುವ ಗರಿಷ್ಠ ಮೊಬಲಗು ವಾರ್ಷಿಕವಾಗಿ ಯೋಜನೆಯ 15ನೇ ಕಂಡಿಕೆಯಲ್ಲಿ ಹೇಳಿರುವುದನ್ನು ಮೀರತಕ್ಕದ್ದಲ್ಲ.

ಪಾರಿತೋಷಕವು ಪರ್ಯಾಯ ಪಾರಿತೋಷಕವಾಗಿದ್ದು ಅದನ್ನು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ ಸಂಸ್ಥೆಯು ಒಂದು ವರ್ಷದವರೆಗೆ ಉಳಿಸಿಕೊಳ್ಳಬಹುದಾಗಿದೆ. ಆದಾಗ್ಯೂ, ಒಂದೇ ಸಂಸ್ಥೆಯು ಮೂರು ನಿರಂತರ ವರ್ಷಗಳು ಪಾರಿತೋಷಕವನ್ನು ಗೆದ್ದರೆ ಆ ಸಂಸ್ಥೆಯೇ ಅದನ್ನು ಖಾಯಂ ಆಗಿ ಇಟ್ಟುಕೊಳ್ಳುವುದು.

ಅನುಬಂಧ-II ರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಸಂಸ್ಥೆಗಳಿಗೆ ನೀಡತಕ್ಕದ್ದು.

ಅನುಬಂಧ-III ರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನವನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ನೀಡತಕ್ಕದ್ದು.

11. **ತೀರ್ಪುಗಾರರ ಸಮಿತಿ:–** ಪ್ರತಿಯೊಂದು ಸಂಸ್ಥೆಗಳ ಮೌಲ್ಯ ಮಾಪನಕ್ಕಾಗಿ ತೀರ್ಪುಗಾರರ ಸಮಿತಿಯನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ರಚಿಸತಕ್ಕದ್ದು ಹಾಗೂ ಅದರಲ್ಲಿ ಶಿಕ್ಷಣ ತಜ್ಞರು

ವಿಧಾನಸಭೆ/ಪರಿಷತ್ತಿನ ಸದಸ್ಯರು ಮತ್ತು ಸಂಸದೀಯ ಸಂಸ್ಥೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರರನ್ನು ಒಳಗೊಂಡಿರಬಹುದು. ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಒಬ್ಬ ಅಧಿಕಾರಿಯು ಸಮಿತಿಯ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

12. **ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಾಗ ಪರಿಗಣಿಸಬೇಕಾದ ಅಂಶಗಳು:-** ಸ್ಪರ್ಧೆಯಲ್ಲಿ ಸಾಧನೆಯನ್ನು ನಿರ್ಧರಿಸುವಾಗ ಸಮಿತಿಯು, ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರತಕ್ಕದ್ದು.

13. **ಮರು ಪ್ರದರ್ಶನ:-** ಪ್ರತಿ ವರ್ಷದ ಸ್ಪರ್ಧೆಗಳ ಮುಕ್ತಾಯದ, ಸಂದರ್ಭದಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ನಿರ್ಧರಿಸಬಹುದಾದ ಸ್ಥಳ ಮತ್ತು ದಿನಾಂಕದಂದು ಸ್ಪರ್ಧೆಯ ಬಹುಮಾನ ವಿತರಣೆಯ ಸಮಾರಂಭದಲ್ಲಿ. ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಯು ಮತ್ತೊಮ್ಮೆ ಪ್ರದರ್ಶನ ಮಾಡುವಂತೆ ಅಗತ್ಯಪಡಿಸಬಹುದು.

14. **ವರದಿ:-** ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ಸ್ಪರ್ಧೆಯು ಮುಗಿದ ಮೇಲೆ ಅನುಬಂಧ- ಙಗಿ ರಲ್ಲಿ ನಿಯಮಿಸಲಾದ ನಮೂನೆಯಲ್ಲಿ, ಅದರಲ್ಲಿ ಮೆರಿಟ್ ಆಧಾರದ ಮೇಲೆ, ಮೊದಲನೇ ಐದು ಸ್ಥಾನ ಪಡೆದ ಶಾಲೆಗಳೂ ಸೇರಿದಂತೆ ಭಾಗವಹಿಸಿದ ಎಲ್ಲಾ ಶಾಲೆಗಳ ಸಂಖ್ಯೆಯನ್ನು ಸೂಚಿಸಿ ವೈಯಕ್ತಿಕ ಬಹುಮಾನಗಳ ಸಂಖ್ಯೆ ಮುಂತಾದವುಗಳನ್ನು ಒಳಗೊಂಡ ಒಂದು ವರದಿಯನ್ನು ತಯಾರಿಸತಕ್ಕದ್ದು. ವರದಿಯನ್ನು ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಉಪ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ಪ್ರತಿನಿಧಿಯು ಸಹಿ ಮಾಡತಕ್ಕದ್ದು.

ನಿಯಮಿಸಲಾದ ನಮೂನೆಯಲ್ಲಿನ ವರದಿಯನ್ನು ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.

ಬಿ.ಜಿ. ಶ್ಯಾಮಲ
ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಪಿ. ಆರ್. 1838

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ 2010-11ನೇ ಸಾಲಿನ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಬೆಂಗಳೂರು ಅವರ ಪತ್ರ ಸಂ:ಕಗ್ಯಾಇ/ಯೋಜನೆ/1/2010-11 ದಿನಾಂಕ 12-04-2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ: 12-04-2010ರ ಪತ್ರದಲ್ಲಿ ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ರವರ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ 2010-11ನೇ ಸಾಲಿನಲ್ಲಿನ ಈ ಕೆಳಕಂಡ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಕ್ರ.ಸಂ.	ಹಮ್ಮಿಕೊಂಡಿರುವ ಯೋಜನೆಗಳು	ಆಯವ್ಯಯದಲ್ಲಿ ಒದಗಿಸಲಾದ ಅನುದಾನ (ಲಕ್ಷ ರೂ.ಗಳಲ್ಲಿ)
1	ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ ಪರಿಷ್ಕೃತ ಕನ್ನಡ ಆವೃತ್ತಿಯ ಆಂಗ್ಲ ಭಾಷಾಂತರದ ಸಂಪಾದನೆ ಮತ್ತು ಪ್ರಕಟಣೆ	ರೂ. 3.00
2	ಉಡುಪಿ ಜಿಲ್ಲಾ ಗ್ಯಾಸೆಟಿಯರ್ ಪರಿಷ್ಕೃತ ಕನ್ನಡ ಆವೃತ್ತಿಯ ಆಂಗ್ಲ ಭಾಷಾಂತರ – ಹೊರಗಿನ ವಿದ್ವಾಂಸರಿಗೆ ನೀಡಬೇಕಾದ ಸಂಭಾವನೆ.	ರೂ. 1.00
3	ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ ಆಂಗ್ಲ ಆವೃತ್ತಿಯನ್ನು ಕನ್ನಡ ಭಾಷೆಗೆ ಭಾಷಾಂತರಿಸಿ ಕರ್ನಾಟಕ ಕೈಪಿಡಿಯನ್ನು ಬಹುವರ್ಣೀಯವಾಗಿ ಪ್ರಕಟಿಸುವುದು.	ರೂ. 6.00
4	1982-1983ರಲ್ಲಿ ಪ್ರಕಟಿಸಿದ್ದ ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಎರಡು ಸಂಪುಟಗಳು) ಆಂಗ್ಲ ಆವೃತ್ತಿಯ ಪರಿಷ್ಕರಣೆ, ಇಂದೀಕರಣ ಹಾಗೂ ಮೂರು ಸಂಪುಟಗಳಲ್ಲಿ ಪ್ರಕಟಿಸಲು ಉದ್ದೇಶಿಸಿದೆ.	ರೂ. 5.50
5	ದಾವಣಗೆರೆ ಜಿಲ್ಲಾ ಗ್ಯಾಸೆಟಿಯರ್ ಕನ್ನಡ ಆವೃತ್ತಿಯ ರಚನೆ, ಸಂಪಾದನೆ ಮತ್ತು ಪ್ರಕಟಣೆ.	ರೂ. 3.00
6	ಇ – ಆಡಳಿತ ಯೋಜನೆಯಡಿ ಕಛೇರಿಯಲ್ಲಿರುವ ಗಣಕ ಯಂತ್ರಗಳನ್ನು ಬೈಬ್ಯಾಕ್ ಸ್ಕೀಮ್‌ನಲ್ಲಿ ಬದಲಾಯಿಸುವುದು.	ರೂ. 1.50

ಮೇಲೆ ಪ್ರಸ್ತಾಪಿಸಿರುವ ಕ್ರಮ ಸಂಖ್ಯೆ 1, 2, 3, 4 ಮತ್ತು 5ರಲ್ಲಿನ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 23 ಕಠಾಗೆ 2010, ಬೆಂಗಳೂರು, ದಿನಾಂಕ : 07-07-2010

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ 2010-11ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಿರುವ ಈ ಕೆಳಕಂಡ ಯೋಜನೆಗಳಿಗೆ ಸರ್ಕಾರದ ಆಡಳಿತಾತ್ಮಕ ಅನುಮತಿಯನ್ನು ನೀಡಿದೆ.

ಕ್ರ.ಸಂ.	ಹಮ್ಮಿಕೊಂಡಿರುವ ಯೋಜನೆಗಳು	ಆಯವ್ಯಯದಲ್ಲಿ ಒದಗಿಸಲಾದ ಅನುದಾನ (ಲಕ್ಷ ರೂ.ಗಳಲ್ಲಿ)
1	ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ ಪರಿಷ್ಕೃತ ಕನ್ನಡ ಆವೃತ್ತಿಯ ಆಂಗ್ಲ ಭಾಷಾಂತರದ ಸಂಪಾದನೆ ಮತ್ತು ಪ್ರಕಟಣೆ	ರೂ. 3.00
2	ಉಡುಪಿ ಜಿಲ್ಲಾ ಗ್ಯಾಸೆಟಿಯರ್ ಪರಿಷ್ಕೃತ ಕನ್ನಡ ಆವೃತ್ತಿಯ ಆಂಗ್ಲ ಭಾಷಾಂತರ – ಹೊರಗಿನ ವಿದ್ವಾಂಸರಿಗೆ ನೀಡಬೇಕಾದ ಸಂಭಾವನೆ.	ರೂ. 1.00
3	ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ ಆಂಗ್ಲ ಆವೃತ್ತಿಯನ್ನು ಕನ್ನಡ ಭಾಷೆಗೆ ಭಾಷಾಂತರಿಸಿ ಕರ್ನಾಟಕ ಕೈಪಿಡಿಯನ್ನು ಬಹುವರ್ಣೀಯವಾಗಿ ಪ್ರಕಟಿಸುವುದು.	ರೂ. 6.00
4	1982–1983ರಲ್ಲಿ ಪ್ರಕಟಿಸಿದ್ದ ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಎರಡು ಸಂಪುಟಗಳು) ಆಂಗ್ಲ ಆವೃತ್ತಿಯ ಪರಿಷ್ಕರಣೆ, ಇಂದೀಕರಣ ಹಾಗೂ ಮೂರು ಸಂಪುಟಗಳಲ್ಲಿ ಪ್ರಕಟಿಸಲು ಉದ್ದೇಶಿಸಿದೆ.	ರೂ. 5.50
5	ದಾವಣಗೆರೆ ಜಿಲ್ಲಾ ಗ್ಯಾಸೆಟಿಯರ್ ಕನ್ನಡ ಆವೃತ್ತಿಯ ರಚನೆ, ಸಂಪಾದನೆ ಮತ್ತು ಪ್ರಕಟಣೆ.	ರೂ. 3.00
	ಒಟ್ಟು	**ರೂ. 18.50**

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10–07–1996ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ. ಆರ್. 1839

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಮಲ್ಲೇಶಯ್ಯ, ಕೆ.ಎ.ಎಸ್. (ಕಿರಿಯ ಶ್ರೇಣಿ), ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಬೀದರ್ ಇವರ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡುವ ಕುರಿತು.

ಓದಲಾಗಿದೆ : 1) ದಿನಾಂಕ 12–06–2007ರ ನೋಟೀಸು ಸಂಖ್ಯೆ: ಸಿಆಸುಇ 060 ಎಸ್‌ಇಎನ್ 07.

2) ಶ್ರೀ ಮಲ್ಲೇಶಯ್ಯ, ಕೆ.ಎ.ಎಸ್. (ಕಿರಿಯ ಶ್ರೇಣಿ), ವಿಶೇಷ ಭೂ ಸ್ವಾಧೀನಾಧಿಕಾರಿ, ಹೇಮಾವತಿ ನಾಲಾ ವಲಯ, ತುಮಕೂರು ಇವರ ದಿನಾಂಕ: 01–02–2008ರ ಲಿಖಿತ ರಕ್ಷಣಾತ್ಮಕ ಹೇಳಿಕೆ.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಕಾರಣ ಕೇಳುವ ನೋಟೀಸಿನಲ್ಲಿ ಶ್ರೀ ಮಲ್ಲೇಶಯ್ಯ, ಕೆ.ಎ.ಎಸ್. (ಕಿರಿಯ ಶ್ರೇಣಿ), ಅಧಿಕಾರಿ ಇವರು ವಿಶೇಷ ಭೂ ಸ್ವಾಧೀನಾಧಿಕಾರಿ, ಬೀದರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಕಾರಂಜಾ ಯೋಜನೆಯ ಬಲದಂಡೆ ಕಾಲುವೆ ನಿರ್ಮಾಣಕ್ಕಾಗಿ ಭಾಲ್ಕಿ ತಾಲ್ಲೂಕಿನ ಕೆರೂರ ಮತ್ತು ಬಾಳೂರು ಗ್ರಾಮಗಳಲ್ಲಿನ ಕೆಲವು ಭೂ ಸ್ವಾಧೀನ ಪ್ರಕರಣಗಳಲ್ಲಿ ಶೇಕಡ 80 ರಷ್ಟು ಮುಂಗಡ ಪರಿಹಾರ ಧನವನ್ನು ನಿಯಮಬಾಹಿರವಾಗಿ ವಿತರಿಸಿರುವಲ್ಲಿ ಎಸಗಿರುವ ಕರ್ತವ್ಯ ಲೋಪ ಹಾಗೂ ದುರ್ನಡತೆ ಕುರಿತಂತೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 11 ರಡಿ ದೋಷಾರೋಪಣ ಪಟ್ಟಿಯನ್ನು ಜಾರಿಗೊಳಿಸಿ ಶಿಸ್ತು ಕ್ರಮವನ್ನು ಪ್ರಾರಂಭಿಸಲಾಯಿತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಶ್ರೀ ಮಲ್ಲೇಶಯ್ಯ ರವರು ಲಿಖಿತ ರಕ್ಷಣಾತ್ಮಕ ಹೇಳಿಕೆ ಸಲ್ಲಿಸಿ, ಯೋಜನೆಯು ಕಾಲಮಿತಿ ಯೋಜನೆಯಾಗಿದ್ದು, ತ್ವರಿತಗತಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಮುಗಿಸಬೇಕಿತ್ತೆಂದು ಶೇಕಡ 80 ರಷ್ಟು ಪರಿಹಾರಧನ ನೀಡದಿದ್ದಲ್ಲಿ ಕಾಮಗಾರಿ ನಡೆಸಲು ಅಡಚಣೆ ಮಾಡುವುದಾಗಿ ಸಂತ್ರಸ್ಥ ರೈತರು ಲಿಖಿತ ಮನವಿ ಸಲ್ಲಿಸಿದ್ದು, ಕಾನೂನು ಸುವ್ಯವಸ್ಥೆಯ ದೃಷ್ಟಿಯಿಂದ ಶೇಕಡ 80 ರಷ್ಟು ಪರಿಹಾರ ಧನವನ್ನು ಪಾವತಿಸಲು ಅವಕಾಶ ಇರುವುದರಿಂದಲೂ, ಉಪ ನೋಂದಣಾಧಿಕಾರಿಯವರ ಮಾರುಕಟ್ಟೆ ದರವನ್ನು ನಿಗಧಿಪಡಿಸಿ ಯೋಜನೆಯ ಯಶಸ್ವಿ ಅನುಷ್ಠಾನದ ಹಿತದೃಷ್ಠಿಯಿಂದ ಶೇಕಡ 80 ರಷ್ಟು ಪರಿಹಾರಧನ ಮುಂಗಡವಾಗಿ ವಿತರಿಸಲಾಗಿದೆ. ಇದರಲ್ಲಿ ಯಾವುದೇ ನಿಯಮಗಳ ಉಲ್ಲಂಘನೆಯಾಗಿರುವುದಿಲ್ಲವೆಂದು ತಿಳಿಸುತ್ತಾ, ಸಮಜಾಯಿಷಿಯನ್ನು ಒಪ್ಪಿಕೊಂಡು ತನ್ನ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡುವಂತೆ ಮನವಿ ಮಾಡಿರುತ್ತಾರೆ. ಶ್ರೀ ಮಲ್ಲೇಶಯ್ಯ ಇವರ ರಕ್ಷಣಾತ್ಮಕ ಹೇಳಿಕೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಕಂದಾಯ ಇಲಾಖೆಯ ಅಭಿಪ್ರಾಯ ಪಡೆದು, ಸರ್ಕಾರವು, ಸದರಿಯವರು ಸಲ್ಲಿಸಿದ ರಕ್ಷಣಾತ್ಮಕ ಹೇಳಿಕೆಯನ್ನು ಅಂಗೀಕರಿಸುತ್ತಾ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 017 ಕೆಇವಿ 08, ಬೆಂಗಳೂರು, ದಿನಾಂಕ : 29ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು, ಶ್ರೀ ಮಲ್ಲೇಶಯ್ಯ, ಕೆ.ಎ.ಎಸ್. (ಕಿರಿಯ ಶ್ರೇಣಿ), ಅಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಬೀದರ್ (ಪ್ರಸ್ತುತ ವಿಶೇಷ ಭೂ ಸ್ವಾಧೀನಾಧಿಕಾರಿ, ಹೇಮಾವತಿ ನಾಲಾ ವಲಯ, ತುಮಕೂರು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ) ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ

11 ರಡಿ ದೋಷಾರೋಪಣ ಪಟ್ಟಿಯೊಂದಿಗೆ ದಿನಾಂಕ: 12-06-2007 ರಂದು ಜಾರಿಗೊಳಿಸಿದ ನೋಟೀಸಿಗೆ ಇವರು ದಿನಾಂಕ: 01-02-2008 ರಂದು ಸಲ್ಲಿಸಿದ ಲಿಖಿತ ರಕ್ಷಣಾತ್ಮಕ ಹೇಳಿಕೆಯನ್ನು ಅಂಗೀಕರಿಸಿ, ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡಲು ನಿರ್ಣಯಿಸಿದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಶ್ರೀಯುತರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-2)

ಪಿ. ಆರ್. 1840

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಚ್.ಎನ್. ಹೊನ್ನಪ್ಪ, ಪಿ.ಎಸ್.ಐ., ಆಗುಂಬೆ ಪೋಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೋಲೀಸ್ ಅಧೀಕ್ಷಕರು, ದಾವಣಗೆರೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ (5)ಇವಿ/ಪಿಆರ್/31/2009 ಓ.ಬಿ: 329/09 ದಿನಾಂಕ 20-04-2009.
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೋಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ ಇವರ ಆದೇಶ ಸಂಖ್ಯೆ: 07/ಅಪೀಲು/ಸಿಬ್ಬಂದಿ-2/2009-10 ಓ.ಬಿ. 44/2009-10 ದಿನಾಂಕ 25-09-2009.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 31-10-2009.
4) ಮಹಾ ನಿರ್ದೇಶಕರು ಮತ್ತು ಅರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)56/2009-10 ದಿನಾಂಕ 05-01-2010.
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 9 ಸಿಎನ್‌ಎಸ್ 10 ದಿನಾಂಕ 10-06-2010.

ಪ್ರಸ್ತಾವನೆ :

ಶ್ರೀ ಎಚ್.ಎನ್. ಹೊನ್ನಪ್ಪ, ಪಿ.ಎಸ್.ಐ., ಇವರು ದಾವಣಗೆರೆ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ತೋರಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೋಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

> "ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಾಹೆ 01/2009ರಲ್ಲಿ ಸ್ವೀಕೃತವಾದ ನಾನ್ ಬೇಲೆಬಲ್ ವಾರೆಂಟ್‌ಗಳ ಮಾಹಿತಿಯನ್ನು ದಿನಾಂಕ 12-02-2009 ರಂದು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ನಡೆಸಲಾದ ಮಾಸಿಕ ಅಪರಾಧ ಸಭೆಗೆ ನೀಡದೇ ಹಾಗೂ ನಿಮ್ಮ ಮೇಲಾಧಿಕಾರಿಗಳಿಗೆ 01-2009ರ ಮಾಹೆಯಲ್ಲಿ ಯಾವುದೇ ಎನ್‌ಬಿಡಬ್ಲ್ಯೂ ನ್ಯಾಯಾಲಯದಿಂದ ಸ್ವೀಕೃತವಾಗಿರುವುದಿಲ್ಲವೆಂದು ಸುಳ್ಳು ಮಾಹಿತಿ ನೀಡಿ ನಿಮ್ಮ ಕರ್ತವ್ಯದಲ್ಲಿ ಶಿಸ್ತಿನ ಇಲಾಖೆ ಪೊಲೀಸ್ ಅಧಿಕಾರಿಗೆ ಸಲ್ಲದ ಘೋರ ದುರ್ನಡತೆಯನ್ನು ಹಾಗೂ ಅತೀವ ಕರ್ತವ್ಯ ನಿರ್ಲಲಕ್ಷ್ಯತನ ಮತ್ತು ಘೋರ ಬೇಜವಾಬ್ದಾರಿತನ ಪ್ರದರ್ಶಿಸಿದ ಆರೋಪಗಳು."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ 20-04-2009ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಧಕ್ಕೆಯಾಗದಂತೆ ಒಂದು ವರ್ಷಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು ಪೂರ್ವ ವಲಯ, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ 25-09-2009ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಶಿಸ್ತು ಪ್ರಾಧಿಕಾರದ ದಂಡನೆಯನ್ನು ಭಾಗಶಃ ಮಾರ್ಪಡಿಸುವ ಕುರಿತಂತೆ ಕರ್ನಾಟಕ ಲೋಕಸೇವಾ ಆಯೋಗವನ್ನು ಸಮಾಲೋಚಿಸಿದ್ದು, ಸರ್ಕಾರವು ಪ್ರಸ್ತಾಪಿಸಿರುವ ದಂಡನೆಯು ಲಘುವಾಗಿ ಕಂಡು ಬಂದಿರುವುದರಿಂದ ಶಿಸ್ತು ಪ್ರಾಧಿಕಾರದ ದಂಡನೆಗೆ ಸಹಮತಿ ಸೂಚಿಸಿದ ಹಿನ್ನೆಲೆಯಲ್ಲಿ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 197 ಪೊಸಿಅ 2009, ಬೆಂಗಳೂರು, ದಿನಾಂಕ : 9ನೇ ಜುಲೈ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963 ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಚ್.ಎನ್. ಹೊನ್ನಪ್ಪ, ಪಿ.ಎಸ್.ಐ., ಆಗುಂಬೆ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ. ಆರ್. 1841

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಕೋಲಾರ ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆ (ಪರಿಷ್ಕೃತ-1) ಗೆ ಸರ್ಕಾರದ ಅಂತಿಮ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ನಅಇ 543 ಮೈಅಪ್ರಾ 2007, ದಿನಾಂಕ : 23-10-2007.
2. ಕೋಲಾರ ನಗರ ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ : ಕೋನಪ್ರಾ/ ವ್ಯಾಅ.ಯೋ/ಅಂತಿಮ/24/2010-11, ದಿನಾಂಕ : 29-4-2010.
3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಏಕ ಕಡತ ಸಂಖ್ಯೆ : ನಗ್ರಾಯೋ (22)/ಉನಿ (ಯೋವಿ)ಕೋಲಾರ/ಮಯೋ(ಪ-1)2010-11, ದಿನಾಂಕ : 29-6-2010 ರಲ್ಲಿ ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕೋಲಾರ ನಗರ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ-1) ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರವು ಕೋಲಾರ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾ ಯೋಜನೆ (ಪರಿಷ್ಕೃತ-1) ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ರನ್ವಯ ಅಗತ್ಯ ಕ್ರಮ ಜರುಗಿಸಿ ಮಹಾ ಯೋಜನೆಯ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ಕೋಲಾರ ನಗರ ಜನಸಂಖ್ಯೆಯು 2021 ರಲ್ಲಿ 2,30,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ, ಮಹಾ ಯೋಜನೆಯನ್ನು ತಯಾರಿಸಲಾಗಿದೆ. ಕೋಲಾರ ನಗರದ ಸ್ಥಳೀಯ ಯೋಜನಾ ಪ್ರದೇಶದ 6995.00 ಹೆಕ್ಟೇರ್ ಪ್ರದೇಶದಲ್ಲಿ 2044.55 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12 ರಲ್ಲಿನ ಅಂಶಗಳನ್ನು ಪರಿಗಣಿಸಿ, ನಗರದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ 2044.55 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 1038.38 ಹೆಕ್ಟೇರ್ (ಶೇ 50.79), ವಾಣಿಜ್ಯಕ್ಕಾಗಿ 78.61 ಹೆಕ್ಟೇರ್ (ಶೇ. 0384), ಕೈಗಾರಿಕೆಗಾಗಿ 155.14 ಹೆಕ್ಟೇರ್ (ಶೇ. 7.59), ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 156.98 ಹೆಕ್ಟೇರ್ (ಶೇ. 7.67), ಉದ್ಯಾನವನ/ ಬಯಲು ಜಾಗಗಳಿಗೆ 252.46 ಹೆಕ್ಟೇರ್ (ಶೇ. 12.36), ಸಾರ್ವಜನಿಕ ಉಪಯುಕ್ತತೆಗಾಗಿ 11.78 ಹೆಕ್ಟೇರ್ (ಶೇ. 0.57) ಹಾಗೂ ಸಾರಿಗೆ/ಸಂಪರ್ಕ ವಲಯಕ್ಕೆ 351.20 ಹೆಕ್ಟೇರ್ (ಶೇ. 17.18) ಪ್ರದೇಶವನ್ನು ನಿಗದಿಪಡಿಸಲಾಗಿದೆ ಮಹಾ ಯೋಜನೆ (ಪರಿಷ್ಕೃತ-1) ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಮಹಾ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(3) ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ನಅಇ 208 ಬೆಂರೂಪ್ರಾ 2010, ಬೆಂಗಳೂರು, ದಿನಾಂಕ : 9-8-2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೋಲಾರ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆ (ಪರಿಷ್ಕೃತ-1) ನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(3) ರನ್ವಯ ಅಂತಿಮ ಅನುಮೋದನೆಯನ್ನು ನೀಡಲಾಗಿದೆ.

ಮಹಾ ಯೋಜನೆ (ಪರಿಷ್ಕೃತ-1) ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಎಂ.ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಕೋಲಾರ ನಗರದ ಮಹಾಯೋಜನೆ (ಪರಿಷ್ಕೃತ-1) ಅಂತಿಮ ಅಂಕಿ ಅಂಶಗಳ ಸ್ಥೂಲ ನೋಟ

ಕ್ರಸಂ.	ಪರಿಶೀಲಿಸಬೇಕಾದ ವಿವರಗಳು	ವಿವರಣೆ
1	ಸ್ಥಳೀಯ ಯೋಜನಾ ಪ್ರದೇಶವನ್ನು ಸರ್ಕಾರವು ಘೋಷಿಸಿರುವ ವಿವರಗಳು	ಆದೇಶ ಸಂಖ್ಯೆ : ಹೆಚ್ಎಂವಿ : 8 : ಟಿಟಿಪಿ : 77, ದಿನಾಂಕ : 22-7-1977
2	ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ	69.95 ಚ.ಕಿ.ಮೀ.
3	ಕೆ.ಟಿ.ಸಿಪಿ. ಕಾಯ್ದೆಯಡಿಯಲ್ಲಿ ಕಲಂ 13(1) ರಂತೆ ಕ್ರಮ	ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ : 13-12-2007 ರಂದು ಪ್ರಕಟಿಸಿದೆ
4	2001 ಜನಗಣತಿಯಂತೆ ಸದರಿ ಪಟ್ಟಣದ ಜನಸಂಖ್ಯೆ	1,13,907
5	2021 ಕ್ಕೆ ಪ್ರಸ್ತಾಪಿಸಲಾದ ಜನಸಂಖ್ಯೆ	2,30,000
6	ಪ್ರತಿ 10 ವರ್ಷಕ್ಕೊಮ್ಮೆ ಜನಸಂಖ್ಯೆ ಹೆಚ್ಚಳ ಪ್ರಮಾಣ	36.88%
7	ಪ್ರತಿ ಹೆಕ್ಟೇರಿಗೆ ಪರಿಗಣಿಸಲಾದ ಜನಸಾಂದ್ರತೆ	113 pph
8	ಅಭಿವೃದ್ಧಿ ಹೊಂದಿರುವ ಒಟ್ಟು ಪ್ರದೇಶ	933.62 ಹೆಕ್ಟೇರ್

9	ನಗರೀಕರಣ ಎಲ್ಲೆಯವರೆಗೆ ಪ್ರಸ್ತಾಪಿಸಲಾದ ಒಟ್ಟು ವಿಸ್ತೀರ್ಣ	2044.55 ಹೆಕ್ಟೇರ್
10	ಸರ್ಕಾರದಿಂದ ಮಹಾ ಯೋಜನೆಗೆ ಅಂತಿಮ ಅನುಮೋದನೆಗೊಂಡಿರುವ ಬಗ್ಗೆ ವಿವರಗಳು	ಸಂಖ್ಯೆ : ಹೆಚ್‌ಯುಡಿ 18 ಟಿಟಿಪಿ 95, ದಿನಾಂಕ : 7-3-1996
11	ವರದಿಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಮಾಹಿತಿಯನ್ನು ಅಳವಡಿಸಲಾಗಿದೆ. ಅ) ಭೂಕಂಪದ ಕುರಿತು (Safety measure against earth quake) ಆ) ಅಂಗವಿಕಲರಿಗೆ ಸೌಲಭ್ಯಗಳನ್ನು ಒದಗಿಸುವ ಕುರಿತು (Facility for Physically Handicapped) ಇ) ಮಳೆ ನೀರು ಸಂಗ್ರಹಣೆ ಕುರಿತು (Rain Water Harvesting) ಈ) ಸೂರ್ಯಕಿರಣಗಳಿಂದ ನೀರು ಕಾಯಿಸುವ ಕುರಿತು (Solar water heater)	 ಅಳವಡಿಸಿದೆ ಅಳವಡಿಸಿದೆ ಅಳವಡಿಸಿದೆ ಅಳವಡಿಸಿದೆ
12	ಭೂ ಬಳಕೆ ವಿವರಗಳು (ನಕ್ಷೆಗಳನ್ನು ಲಗತ್ತಿಸಿದೆ)	

ಕ್ರಸಂ.	ಭೂ ಉಪಯೋಗ	ಹಾಲಿ ಭೂ ಬಳಕೆ 2007 (ಹೆಕ್ಟೇರ್‌ಗಳಲ್ಲಿ)		ಉದ್ದೇಶಿತ ಭೂ ಬಳಕೆ 2021 (ಹೆಕ್ಟೇರ್‌ಗಳಲ್ಲಿ)	
		ವಿಸ್ತೀರ್ಣ (ಹೆ)	%	ವಿಸ್ತೀರ್ಣ (ಹೆ)	%
1	ವಸತಿ	274.23	29.38	1038.38	50.79
2	ವಾಣಿಜ್ಯ	25.50	2.75	78.61	3.84
3	ಕೈಗಾರಿಕೆ	41.56	4.45	155.14	7.59
4	ಸಾರ್ವಜನಿಕ/ಅರೆ ಸಾರ್ವಜನಿಕ	69.07	7.40	156.98	7.67
5	ಉದ್ಯಾನವನ/ಆಟದ ಮೈದಾನ/ಬಯಲು ಪ್ರದೇಶ	24.47	2.62	252.46	12.36
6	ಸಾರ್ವಜನಿಕ ಉಪಯುಕ್ತತೆ	10.69	1.14	11.78	0.57
7	ಸಾರಿಗೆ ಮತ್ತು ಸಂಚಾರ	257.24	27.55	351.20	17.18
	ಒಟ್ಟು			**20.44.55**	**100.00**
8	ಖಾಲಿ ಜಾಗ	226.40	24.24	–	
9	ಜಲಾವೃತ ಪ್ರದೇಶ	4.46	0.47	346.40	
10	ವ್ಯವಸಾಯದ ಜಮೀನು	–	–	4604.05	
	ಒಟ್ಟು	**933.62**	**100**	**6995.00**	

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಎಂ.ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಪಿ. ಆರ್. 2233

ಸಹಕಾರ ಸಚಿವಾಲಯ

ವಿಷಯ : ದಿನಾಂಕ : 30-9-2010 ರೊಳಗೆ ನಡೆಸಬೇಕಾಗಿರುವ ಎಲ್‌ಆರ್‌ಡಿಇ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ ಆಡಳಿತ ಸಮಿತಿಯ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಸಿಒ 22 ಸಿಎಲ್‌ಎಂ 2010, ದಿನಾಂಕ : 9-2-2010.

2. ಕಾರ್ಯದರ್ಶಿ, ಎಲ್‌ಆರ್‌ಡಿಇ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇವರ ಪತ್ರ ಸಂಖ್ಯೆ : ಎಲ್.ಆರ್.ಡಿ.ಇ. : ಹೆಚ್‌ಸಿಎಸ್/ಚುನಾವಣೆ/59/2010-11, ದಿನಾಂಕ : 10-8-2010.

ಪ್ರಸ್ತಾವನೆ :

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(2) ರಡಿ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಎಲ್‌ಆರ್‌ಡಿಇ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ ಆಡಳಿತ ಸಮಿತಿಯ ಚುನಾವಣೆಯನ್ನು ದಿನಾಂಕ : 30-9-2010 ರಂದು ಮುಂದೂಡಿ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ (2) ರ ಅಧ್ಯಕ್ಷರ ಪತ್ರದಲ್ಲಿ ಮೇಲ್ಕಂಡ ಸಹಕಾರ ಸಂಘ ನಿಯಮಿತ ಇವರ ತಂತ್ರಜ್ಞರು ಮತ್ತು ವಿಜ್ಞಾನಿಗಳು ರಾಷ್ಟ್ರಾದ್ಯಂತ ಅನೇಕ ಕಾರ್ಯಕ್ರಮಗಳು ಇರುವುದರಿಂದ ಚುನಾವಣೆಯನ್ನು ದಿನಾಂಕ : 31-3-2011 ರವರೆಗೆ ಮುಂದೂಡಲು ಕೋರಿರುತ್ತಾರೆ.

ಸದರಿ ಪ್ರಸ್ತಾವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಸಿಒ 152 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ : 13-8-2010.

ಮೇಲಿನ ಪರಿಸ್ಥಿತಿಯಲ್ಲಿ ಎಲ್‌ಆರ್‌ಡಿಇ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ

ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39(ಎಫ್) ಅನ್ನು ಮಾರ್ಪಾಟು ಮಾಡಿ ಸದರಿ ಸಂಘದ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ : 31-3-2011ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ : ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 31-3-2011 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶ ಮೂಲಕ ಮಾರ್ಪಾಡು ಮಾಡುವಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಆರ್.ಎಸ್. ನೂಲಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ. ಆರ್. 2234

ಸಹಕಾರ ಸಚಿವಾಲಯ

ವಿಷಯ : ದಿನಾಂಕ : 30-9-2010 ರೊಳಗೆ ನಡೆಸಬೇಕಾಗಿರುವ ಕರ್ನಾಟಕ ದೂರ ಸಂಪರ್ಕ ಇಲಾಖೆ ನೌಕರರ ಸಹಕಾರ ಸಂಘ ನಿ., ಬೆಂಗಳೂರು ಇದರ ಆಡಳಿತ ಸಮಿತಿಯ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಸಿಒ 219 ಸಿಎಲ್ಎಂ 2010, ದಿನಾಂಕ : 8-1-2010.

2. ಅಧ್ಯಕ್ಷರು, ಕರ್ನಾಟಕ ದೂರ ಸಂಪರ್ಕ ಇಲಾಖೆ ನೌಕರರ ಸಹಕಾರ ಸಂಘ ನಿ., ಬೆಂಗಳೂರು ಇವರ ಪತ್ರ ದಿನಾಂಕ : 1-8-2010.

ಪ್ರಸ್ತಾವನೆ :

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(2) ರಡಿ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ದೂರ ಸಂಪರ್ಕ ಇಲಾಖೆ ನೌಕರರ ಸಹಕಾರ ಸಂಘ ನಿ., ಬೆಂಗಳೂರು ಇದರ ಆಡಳಿತ ಸಮಿತಿಯ ಚುನಾವಣೆಯನ್ನು ದಿನಾಂಕ : 30-9-2010 ರಂದು ಮುಂದೂಡಿ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ (2) ರ ಅಧ್ಯಕ್ಷರ ಪತ್ರದಲ್ಲಿ ಮೇಲ್ಕಂಡ ಸಹಕಾರ ಸಂಘವು ಮೈಸೂರು ಮತ್ತು ಬೆಂಗಳೂರಿನಲ್ಲಿ ವಿವಿಧ ಬಡಾವಣೆಗಳನ್ನು ನಿರ್ಮಿಸಿದ್ದು ಸದರಿ ನಿವೇಶನಗಳನ್ನು ಶೇವಣಿದಾರರಿಗೆ ಹಂಚಿಕೆ ಮಾಡಲು ಅನುವಾಗುವಂತೆ ಆಡಳಿತ ಸಮಿತಿಯ ಚುನಾವಣೆಯನ್ನು ದಿನಾಂಕ : 31-3-2011 ರವರೆಗೆ ಮುಂದೂಡಲು ಅನುಮತಿ ಕೋರಿರುತ್ತಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಸಿಒ 154 ಸಿಎಲ್ಎಂ 2010, ಬೆಂಗಳೂರು, ದಿನಾಂಕ : 13-8-2010.

ಮೇಲಿನ ಪರಿಸ್ಥಿತಿಯಲ್ಲಿ ಕರ್ನಾಟಕ ದೂರ ಸಂಪರ್ಕ ಇಲಾಖೆ ನೌಕರರ ಸಹಕಾರ ಸಂಘ ನಿ., ಬೆಂಗಳೂರು ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(4) ಮತ್ತು 121ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39(ಎಫ್) ಅನ್ನು ಮಾರ್ಪಾಟು ಮಾಡಿ ಸದರಿ ಸಂಘದ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ : 31-3-2011ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ : ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 31-3-2011 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶ ಮೂಲಕ ಮಾರ್ಪಾಡು ಮಾಡುವಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಆರ್.ಎಸ್. ನೂಲಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ. ಆರ್. 2235

INFRASTRUCTURE DEVELOPMENT SECRETARIAT

Sub : Development of SH-132 on PPP basis.

Ref : G.O. No. ID 115 ITS 2008, dt. 17-7-2009.

PREAMBLE :

SH-132 in the District of Bellary connects the State of Andhra Pradesh and Karnataka & passes through the proposed Greenfield Airport at Sanganakallu. The project road stretch of 25.17 kms provides access to the Greenfield airport at Bellary & serves as gateway to tourism location of world heritage site at HAMPI and also to the State border.

2. The following actions have been initiated in the direction of project development and its implementation :-

a) KSHIP was appointed as nodal agency, iDeCK as transaction advisor and M/s Scotwilson as the technical consultant.

b) Tenders were invited through-e-procurement platform under single stage 2 cover system of bidding.

c) A letter was addressed to DEA seeking sanction of VGF. However, based on the traffic study and the estimated cost, the DEA did not accept the proposal. Accordingly, the proposal was modified to 4 laning of SH-132 from Bellary city to airport, 2 laning upto AP border and resurface of road in AP limits. It was advised by the DEA to tackle the stretch of the road upto the State border only. A. VGF of 20% amounting to Rs. 33.46 crores was granted by DEA, and the remaining Rs. 15.54 crores was to be met out of State funds. The proposal was based on tolling of the Road and accordingly, tenders were again invited for the revised proposal under a single stage 2 cover system bidding process.

d) On the due date of the bid, there was no response to the tender.

e) Hence, it was decided to take forward the project by through the Annuity framework, with a revised total cost of the project of Rs. 158.00 crores.

3. Tenders were invited through the e-procurement portal by uploading RFP to the website. A pre-bid meeting was also held and the last date for submission of the bids was 26-6-2010. In response to this, 13 bidders participated of which one bid not qualify as the bidder had not uploaded the documents in the e-portal.

4. A Tender Scrutiny Committee (TSC) was constituted to take up the evaluation of the bids vide G.O. No. IDD 115 ITS 2008, dated 25-6-2010. The TSC has evaluated 12 bids and based on the evaluation, the offer of M/s SEW Infrastructure Ltd., is found to be the best offer indicating an annuity of Rs. 12.60 crores (Twelve Crores sixty lakhs only) payable biannually for the entire concession period excluding the construction period. The TSC has recommended to Govt to accept the offer of M/s SEW Infrastructure Ltd., amounting to Rs. 12.60 crores payable biannually for the entire concession period of 15 years excluding the construction period. The proposal has been examined in detail at the Government level and hence this order.

GOVERNMENT ORDER NO. IDD 115 ITS 2008, BANGALORE DATED: 12-8-2010.

The State Government, after careful consideration of the above mentioned circumstances, is pleased to :-

1) Ratify the various actions taken to promote the project under Annuity route.

2) Take forward the project of development of SH-132 under Annuity route/ framework.

3) Accept the offer of M/s SEW Infrastructure Ltd., amounting to Rs. 12.60 crores payable biannually and the payment would commence from COD. The first Annuity payment date shall be the date falling after 6 calendar months from COD.

4) Issue Letter of Award to M/s SEW Infrastructure Ltd., to implement the project.

By Order and in the name of the Governor of Karnataka,

(R. Shivalingaiah)

Under Secretary to Govt. PPP Cell,

P.R.2236 Infrastructure Development Department.

INFRASTRUCTURE DEVELOPMENT SECRETARIAT

Sub : Selection of Technical Consultant for preparation of DPR of Mono Rail/ LRT project in Bangalore-Constitution of Tender Scrutiny Committee.

Read : 1. The Karnataka Transparency in Public Procurement Rules 2000.

2. G.O. No. ನ.ಅ.ಇ. 320. ಬಿ.ಎಂ.ಆರ್. 2008, dated 3-4-2009.

PREAMBLE :

In the G.O. dated 3-4-2009 read at Sl.No. (2) above, sanction has been accorded appointing BARL as special purpose vehicle to undertake the MonoRail projects in Bangalore and any part of the State subject to certain conditions mentioned therein.

As per the said Government order, BARL has taken the role of a nodal agency to under take the procurement activities to procure consultancy to prepare DPR for the MonoRail/LRT systems and BARL has invited bids in the Local dailies for selection of a technical consultant indicating the schedule of bidding as hereunder ;

i) Bid due date : 16-8-2010 by 1600 hours IST

ii) Technical Bid opening date : 16-8-2010 by 1700 hours IST

In terms of Karnataka Transparency in Public Procurement Rules 2000, the tender accepting authority is required to appoint the "Tender Scrutiny Committee" to undertake evaluation of the bids received for there financial capacity and to advise the Tender accepting authority/Procurement entiry about the preferred bidder. Accordingly, it is proposed to constitute a Tender Scrutiny Committee as required under the KTPP Act.

Hence this order.

GOVERNMENT ORDER NO. IDD 90 ITS 2010, BANGALORE DATED: 16-8-2010.

In the circumstances, explained in the preamble, a Tender Scrutiny Committee (TSC) is constituted to undertake the scrutiny of bids received with the following members :

Shri C. Jayaram-Director (Tech), BARL, Khanija Bhavan, Bangalore.

Shri K.L. Lokanatha-Director PPP cell Vikasa Soudha, Bangalore.

Shri Rabindra K Sahu-PPP Expert PPP cell

Shri Hiremath-Executive Engineer, BARL, Khanija Bhavan, Bangalore.

2. The Tender Scrutiny Committee shall carry out scrutiny of the tenders strictly in accordance with evaluation criteria indicated in RFP document and in accordance with the provisions contained in the KTPP Act and rules.

3. The Tender scrutiny committee will seal and witness all the bids received in physical mode and open the same publicly on the due dates.

4. The Tender Scrutiny Committee shall ensure the confidentiality of the process of tender evaluation.

By Order and in the name of the Governor of Karnataka,

(R. Shivalingaiah)

Under Secretary to Govt. PPP Cell,

P.R.2237 Infrastructure Development Department.

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಪಿಪಿಪಿ ಕೋಶಕ್ಕೆ ಅಗತ್ಯ ಸಾಮಗ್ರಿ ಖರೀದಿಸಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಮೂಅಇ 05 ಯುಐಪಿ 2006 (ಪಿ), ದಿನಾಂಕ : 18–6–2007.
2. ಸರ್ಕಾರದ ಆದೇಶ ಸಂಖ್ಯೆ : ಮೂಅಇ 77 ಮೂಇವಿ 2007, ದಿನಾಂಕ : 25–10–2007.
3. ಸರ್ಕಾರದ ಆದೇಶ ಸಂಖ್ಯೆ : ಮೂಅಇ 80 ಮೂತಾಂವಿ 2008, ದಿನಾಂಕ : 23–10–2008.
4. ಸರ್ಕಾರದ ಆದೇಶ ಸಂಖ್ಯೆ : ಮೂಅಇ 87 ಮೂಇವಿ 2009, ದಿನಾಂಕ : 26–8–2009.
5. ಸಿ.ಎಫ್.ಓ ಹಾಗೂ ಕಂಪನಿ ಸೆಕ್ರೆಟರಿ, ಐಡೆಕ್‌ರವರ ಪತ್ರ ಸಂ. ಐಡೆಕ್/2010–11/633, ದಿನಾಂಕ : 14–7–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂಖ್ಯೆ (1) ರ ಆದೇಶದಲ್ಲಿ ಪ್ರಧಾನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ನಿರ್ದೇಶಕರು ಹಾಗೂ ತಜ್ಞರನ್ನು ಒಳಗೊಂಡಂತೆ ಪಿಪಿಪಿ ಕೋಶವನ್ನು ರಚಿಸಲು ಅನುಮೋದನೆಯನ್ನು ನೀಡಲಾಗಿದೆ.

2. ಮೇಲೆ ಓದಲಾದ (2) ರ ಆದೇಶದಲ್ಲಿ ಹೊಸ ಮೂಲಸೌಲಭ್ಯ ಅಭಿವೃದ್ಧಿ ನೀತಿ 2007 ನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಪಿಪಿಪಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಇಲಾಖೆಯ ಅಧಿಕಾರಿಗಳಿಗೆ/ಏಜನ್ಸಿಗಳಿಗೆ ತರಬೇತಿ ನೀಡುವುದಕ್ಕೆ ರೂ. 5.00 ಲಕ್ಷಗಳನ್ನು ಹಾಗೂ ಮಾಹಿತಿ ಮತ್ತು ದಾಖಲೆ ಕೇಂದ್ರಕ್ಕಾಗಿ (Information & Documentation Centre) ರೂ. 5.00 ಲಕ್ಷಗಳು ಒಟ್ಟು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

3. ಮೇಲೆ ಓದಲಾದ (3) ರ ಆದೇಶದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ನೀತಿ 2007 ರಂತೆ ಸಾಮರ್ಥ್ಯ ಅಭಿವೃದ್ಧಿ ಬಗ್ಗೆ ತರಬೇತಿ ಕಾರ್ಯಕ್ರಮಗಳ ಸಮರ್ಪಕ ನಿರ್ವಹಣೆ ಹಾಗೂ ಈ ಇಲಾಖೆಯಲ್ಲಿ ಮಾಹಿತಿ ಮತ್ತು ದಾಖಲೆ ಕೇಂದ್ರ ಸ್ಥಾಪನೆ, ಉನ್ನತೀಕರಣ ಮತ್ತು ಲಾಜಿಸ್ಟಿಕ್‌ಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಐಡೆಕ್ ಮುಖಾಂತರ ಖರೀದಿಸಲು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

4. ಮೇಲೆ ಓದಲಾದ (4) ರ ಆದೇಶದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಪಿಪಿಪಿ ಕೋಶಕ್ಕೆ ಅಗತ್ಯ ಸಾಮಗ್ರಿಗಳಾದ ಜೆರಾಕ್ಸ್ ಯಂತ್ರ ಸ್ಟೇಷನರಿ ಸಾಮಗ್ರಿ, ಲ್ಯಾಪ್‌ಟಾಪ್/ ಡೆಸ್ಕ್‌ಟಾಪ್ ಕಂಪ್ಯೂಟರ್ ಫೆರಿಫರಲ್ಸ್ ಇತ್ಯಾದಿ ಖರೀದಿ ಮಾಡಲು ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

5. ಮೇಲೆ ಓದಲಾದ (5) ರ ಪತ್ರದಲ್ಲಿ ಸಿಎಫ್‌ಓ ಮತ್ತು ಕಂಪನಿ ಕಾರ್ಯದರ್ಶಿ ಐಡೆಕ್ ಇವರು ವರದಿ ಮಾಡಿ, ಸರ್ಕಾರವು ಸಂಸ್ಥೆಗೆ ಬಿಡುಗಡೆ ಮಾಡಿದ ಅನುದಾನವನ್ನು ಪಿಪಿಪಿ ಕೋಶದ ತರಬೇತಿ, capacity building, ಮಾಹಿತಿ ಡಾಕ್ಯೂಮೆಂಟೇಷನ್ ಸೆಂಟರ್ ಇವುಗಳಿಗೆ, ವೆಚ್ಚವಾಗಿದ್ದು 2010–11ನೇ ಸಾಲಿನ ವೆಚ್ಚಗಳಿಗಾಗಿ ಸರ್ಕಾರವು ಹೆಚ್ಚುವರಿಯಾಗಿ ರೂ. 30.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

6. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 72 ಮೂಇವಿ 2010, ಬೆಂಗಳೂರು, ದಿನಾಂಕ : 18–8–2010.

ಪ್ರಸ್ತಾವನೆಯಲ್ಲಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಪಿಪಿಪಿ ಕೋಶಕ್ಕೆ ಅಗತ್ಯ ಸಭೆಗಳು ಹಾಗೂ ಇತರೆ ಖರ್ಚುಗಳಿಗಾಗಿ 30.00 ಲಕ್ಷಗಳ ಅನುದಾನವನ್ನು (ರೂಪಾಯಿ ಮುವತ್ತು ಲಕ್ಷಗಳು ಮಾತ್ರ) ಬಿಡುಗಡೆ ಮಾಡಿದೆ.

2. ಈ ಮೊತ್ತವನ್ನು ಲೆಕ್ಕ ಶೀರ್ಷಿಕೆ 3451-00-090-1-06-059-Infrastructure Preliminary Studies-Other Expenditure ಇದರಡಿ 2010–11ನೇ ಸಾಲಿನಲ್ಲಿ ಒದಗಿಸಿರುವ ರೂ. 797.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

3. ಸದರಿ ಮೊತ್ತವನ್ನು ಚೀಫ್ ಫೈನಾನ್ಷಿಯಲ್ ಆಫೀಸರ್ ಮತ್ತು ಕಂಪನಿ ಕಾರ್ಯದರ್ಶಿ, ಐಡೆಕ್ ಇವರು ಪೇಯಿಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ. ಹಾಗೂ ಖರ್ಚು ಮಾಡಿದ ಪ್ರತಿಯೊಂದು ಬಾಬ್ತು ಹಣಕ್ಕೆ ಅಗತ್ಯ ದಾಖಲಾತಿಗಳನ್ನು ನಿರ್ವಹಿಸತಕ್ಕದ್ದು.

4. ಈ ಆದೇಶವನ್ನು ದಿನಾಂಕ : 16-5-2008 ರ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾ-ಯೋಜನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಆರ್. ಶಿವಲಿಂಗಯ್ಯ)

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ. ಆರ್. 2238 ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ರಾಜ್ಯದಲ್ಲಿ ಪ್ರಾಯೋಗಿಕವಾಗಿ ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ-ಪೈಲೆಟ್ ಬಿಪಿಎಲ್ ಸೆನ್ಸಸ್-2010) ನಡೆಸುವ ಕುರಿತು.

ಓದಲಾಗಿದೆ : ಸರ್ಕಾರದ ಪತ್ರದ ಸಮಸಂಖ್ಯೆ : ದಿನಾಂಕ : 3-8-2010.

ಪ್ರಸ್ತಾವನೆ :

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಷ್ಟ್ರಾದ್ಯಂತ ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋಎಕನಾಮಿಕ್ ಸರ್ವೆ-ಪೈಲೆಟ್ ಬಿಪಿಎಲ್ ಸೆನ್ಸಸ್-2010) ನಡೆಸಲು ಉದ್ದೇಶಿಸಿದೆ. ಈ ಸಮೀಕ್ಷೆಯ ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುವುದು. ಕೇಂದ್ರ ಸರ್ಕಾರದ ಸೂಚನೆಯಂತೆ ರಾಜ್ಯದ 14 ಜಿಲ್ಲಾ ಪಂಚಾಯತಿಗಳ 14 ಗ್ರಾಮಗಳಲ್ಲಿ (ಚಿಕ್ಕಮಗಳೂರು ಜಿಲ್ಲೆಯ ಬುಯನಕೋಟೆ, ದಕ್ಷಿಣ ಕನ್ನಡ ಜಿಲ್ಲೆಯ ಸಸಿಹಿತ್ಲು, ದಾವಣಗೆರೆ ಜಿಲ್ಲೆಯ ಸಿದ್ದಾಪುರ, ಧಾರವಾಡ ಜಿಲ್ಲೆಯ ಕಟ್ನೂರ್, ಹಾಸನ ಜಿಲ್ಲೆಯ ನೀರಗುಂದ, ಹಾವೇರಿ ಜಿಲ್ಲೆಯ ಹೀರಂಜಿ, ಕೊಡಗು ಜಿಲ್ಲೆಯ ಕಟ್ಟೆಪುರ, ಕೋಲಾರ ಜಿಲ್ಲೆಯ ಚಿಂಚಂದಲಹಳ್ಳಿ, ಕೊಪ್ಪಳ ಜಿಲ್ಲೆಯ ಬೈರ್‌ನಾಯಕನಹಳ್ಳಿ, ಮೈಸೂರು ಜಿಲ್ಲೆಯ ರಂಗನಾಥಪುರ, ರಾಮನಗರ ಜಿಲ್ಲೆಯ ರಾಮಾಪುರ, ಶಿವಮೊಗ್ಗ ಜಿಲ್ಲೆಯ ಗಿನಿವಾಲ, ಉಡುಪಿ ಜಿಲ್ಲೆಯ ಇನ್ನಂಜೆ, ಉತ್ತರ ಕನ್ನಡ ಜಿಲ್ಲೆಯ ಬೆಂಗ್ರೆ) ಪ್ರಾಯೋಗಿಕವಾಗಿ ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ-ಪೈಲೆಟ್ ಬಿಪಿಎಲ್ ಸೆನ್ಸಸ್-2010) ನಡೆಸಬೇಕಾಗಿದೆ. ರಾಜ್ಯದಲ್ಲಿ ಪ್ರಾಯೋಗಿಕ ಸರ್ವೆ ನಡೆಸಲು ಇನ್ಸಿಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕಾನಾಮಿಕ್ ಛೇಂಜ್ (ಐಸಾಕ್), ಬೆಂಗಳೂರು ಸಂಸ್ಥೆಯನ್ನು ತಾಂತ್ರಿಕ ಸಹಾಯಕ ಏಜೆನ್ಸಿಯಾಗಿ ಗುರುತಿಸಲಾಗಿದೆ. ರಾಜ್ಯದ 14 ಗ್ರಾಮಗಳಲ್ಲಿ ಪ್ರಾಯೋಗಿಕ ಸಮೀಕ್ಷೆಯನ್ನು ಪರಿಣಾಮಕಾರಿಯಾಗಿ ನಡೆಸಲು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಮೇಲುಸ್ತುವಾರಿ ಅಧಿಕಾರಿಯನ್ನಾಗಿ ನೇಮಿಸಬೇಕಾಗಿದೆ. ಆದುದರಿಂದ ಈ ಆದೇಶ :

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 26 ಎಸ್‌ಜಿವೈ 2010, ಬೆಂಗಳೂರು, ದಿನಾಂಕ : 18-8-2010.

ರಾಜ್ಯ ಸರ್ಕಾರವು, ಪ್ರಾಯೋಗಿಕ ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ-ಪೈಲೆಟ್ ಬಿಪಿಎಲ್ ಸೆನ್ಸಸ್-2010) ನಡೆಸಲು ಈ ಕೆಳಕಂಡ ಅಧಿಕಾರಿಗಳನ್ನು ಆಯಾ ಜಿಲ್ಲೆಯ ಮೇಲುಸ್ತುವಾರಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಕ್ರ.ಸಂ.	ಜಿಲ್ಲಾ ಪಂಚಾಯತ್ ಹೆಸರು.	ಸಮೀಕ್ಷೆಯ ಮೇಲುಸ್ತುವಾರಿ ಅಧಿಕಾರಿಯ ಹೆಸರು. ಶ್ರೀ/ಶ್ರೀಮತಿ	ಹುದ್ದೆ
1	ಚಿಕ್ಕಮಗಳೂರು	ಸುಬ್ಬರಾವ್	ಮುಖ್ಯ ಯೋಜನಾಧಿಕಾರಿ
2	ದಕ್ಷಿಣ ಕನ್ನಡ	ಸೀತಮ್ಮ	ಯೋಜನಾ ನಿರ್ದೇಶಕರು (ಡಿಆರ್‌ಡಿಎ)
3	ದಾವಣಗೆರೆ	ವಿಶ್ವನಾಥ್ ಮುದ್ದಜ್ಜಿ	ಮೌಲ್ಯ ಮಾಪನ ಮತ್ತು ಉಸ್ತುವಾರಿ ಅಧಿಕಾರಿ
4	ಧಾರವಾಡ	ಎ.ಪಿ. ಪಾಲಂಕರ್	ಸಹಾಯಕ ಯೋಜನಾಧಿಕಾರಿ, ಎಂಜಿಎನ್‌ಆರ್‌ಇಜಿಎ, ಧಾರವಾಡ ತಾ.ಪಂ.
5	ಹಾಸನ	ಜಗದೀಶ್	ಯೋಜನಾ ನಿರ್ದೇಶಕರು (ಡಿಆರ್‌ಡಿಎ)
6	ಹಾವೇರಿ	ಹೆಚ್.ಎಂ. ಶ್ರೀನಿವಾಸ	ಯೋಜನಾ ನಿರ್ದೇಶಕರು (ಡಿಆರ್‌ಡಿಎ)
7	ಕೊಡಗು	ಸಿದ್ದಯ್ಯ	ಮುಖ್ಯ ಯೋಜನಾಧಿಕಾರಿ
8	ಕೋಲಾರ	ಲಕ್ಷ್ಮೀನಾರಾಯಣ	ಮುಖ್ಯ ಯೋಜನಾಧಿಕಾರಿ
9	ಕೊಪ್ಪಳ	ಎಸ್.ಜಿ. ಕೋರವರ್	ಯೋಜನಾ ನಿರ್ದೇಶಕರು (ಡಿಆರ್‌ಡಿಎ)
10	ಮೈಸೂರು	ಸಿ.ಎಂ. ದೊಡ್ಡಮನಿ	ಉಪ ನಿರ್ದೇಶಕರು (ಕೆವಿಐ), ಜಿಪಂ, ಮೈಸೂರು
11	ರಾಮನಗರ	ಡಿ. ಜಯರಾಂ	ಮುಖ್ಯ ಯೋಜನಾಧಿಕಾರಿ
12	ಶಿವಮೊಗ್ಗ	ಎನ್. ಮುನಿರಾಜಪ್ಪ	ಯೋಜನಾ ನಿರ್ದೇಶಕರು (ಡಿಆರ್‌ಡಿಎ)
13	ಉಡುಪಿ	ಡಿ. ಪ್ರಾಣೇಶ್‌ರಾವ್	ಉಪ ಕಾರ್ಯದರ್ಶಿ
14	ಉತ್ತರ ಕನ್ನಡ	ಎಸ್.ವೈ. ಕೋರವಾರ್	ಮುಖ್ಯ ಯೋಜನಾಧಿಕಾರಿ

ಪ್ರಾಯೋಗಿಕ ಸಮೀಕ್ಷೆ ಕಾರ್ಯದಲ್ಲಿ ಮೇಲುಸ್ತುವಾರಿ ಅಧಿಕಾರಿಗಳ ಪಾತ್ರ :–

* ಸಮೀಕ್ಷೆಗೆ ಅಗತ್ಯವಿರುವ ಸಮೀಕ್ಷೆದಾರರನ್ನು (Investigator) ಆಯ್ಕೆ ಮಾಡುವುದು.
* ಸಮೀಕ್ಷೆಯ ಎಲ್ಲಾ ತರಬೇತಿಗಳಿಗೆ ಸಮೀಕ್ಷೆದಾರರೊಂದಿಗೆ (Investigator) ಕಡ್ಡಾಯವಾಗಿ ಹಾಜರಾಗುವುದು.
* ಗ್ರಾಮದ ಮಾಸ್ಟರ್ ಲೀಸ್ಟ್ ಹಾಗೂ ಗ್ರಾಮದ ಪ್ರಶ್ನಾವಳಿಗೆ ಮಾಹಿತಿಯನ್ನು ಖುದ್ದಾಗಿ ಸಂಗ್ರಹಿಸಿ ತುಂಬುವುದು.
* ಸಮೀಕ್ಷೆಯ ಗಣತಿದಾರರಿಗೆ 2010 ರ ಜನಗಣತಿಗಾಗಿ ತಯಾರಿಸಿದ ಗ್ರಾಮದ ಭೂಪಟದ ಸಹಾಯದಿಂದ ಕುಟುಂಬಗಳ ಹಂಚಿಕೆ ಮಾಡುವುದು.
* ಬಿಪಿಎಲ್ ಸಮೀಕ್ಷೆ ಮಾಡುವಾಗ ಸರ್ವೆ ಕಾರ್ಯ ಪೂರ್ಣವಾಗುವವರೆವಿಗೂ ಆ ಗ್ರಾಮದಲ್ಲಿಯೇ ವಾಸ್ತವ್ಯವಿದ್ದು, ಮೇಲುಸ್ತುವಾರಿ ಕಾರ್ಯ ನಿರ್ವಹಿಸುವುದು.
* ಗಣತಿ ಕಾರ್ಯ ನಿರ್ವಹಿಸುವಾಗ ಗಣತಿದಾರರಿಗೆ ಏನಾದರೂ ತೊಂದರೆಯಾದಲ್ಲಿ ನಿವಾರಣೆ ಮಾಡುವುದು.
* ಗ್ರಾಮದಲ್ಲಿನ ಕುಟುಂಬದ ಸಮೀಕ್ಷೆ ನಡೆಸುವಾಗ ಆ ಗ್ರಾಮದ ಕೋಡ್‌ನ್ನು ಕಡ್ಡಾಯವಾಗಿ ಪ್ರತಿ ನಮೂನೆಯಲ್ಲಿ ನಮೂದಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
* ನಮೂನೆಯ ಎಲ್ಲಾ ಕಾಲಂಗಳು ತುಂಬಿರುವ ಬಗ್ಗೆ ಖಚಿತಪಡಿಸಿಕೊಂಡು ಪ್ರತಿ ನಮೂನೆಯಲ್ಲೂ ಸಹಿ ಮಾಡುವುದು.

ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗಣತಿಯ ಸಮೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಬಗ್ಗೆ ಉಸ್ತುವಾರಿ ಮಾಡುವುದು. ಗಣತಿಯ ಬಗ್ಗೆ ಸರ್ಕಾರ ಅಗ್ಗಿಂದಾಗ್ಗೆ ನೀಡುವ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಡಿ.ಕೆ. ರಂಗಸ್ವಾಮಿ)
ನಿರ್ದೇಶಕರು (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಅಪರ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಇಲಾಖೆ

ಪಿ. ಆರ್. 2239

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : 2010–11ನೇ ಸಾಲಿಗೆ ಡಿಆರ್‌ಡಿಎ ಆಡಳಿತ ಯೋಜನೆಯ ರಾಜ್ಯದ ಪಾಲಿನ ಒಂದನೇ ಕಂತಿನ ಅನುದಾನವನ್ನು ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಆರ್–18014/01/2010–11 ಡಿಆರ್‌ಡಿಎ (ಎಸ್‌ಎಲ್ ನಂ. 10) ದಿನಾಂಕ 17–05–2010.

2) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 6 ಎಸ್‌ಜಿವೈ (ಡಿಆರ್‌ಡಿಎ) 2010, ಬೆಂಗಳೂರು, ದಿನಾಂಕ 03–08–2010.

3) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಅರ್–17014/10/2010–11, ಡಿಆರ್‌ಡಿಎ (ಎಸ್‌ಎಲ್ ನಂ. 34) ದಿನಾಂಕ 15–07–2010.

ಪ್ರಸ್ತಾವನೆ :

ಡಿಆರ್‌ಡಿಎ ಆಡಳಿತ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75:25ರ ಅನುಪಾತದಲ್ಲಿ ಭರಿಸುತ್ತವೆ. 2010–11ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ಡಿಆರ್‌ಡಿಎ ಆಡಳಿತ ಯೋಜನೆಗೆ ಓದಲಾಗಿದೆ. (1)ರಲ್ಲಿ ಒಂದನೇ ಕಂತಿನ ಅನುದಾನ ರೂ. 8,81,44,000 ಗಳನ್ನು ರಾಜ್ಯದ 29 ಜಿಲ್ಲಾ ಪಂಚಾಯತಿಗಳಿಗೆ (ಚಿಕ್ಕಬಳ್ಳಾಪುರ ಹೊರತುಪಡಿಸಿ) ಬಿಡುಗಡೆ ಮಾಡಿದೆ. ಅದರಂತೆ, ಉಲ್ಲೇಖಿತ (2)ರ ಆದೇಶದಲ್ಲಿ ರಾಜ್ಯ ಸರ್ಕಾರವು ಮೊದಲನೇ ಕಂತಿನ ಅನುದಾನ ರೂ. 2,93,81,000 ಗಳನ್ನು ಬಿಡುಗಡೆ ಮಾಡಲಾಗಿತ್ತು. ಉಲ್ಲೇಖಿತ (3)ರ ಆದೇಶದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತಿಗೆ ಮೊದಲನೇ ಕಂತಿನ ಅನುದಾನ ರೂ. 33,58,000 ಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರ ಬಿಡುಗಡೆ ಗೊಳಿಸಿದ ಮೊದಲನೆ ಕಂತಿನ ಅನುದಾನಕ್ಕನುಗುಣವಾಗಿ ರಾಜ್ಯ ಸರ್ಕಾರ ತನ್ನ ಪಾಲಿನ ಮೊದಲನೇ ಕಂತಿನ ಅನುದಾನ ರೂ. 11,19,000 ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 6 ಎಸ್‌ಜಿವೈ (ಡಿಆರ್‌ಡಿಎ) 2010, ಬೆಂಗಳೂರು, ದಿನಾಂಕ: 17–08–2010

ರಾಜ್ಯ ಸರ್ಕಾರವು, ಡಿಆರ್‌ಡಿಎ ಆಡಳಿತ ಯೋಜನೆಯಡಿ ಮೊದಲನೇ ಕಂತಿನ ಅನುದಾನವಾಗಿ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತಿಗೆ ರೂ. 11,19,000 ಗಳನ್ನು (ರೂ. ಹನ್ನೊಂದು ಲಕ್ಷದ ಹತ್ತೊಂಬತ್ತು ಸಾವಿರ ಮಾತ್ರ) ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಕ್ರ.ಸಂ.	ಜಿಲ್ಲಾ ಪಂಚಾಯತಿ	ಜಿ.ಪಂ. ಕೋಡ್	ಡಿ.ಡಿ.ಓ ಕೋಡ್	ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಮೊದಲನೇ ಕಂತಿನ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡುತ್ತಿರುವ ಮೊದಲನೇ ಕಂತಿನ ಅನುದಾನ
1	ಚಿಕ್ಕಬಳ್ಳಾಪುರ	453	0600ದದ0001	33,58,000	11,19,000

ಷರತ್ತುಗಳು :

ಡಿಆರ್‌ಡಿಎ ಆಡಳಿತ ಯೋಜನೆಯ ಕೈಪಿಡಿಯ ಮಾರ್ಗಸೂಚಿಯಂತೆ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾ ಪಂಚಾಯತ್ ಸಿಬ್ಬಂದಿಗಳ ವೇತನ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಮಾತ್ರ ಉಪಯೋಗಿಸಲು ಅವಕಾಶವಿದೆ. ಕೇಂದ್ರ ಹಾಗೂ ರಾಜ್ಯದ ಪಾಲಿನ

ಅನುದಾನವು ಸೇರಿ ವೆಚ್ಚವನ್ನು ಭರಿಸಬೇಕಾಗಿರುವುದರಿಂದ ರಾಜ್ಯದ ಪಾಲಿನ ಅನುದಾನವನ್ನು ವೇತನ ಮತ್ತು ವೇತನೇತರವೆಂದು ಪಿಂಗಡಿಸದೆ ಒಟ್ಟಾರೆ ರಾಜ್ಯದ ಪಾಲಿನ ಅನುದಾನವನ್ನು ಖಜಾನೆಯಿಂದ ಡ್ರಾ ಮಾಡಲು ಖಜಾನಾಧಿಕಾರಿಗಳು ಅನುಮತಿ ನೀಡತಕ್ಕದ್ದು.

ಯೋಜನೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ : "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00-196-ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿಲ್ಲಾ ಪಂಚಾಯತ್-06-ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ (ಕೇಂದ್ರ ಪುರಸ್ಕೃತ ಯೋಜನೆ) 2010-11 (2515-00-196-6-06)" (ಲಿಂಕ್ ಕೋಡ್ 2515-00-101-0-19)ರಡಿ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಎಫ್‌ಡಿ 1 ಜಡ್‌ಪಿಎ 2007 (ಪಿ2) ದಿನಾಂಕ 26-04-2007 ರನ್ವಯ ಜಿಲ್ಲಾ ಪಂಚಾಯತ್ ನಿಧಿ-1ಕ್ಕೆ ಜಮೆ ಮಾಡಿಕೊಂಡು ಪೇಯಿಸ್ ರಸೀದಿಯ ಮೂಲಕ ಜಿಲ್ಲಾ ಪಂಚಾಯತಿ ನಿಧಿಯಿಂದ ಅನುದಾನವನ್ನು ಖಜಾನೆಯಿಂದ ಪಡೆದುಕೊಂಡು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ ಇವರು ಆಯಾ ತಿಂಗಳ ಪ್ರಗತಿ ವರದಿ ಹಾಗೂ ಹುದ್ದೆವಾರು ವಿವರಗಳನ್ನು ಮುಂದಿನ ತಿಂಗಳ 5ನೇ ತಾರೀಖಿನೊಳಗೆ ನಿರ್ದೇಶಕರು (ಸ್ವಉಕಾ) ಹಾಗೂ ಪದ ನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.

ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣಪತ್ರ ಹಾಗೂ ಲೆಕ್ಕ ಪರಿಶೋಧನ ವರದಿಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಸಹಮತಿ ಸಂಖ್ಯೆ : ಗ್ರಾಅಪ 178 ಪಿಬಿಎಸ್ 2010, ದಿನಾಂಕ 11-08-2010 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಡಿ. ಕೆ. ರಂಗಸ್ವಾಮಿ)
ನಿರ್ದೇಶಕರು (ಸ್ವ.ಉ.ಕಾ.) ಹಾಗೂ ಪ.ನಿ.
ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. 2240

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಉಪಕಾರ್ಯದರ್ಶಿ ಹುದ್ದೆಗೆ ಪೂರಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 445 ಸಅಸೇ 2009, ದಿನಾಂಕ 28-5-2010.
2) ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 194 ಸಅಸೇ 2010, ದಿನಾಂಕ 26-6-2010 ಮತ್ತು ತಿದ್ದೋಲೆ ದಿನಾಂಕ 7-7-2010.
3) ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಕಸಂವಾಪ್ರ 139 ಸ್ವೀಮರ 2010, ದಿನಾಂಕ 13-7-2010.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 28-5-2010ರ ಆದೇಶದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿ ಉಪಕಾರ್ಯದರ್ಶಿ ಹುದ್ದೆಯನ್ನು ಸೃಜಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಅಧಿಸೂಚನೆ ಮತ್ತು ತಿದ್ದೋಲೆಯಲ್ಲಿ ಉಪಕಾರ್ಯದರ್ಶಿ ಹುದ್ದೆಗೆ ಶ್ರೀ ಕೆ. ಸುಧಾಕರಶೆಟ್ಟಿ ಇವರನ್ನು ನೇಮಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಉಪಕಾರ್ಯದರ್ಶಿ ಹುದ್ದೆಗೆ ಲಭ್ಯವಿರುವ ಪೂರಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವಂತೆ ಕೋರಲಾಗಿದೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 445 ಸಅಸೇ 2009, ಬೆಂಗಳೂರು, ದಿನಾಂಕ: 19-08-2010

ಕರ್ನಾಟಕ ಸರ್ಕಾರ ಸಚಿವಾಲಯದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿ ದಿನಾಂಕ 28-5-2010ರ ಆದೇಶದಲ್ಲಿ ಸೃಜಿಸಲಾಗಿರುವ ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಶಾಖೆಗೆ ಈ ಕೆಳಕಂಡ ಪೂರಕ ಹುದ್ದೆಗಳನ್ನು ಸೃಜಿಸಲಾಗಿದೆ ಮತ್ತು ಸದರಿ ಹುದ್ದೆಗಳನ್ನು re-deployment ಮೂಲಕ ಭರ್ತಿ ಮಾಡಲು ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಹಿರಿಯ ಶೀಘ್ರಲಿಪಿಗಾರ/ಶೀಘ್ರಲಿಪಿಗಾರ	1 ಹುದ್ದೆ
2	ಕಿರಿಯ ಸಹಾಯಕ	1 ಹುದ್ದೆ
3	ದಲಾಯತ್	1 ಹುದ್ದೆ
	ಒಟ್ಟು	3 ಹುದ್ದೆಗಳು

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 609 ವೆಚ್ಚ 12/2010, ದಿನಾಂಕ 5-8-2010ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎ. ಆರ್. ವಿಜಯಾನಂದ ಶರ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು-3)

ಪಿ.ಆರ್. 2241

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಸಿಆಸು ಇಲಾಖೆ (ಚುನಾವಣೆ ವಿಭಾಗ) ದಲ್ಲಿನ ಸಿನಿಯರ್ ಪ್ರೋಗ್ರಾಮರ್ ಹುದ್ದೆಯನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 56 ಸಸಿವಿ 2004, ದಿನಾಂಕ 23-12-2004
2) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 30 ಸಸಿವಿ 2006, ದಿನಾಂಕ 07-06-2006
3) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 607 ಸಅಸೇ 2008, ದಿನಾಂಕ 23-01-2009
4) ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ 68 ಚುಸಿಆ 2003, ದಿನಾಂಕ 12-01-2010, ಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಚುನಾವಣೆಗಳು) ಅವರಿಂದ.

ಪ್ರಸ್ತಾವನೆ :

ಕರ್ನಾಟಕ ಸರ್ಕಾರ ಸಚಿವಾಲಯದ ಸಿಆಸು ಇಲಾಖೆಯ ಪ್ರೋಗ್ರಾಮರ್ ಹುದ್ದೆಯನ್ನು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 23-12-2004ರ ಸರ್ಕಾರಿ ಆದೇಶದಲ್ಲಿ ಸಿಆಸುಇ (ಚುನಾವಣೆ) ಇಲ್ಲಿನ ಜೂನಿಯರ ಪ್ರೋಗ್ರಾಮರ್ ಹುದ್ದೆಯನ್ನು ಸೀನಿಯರ್ ಪ್ರೋಗ್ರಾಮರ್ ಹುದ್ದೆಗೆ ಉನ್ನತೀಕರಿಸಲಾಗಿದೆ ಹಾಗೂ ಕಾಲಕಾಲಕ್ಕೆ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ಸದರಿ ಹುದ್ದೆಯನ್ನು ದಿನಾಂಕ 31-03-2010 ರವರೆಗೆ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ 12-01-2010ರ ಅನಧಿಕೃತ ಟಿಪ್ಪಣಿಯಲ್ಲಿ ಸಿಆಸುಇ (ಚುನಾವಣೆ) ವಿಭಾಗದಲ್ಲಿ ಸೀನಿಯರ್ ಪ್ರೊಗ್ರಾಮರ್ ಹುದ್ದೆಯನ್ನು ದಿನಾಂಕ 01-04-2010 ರಿಂದ 31-03-2011 ರವರೆಗೆ ಮುಂದುವರಿಸುವಂತೆ ಹಾಗೂ ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್. ರಾಜು ಇವರನ್ನು ನಿಯೋಜನೆ ಮೇಲೆ ಮುಂದುವರಿಸುವಂತೆ ಕೋರಿದ್ದಾರೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 60 ಸಅಸೇ 2010, ಬೆಂಗಳೂರು, ದಿನಾಂಕ: 19-08-2010

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಕರ್ನಾಟಕ ಸರ್ಕಾರ ಸಚಿವಾಲಯದ ಸಿಆಸು ಇಲಾಖೆ-ಚುನಾವಣೆ ವಿಭಾಗದಲ್ಲಿನ ಸೀನಿಯರ್ ಪ್ರೋಗ್ರಾಮರ್ ಹುದ್ದೆಯನ್ನು ದಿನಾಂಕ 01-04-2010 ರಿಂದ 1 ವರ್ಷದ ಅವಧಿಗೆ ಮುಂದುವರಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 444/ಸೇ-1/2010, ದಿನಾಂಕ 10-05-2010 ಹಾಗೂ ಸಿಆಸುಇ-ಸೇವಾನಿಯಮ ಶಾಖೆಯ ಟಿಪ್ಪಣಿ ಸಂಖ್ಯೆ : ಸಿಆಸುಇ 90 ಸೇನಿಎ 2010, ದಿನಾಂಕ 11-03-2010ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎ. ಆರ್. ವಿಜಯಾನಂದ ಶರ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

ಪಿ.ಆರ್. 2242

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಮೈಸೂರು ಸಕ್ಕರೆ ಕಾರ್ಖಾನೆ (ನಿ) ಮಂಡ್ಯ, ಈ ಕಾರ್ಖಾನೆಯ 2010-11ನೇ ಸಾಲಿನ ಕಬ್ಬು ಅರೆಯುವ ಕಾರ್ಯಕ್ಕಾಗಿ ಸರ್ಕಾರದಿಂದ ದುಡಿಯುವ ಬಂಡವಾಳ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಸಕ್ಕರೆ ಕಾರ್ಖಾನೆ ರವರ ಪತ್ರ ಸಂಖ್ಯೆ : ಎಂಎಸ್‌ಕೋ/ಎಂಡಿ/ಡಿಓ/2010/71, ದಿನಾಂಕ 06-07-2010.

ಪ್ರಸ್ತಾವನೆ :

ಮೇಲೆ ಓದಲಾದ (1)ರಲ್ಲಿರುವ ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಸಕ್ಕರೆ ಕಾರ್ಖಾನೆ ರವರ ಪತ್ರದಲ್ಲಿ ಕಾರ್ಖಾನೆಯ 2010-11ನೇ ಸಾಲಿನ ಕಬ್ಬು ಅರೆಯುವ ಕಾರ್ಯವನ್ನು 2010ರ ಜುಲೈ ತಿಂಗಳಿಂದ ಪ್ರಾರಂಭಿಸಿರುತ್ತಿರುವುದಾಗಿ ಈ ಉದ್ದೇಶಕ್ಕಾಗಿ ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ತಿಂಗಳುಗಳಿಗೆ ಒಟ್ಟು 31.05 ಕೋಟಿ ರೂ.ಗಳ ದುಡಿಯುವ ಬಂಡವಾಳವನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ 2010-11ನೇ ಸಾಲಿನ ಆಯವ್ಯಯದಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯ ಯಂತ್ರೋಪಕರಣಗಳ ಆಧುನೀಕರಣಕ್ಕಾಗಿ ಅನುದಾನದಲ್ಲಿ ಒದಗಿಸಲಾಗಿರುವ 20.00 ಕೋಟಿ ರೂ.ಗಳಲ್ಲಿ ಕಾರ್ಖಾನೆಯ ದುಡಿಯುವ ಬಂಡವಾಳಕ್ಕಾಗಿ 5.00 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 49 ಎಸ್‌ಜಿಎಫ್ 2010, ಬೆಂಗಳೂರು, ದಿನಾಂಕ: 19-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ಸಕ್ಕರೆ ಕಾರ್ಖಾನೆ (ನಿ), ಮಂಡ್ಯ ಈ ಕಾರ್ಖಾನೆಗೆ 2010-11ನೇ ಸಾಲಿಗೆ ಕಾರ್ಖಾನೆಯ ಯಂತ್ರೋಪಕರಣಗಳ ಆಧುನೀಕರಣಕ್ಕಾಗಿ ಅನುದಾನದಲ್ಲಿ ಒದಗಿಸಲಾಗಿರುವ 20.00 ಕೋಟಿ ರೂ.ಗಳಲ್ಲಿ ಕಾರ್ಖಾನೆಯ ದುಡಿಯುವ ಬಂಡವಾಳಕ್ಕಾಗಿ 5.00 ಕೋಟಿ ರೂ.ಗಳನ್ನು (ಐದು ಕೋಟಿ ರೂ.ಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2010-11ನೇ ಸಾಲಿನ ಅನುದಾನದಲ್ಲಿ ಕಾರ್ಖಾನೆಯ ಯಂತ್ರೋಪಕರಣಗಳ ಆಧುನೀಕರಣ ಸಂಬಂಧ ಲೆಕ್ಕ ಶೀರ್ಷಿಕೆ "4860-04-190-1-00 (ಯೋಜನೆ) 211-ಹೂಡಿಕೆ" ಅಡಿಯಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ 5.00 ಕೋಟಿ ರೂ.ಗಳನ್ನು ಬಿಡುಗಡೆಗೆ ಮಂಜೂರು ಮಾಡಲಾಗಿದೆ.

ಹಣ ಸೆಳೆಯುವ ಅಧಿಕಾರಿಯು ಸಹಾಯಕ ನಿರ್ದೇಶಕರು (ಹೆಚ್.ಆರ್.ಡಿ. ಆಡಳಿತ ಮತ್ತು ಇಎಂ) ಜಿಲ್ಲಾ ಕೈಗಾರಿಕಾ ಕೇಂದ್ರ ಮಂಡ್ಯ, ಆಗಿದ್ದು ಸದರಿಯವರು ಹಣ ಸೆಳೆಯುವ ಬಿಲ್ಲನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸಬೇಕು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 1384 ವೆಚ್ಚ-1/2010, ದಿನಾಂಕ 16-08-2010ರಲ್ಲಿ ನೀಡಲಾದ ಸಹಮತಿಯಿಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಪಿ. ಆನಂದಕುಮಾರ್)

ಪೀಠಾಧಿಕಾರಿ (ಸಕ್ಕರೆ)

ಪಿ.ಆರ್. 2243 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ರೇಷ್ಮೆ ಇಲಾಖೆಯ ರೇಷ್ಮೆ ಪ್ರದರ್ಶಕರ ಹುದ್ದೆಗಳನ್ನು ರೇಷ್ಮೆ ನಿರೀಕ್ಷಕರ ಹುದ್ದೆಗಳಿಗೆ ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ : ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ : ಸಿಬ್ಬಂದಿ 1(8)ರೇಪ್ರದ/ಉನ್ನತೀ/165/2001-02, ದಿನಾಂಕ 13-02-2006, 07-06-2007, 01-08-2007, 07-12-2007, 10-01-2008, 15-04-2008, 26-06-2008 ಮತ್ತು 21-01-2009.

ಪ್ರಸ್ತಾವನೆ :

ಮೇಲೆ ಓದಲಾದ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರಗಳಲ್ಲಿ ರೇಷ್ಮೆ ಕೃಷಿ ಆಯುಕ್ತರು 250 ರೇಷ್ಮೆ ಪ್ರದರ್ಶಕರ ಹುದ್ದೆಗಳನ್ನು ರೇಷ್ಮೆ ನಿರೀಕ್ಷಕರ ಹುದ್ದೆಗಳನ್ನಾಗಿ ಉನ್ನತೀಕರಿಸಲು ಇಲಾಖೆಯಿಂದ ಪ್ರಸ್ತಾವನೆಯನ್ನು ಈ ಹಿಂದೆ ಕಳುಹಿಸಿದ್ದ ಬಗ್ಗೆ ತಿಳಿಸಿ, 1979 ರಿಂದ 1983 ರಲ್ಲಿ ರೇಷ್ಮೆ ಪ್ರದರ್ಶಕರಾಗಿ ನೇರ ನೇಮಕಾತಿ ಹೊಂದಿದ ಕೆಲವರು ಅದೇ ಹುದ್ದೆಯಲ್ಲಿ ಮುಂದುವರೆದಿದ್ದು. ಅವರಿಗೆ ಕೆಲಸದಲ್ಲಿ ಚೈತನ್ಯ ತುಂಬಲು ಪದೋನ್ನತಿ ನೀಡುವುದು ಆಡಳಿತಾತ್ಮಕವಾಗಿ ಪೂರಕವೆಂದು ಅಭಿಪ್ರಾಯಪಟ್ಟು ಕರ್ನಾಟಕ ರಾಜ್ಯ ರೇಷ್ಮೆ ಇಲಾಖೆಯ ಸರ್ಕಾರಿ ತಾಂತ್ರಿಕ ನೌಕರರ ಸಂಘದ ಮನವಿಯಲ್ಲಿ ರೇಷ್ಮೆ ಪ್ರದರ್ಶಕರಿಗೆ ಮುಂಬಡ್ತಿ ಅವಕಾಶಕ್ಕಾಗಿ 600 ರೇಷ್ಮೆ ಪ್ರದರ್ಶಕರ ಹುದ್ದೆಗಳನ್ನು ರೇಷ್ಮೆ ನಿರೀಕ್ಷಕರ ಹುದ್ದೆಗೆ ಉನ್ನತೀಕರಿಸಲು ಕೋರಿರುವುದಾಗಿ ತಿಳಿಸಿ ರೇಷ್ಮೆ ಪ್ರದರ್ಶಕರು ಮುಂಬಡ್ತಿ ಇಲ್ಲದೇ ಒಂದೇ ಹುದ್ದೆಯಲ್ಲಿ ಸತತವಾಗಿ ಸೇವೆ ಸಲ್ಲಿಸಿರುವ ವಿವರಗಳನ್ನು ನೀಡಿ, ಸುಮಾರು 800 ರೇಷ್ಮೆ ಪ್ರದರ್ಶಕರು ಬಡ್ತಿ ಇಲ್ಲದೇ 20 ವರ್ಷಕ್ಕೂ ಹೆಚ್ಚು ಅವಧಿಯಿಂದ ಒಂದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಹಾಗೂ ಈ ಹುದ್ದೆಗಳ ಉನ್ನತೀಕರಣ ಅವಶ್ಯವಿರುವುದರಿಂದ 800 ರೇಷ್ಮೆ ಪ್ರದರ್ಶಕರ ಹುದ್ದೆಗಳನ್ನು ರೇಷ್ಮೆ ನಿರೀಕ್ಷಕರ ಹುದ್ದೆಗೆ ಉನ್ನತೀಕರುಸುವ ಕುರಿತು ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ರೇಷ್ಮೆ ಇಲಾಖೆಯ ಸಮಗ್ರ ಪುನರ್ ಸಂಘಟನೆಯ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಸದರಿ ಪ್ರಸ್ತಾವನೆಯಲ್ಲಿ ರೇಷ್ಮೆ, ಪ್ರದರ್ಶಕರ ಹುದ್ದೆಗಳನ್ನು ರೇಷ್ಮೆ ನಿರೀಕ್ಷಕರ ಹುದ್ದೆಗೆ ಉನ್ನತೀಕರಿಸುವ ವಿಷಯದ ಕುರಿತಂತೆಯೂ ಸಮಗ್ರವಾಗಿ ಪರಿಶೀಲಿಸಲಾಗಿದ್ದು, 25 ವರ್ಷಗಳಿಂದ ರೇಷ್ಮೆ ಪ್ರದರ್ಶಕರ ಹುದ್ದೆಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಮುಂಬಡ್ತಿಗೆ ಪರಿಗಣಿಸಬೇಕಾದ ಅಗತ್ಯವಿದೆಯೆಂದು ಸರ್ಕಾರವು ಮನಗಂಡು ಈ ನಿಟ್ಟಿನಲ್ಲಿ 322 ರೇಷ್ಮೆ ಪ್ರದರ್ಶಕರ ಹುದ್ದೆಗಳನ್ನು ರೇಷ್ಮೆ ನಿರೀಕ್ಷಕರ ಹುದ್ದೆಗೆ ಉನ್ನತೀಕರಿಸಲು ಹಾಗೂ ಅಷ್ಟೇ ಸಂಖ್ಯೆಯ ರೇಷ್ಮೆ ನಿರೀಕ್ಷಕರ ಹುದ್ದೆಗಳನ್ನು ಹುದ್ದೆಗಳು ಲಭ್ಯವಿರುವ ಇತರೆ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ತೋಟಗಾರಿಕೆ ಮತ್ತು ಕೃಷಿ ಇಲಾಖೆ, ಸಕ್ಕರೆ ನಿರ್ದೇಶನಾಲಯ ಇತ್ಯಾದಿ ಇಲಾಖೆಗಳಿಗೆ ನಿಯೋಜಿಸಬೇಕೆಂದು ಷರತ್ತನ್ನು ವಿಧಿಸಿ ಉನ್ನತೀಕರಿಸುವ ಸಂಬಂಧ ಸರ್ಕಾರವು ತೀರ್ಮಾನಿಸಿದ ಕಾರಣ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 01 ರೇಸೇವಿ 2007, ಬೆಂಗಳೂರು, ದಿನಾಂಕ: 20-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರೇಷ್ಮೆ ಇಲಾಖೆಯಲ್ಲಿನ ವೇತನ ಶ್ರೇಣಿ ರೂ. 6250-12000ರ 322 ರೇಷ್ಮೆ ಪ್ರದರ್ಶಕರ ಹುದ್ದೆಗಳನ್ನು ಮಾತ್ರ ರೇಷ್ಮೆ ಪ್ರದರ್ಶಕರ ವೃಂದ ಬಲದಿಂದ ರೂ. 7275-13350ರ ವೇತನ ಶ್ರೇಣಿಯ ರೇಷ್ಮೆ ನಿರೀಕ್ಷಕರ ಹುದ್ದೆಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರವು ಉನ್ನತೀಕರಿಸಿದೆ.

1. ಉನ್ನತೀಕರಣದ ಸೌಲಭ್ಯವನ್ನು ಪಡೆಯುವ ಎಲ್ಲಾ 322 ರೇಷ್ಮೆ ಪ್ರದರ್ಶಕರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ತೋಟಗಾರಿಕೆ ಮತ್ತು ಕೃಷಿ ಇಲಾಖೆ, ಸಕ್ಕರೆ ನಿರ್ದೇಶನಾಲಯ, ಇತ್ಯಾದಿ ಇಲಾಖೆಗಳಿಗೆ ನಿಯೋಜನೆ ಮೇಲೆ ತೆರಳಲು ಸಿದ್ಧರಿರುವ ಬಗ್ಗೆ ಮುಂಚಿತವಾಗಿ ಲಿಖಿತ ಮೂಲಕ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಇವರಿಗೆ ಒಪ್ಪಿಗೆ ಪತ್ರ ನೀಡತಕ್ಕದ್ದು.
2. ಈ ಉನ್ನತೀಕರಣವು ಒಂದು ವರ್ಷಕ್ಕೆ ಸಿಂಧುವಾಗಿದ್ದು (ಗಿಚಿಟುಜ) ಈ ಅವಧಿಯೊಳಗೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಎಲ್ಲಾ ನೌಕರರ ನಿಯೋಜನೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ/781/ವೆಚ್ಚ-1/2010, ದಿನಾಂಕ 22-6-2010ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಬಿ. ಡಿ. ಓಬಪ್ಪ)

ಸರ್ಕಾರದ ಉಪ ಕಾರ್ಯದರ್ಶಿ (ರೇ.ಸ.)

ಪಿ.ಆರ್. 2244 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಮಂಜೂರಾದ ಹೆಚ್ಚುವರಿ ಹುದ್ದೆಗಳನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 253 ಕೆಎಂಯು 2007, ದಿನಾಂಕ 28-05-2008.

2) ಪತ್ರ ಸಂಖ್ಯೆ : ಹವಿಪಪ್ರನಿಪ್ರಾ/ಹೊ/ಸಿಬ್ಬಂದಿ/09/2010-11/130, ದಿನಾಂಕ 20-04-2010.

ಪ್ರಸ್ತಾವನೆ :

ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಹೆಚ್ಚುವರಿಯಾಗಿ 17 ಹೊಸ ಹುದ್ದೆಗಳನ್ನು 2 ವರ್ಷಗಳ ಅವಧಿಗೆ ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸೃಜಿಸಲಾಗಿದೆ.

ಆಯುಕ್ತರು, ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಹೊಸಪೇಟೆ ಇವರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ತಾತ್ಕಾಲಿಕವಾಗಿ ಎರಡು ವರ್ಷಗಳ ಅವಧಿಗೆ ಮಂಜೂರಾದ ಹುದ್ದೆಗಳ ಅವಧಿಯು ದಿನಾಂಕ 28-05-2010 ರಂದು ಮುಕ್ತಾಯಗೊಂಡಿರುವುದರಿಂದ ಸದರಿ ಹುದ್ದೆಗಳನ್ನು ದಿನಾಂಕ 28-05-2010 ರಿಂದ ಮನಃ 2 ವರ್ಷಗಳ ಅವಧಿಗೆ ಮುಂದುವರಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಆದರಂತೆ ಈ ಕೆಳಕಂಡ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 151 ಕೆಎಂಯು 2010, ಬೆಂಗಳೂರು, ದಿನಾಂಕ: 12-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಮಂಜೂರಾಗಿರುವ ಈ ಕೆಳಕಂಡ 17 ಹುದ್ದೆಗಳನ್ನು ದಿನಾಂಕ 28-05-2010 ರಿಂದ ಪುನಃ ಎರಡು ವರ್ಷಗಳ ಅವಧಿಗೆ ಮುಂದುವರೆಸಿ ಆದೇಶಿಸಿದೆ.

ಕ್ರಮ ಸಂಖ್ಯೆ	ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ
1	ಅಧೀಕ್ಷಕರು	1
2	ಪ್ರಥಮ ದರ್ಜೆ ಸಹಾಯಕರು	2
3	ವಾಹನ ಚಾಲಕ	2
4	ಸಿವಿಲ್ ಇಂಜಿನಿಯರ್	2
5	ಸರ್ವೇಯರ್	2
6	ಯೋಜನಾ ವ್ಯವಸ್ಥಾಪಕರು	1
7	ಸಂರಕ್ಷಣಾ ವಾಸ್ತುಶಿಲ್ಪಿ	1
8	ವಾಸ್ತುಶಿಲ್ಪಿ	1
9	ಆರ್ಕಿಯಾಲಜಿಸ್ಟ್	1
10	ಸಾಂಸ್ಕೃತಿ ಸಮನ್ವಯ ಅಧಿಕಾರಿ	1
11	ಸಾಮಾಜಿಕ ಸಮನ್ವಯ ಅಧಿಕಾರಿ	1
12	GIS ವಿಶ್ಲೇಷಕರು	1
13	ಗ್ರಂಥಪಾಲಕರು	1
	ಒಟ್ಟು	17

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ 10-7-96ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ. ಕೆ. ಭರ್ಮರಾಜಪ್ಪ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು

ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ಪಿ.ಆರ್. 2245

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಮೈನಿಂಗ್ ಮತ್ತು ಇತರೆ ಲಾರಿಗಳಿಂದ ಟೋಲ್ ಫೀ ಸಂಗ್ರಹಿಸುವ ಬಗ್ಗೆ

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಲೋಇ 111 ಸಿಎನ್‌ಹೆಚ್ 2009, ದಿನಾಂಕ 15-10-2009

ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರಿ ಆದೇಶ ದಿನಾಂಕ 15-10-2009ರಲ್ಲಿ ಕಬ್ಬಿಣದ ಅದಿರು, ಮರ, ಗ್ರಾನೈಟ್ ಹಾಗೂ ಮರಳನ್ನು ಸಾಗಿಸುವ ವಾಹನಗಳಿಗೆ ಪ್ರತಿ ವಾಹನಕ್ಕೆ ಪ್ರತಿ ಟ್ರಿಪ್ಪಿಗೆ ಈ ಕೆಳಕಂಡಂತೆ ಟೋಲ್ ವಿಧಿಸಲು ಮತ್ತು ಟೋಲ್ ವಿಧಿಸಬಹುದಾದ ಮಾರ್ಗಗಳನ್ನು ಗುರುತಿಸಿ ಸರ್ಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳುವುದು ಎಂದು ಆದೇಶಿಸಲಾಗಿದೆ.

ಅದಿರು ಸಾಗಾಣಿಕೆಗೆ	..	ರೂ. 1000
ಗ್ರಾನೈಟ್ ಹಾಗೂ ಮರ ಸಾಗಾಣಿಕೆಗೆ	..	ರೂ. 500
ಮರಳು ಸಾಗಾಣಿಕೆಗೆ	..	ರೂ. 200

2010–11ನೇ ಆಯವ್ಯಯದಲ್ಲಿ ಯಂತ್ರೋಪಕರಣಗಳನ್ನು ಹೊರತುಪಡಿಸಿ ಇತರೆ ಸಾಮಗ್ರಿಗಳನ್ನು ತುಂಬಿದ 16 ಟನ್‌ಗಳಿಗಿಂತಲೂ ಹೆಚ್ಚಿನ ಭಾರವಿರುವ ಪ್ರತಿಯೊಂದು ವಾಹನಕ್ಕೆ ಪ್ರತಿಬಾರಿಗೆ ರೂ. 500 ರಂತೆ ರಸ್ತೆ ಶುಲ್ಕ ವಿಧಿಸಲು ಪ್ರಸ್ತಾವಿಸಲಾಗಿದೆ.

ಟೋಲ್ ಪ್ಲಾಜಾಗಳನ್ನು ನಿರ್ಮಿಸುವ ಮಾರ್ಗಗಳನ್ನು ಗುರುತಿಸಲು ಮೆ॥ E.L. Technologies Pvt. Ltd. ನೀಡಿರುವ ವರದಿ ಮತ್ತು ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ 27–10–2009ರ ಸಭೆಯಲ್ಲಿ ಮೈಸೂರು ಜಿಲ್ಲೆಯ ತಿ.ನರಸೀಪುರ, ತಲಕಾಡು, ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಹಾಗೂ ಕೊಳ್ಳೇಗಾಲ ಪ್ರದೇಶದಲ್ಲಿ ಗುರುತಿಸಲಾದ 37 ರಸ್ತೆಗಳಲ್ಲಿ 26 ಟೋಲ್ ಪ್ಲಾಜಾಗಳನ್ನು ಹಾಗೂ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಂಡೂರು ಹಾಗೂ ಹೊಸಪೇಟೆ ಪ್ರದೇಶದಲ್ಲಿ ಗುರುತಿಸಲಾಗಿರುವ 10 ಟೋಲ್ ಪ್ಲಾಜಾ ನಿರ್ಮಿಸಲು ತೀರ್ಮಾನಿಸಲಾಯಿತು. ಸ್ಥಳ ವಿವರಗಳು ಅನುಬಂಧದಲ್ಲಿರುತ್ತದೆ.

ಮೇಲ್ಕಂಡ ವಸ್ತುಗಳನ್ನು ಸಾಗಿಸುವ ವಾಹನಗಳಿಂದ ಟೋಲ್ ಶುಲ್ಕ ಸಂಗ್ರಹಿಸುವ ಹಕ್ಕನ್ನು ಟೆಂಡರ್ ಆಧಾರದ ಮೇಲೆ ಖಾಸಗಿ ಗುತ್ತಿಗೆದಾರರಿಗೆ ವಹಿಸುವುದು, ಗುತ್ತಿಗೆದಾರರ ಮೂಲಕ ವಸೂಲಿ ಮಾಡಲಾದ ಶುಲ್ಕದಲ್ಲಿ ಶೇ. 10ರಷ್ಟು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಉತ್ತೇಜನ ಅನುದಾನವಾಗಿ ನೀಡಲು ಪ್ರಸ್ತಾಪಿಸಲಾಗಿದೆ.

ಮೇಲಿನ ಕಂಡಿಕೆಗಳ ಹಿನ್ನೆಲೆಯಲ್ಲಿ ಮೇಲೆ ಗುರುತಿಸಲಾದ ಸ್ಥಳಗಳಲ್ಲಿ ಟೋಲ್ ಪ್ಲಾಜ ನಿರ್ಮಿಸಲು ಮತ್ತು ಇತರೆ ವಿಷಯಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಲೋಇ 111 ಸಿಎನ್‌ಹೆಚ್ 2009, ಬೆಂಗಳೂರು, ದಿನಾಂಕ: 1–7–2010

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ ಲೋಇ 111 ಸಿಎನ್‌ಹೆಚ್ 2009 ದಿನಾಂಕ 15–10–2009ನ್ನು ಹಿಂದಕ್ಕೆ ಪಡೆದು 2010–11ರ ಆಯವ್ಯಯದಲ್ಲಿ ಯಂತ್ರೋಪಕರಣಗಳನ್ನು ಹೊರತುಪಡಿಸಿ ಇತರೆ ಸಾಮಗ್ರಿಗಳನ್ನು ತುಂಬಿದ 16 ಟನ್‌ಗಳಿಗಿಂತಲೂ ಹೆಚ್ಚಿನ ಭಾರವಿರುವ ಪ್ರತಿಯೊಂದು ವಾಹನಕ್ಕೆ ಪ್ರತಿಬಾರಿಗೆ ರೂ. 500 ರಂತೆ ರಸ್ತೆ ಶುಲ್ಕ ವಿಧಿಸಲು ಆದೇಶಿಸಿದೆ.

ಅನುಬಂಧದಲ್ಲಿರುವಂತೆ ಮೈಸೂರು ಜಿಲ್ಲೆಯ ತಿ.ನರಸೀಪುರ, ತಲಕಾಡು, ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಹಾಗೂ ಕೊಳ್ಳೇಗಾಲ ಪ್ರದೇಶದಲ್ಲಿ ಗುರುತಿಸಲಾದ 37 ರಸ್ತೆಗಳಲ್ಲಿ 26 ಟೋಲ್ ಪ್ಲಾಜಾ ಹಾಗೂ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಂಡೂರು ಹಾಗೂ ಹೊಸಪೇಟೆ ಪ್ರದೇಶದಲ್ಲಿ ಗುರುತಿಸಲಾಗಿರುವ 10 ರಸ್ತೆಗಳಲ್ಲಿ 10 ಟೋಲ್ ಪ್ಲಾಜಾ ನಿರ್ಮಿಸಲು ಹಾಗೂ ಟೋಲ್ ಶುಲ್ಕ ಸಂಗ್ರಹಿಸುವ ಹಕ್ಕನ್ನು ಟೆಂಡರ್ ಆಧಾರದ ಮೇಲೆ ಖಾಸಗಿ ಗುತ್ತಿಗೆದಾರರಿಗೆ ವಹಿಸಲು ಆದೇಶಿಸಲಾಗಿದೆ.

ಗುತ್ತಿಗೆದಾರರು ಸರ್ಕಾರಕ್ಕೆ ನೀಡಿರುವ ಶುಲ್ಕದ ಮೊತ್ತವನ್ನು ಲೆಕ್ಕಶೀರ್ಷಿಕೆ 1054–00–800–0–09 ಅಡಿ ಜಮಾ ಮಾಡಿ ರಸ್ತೆಗಳ ಅಭಿವೃದ್ಧಿಗಾಗಿ ಲೆಕ್ಕಶೀರ್ಷಿಕೆ 3054–80–797–0–04 ಮೂಲಕ ಕಾಯ್ದಿಟ್ಟ ನಿಧಿಗೆ (8229–00–200–0–20) ವರ್ಗಾಯಿಸಿ ರಸ್ತೆ ಅಭಿವೃದ್ಧಿ ವೆಚ್ಚ ಮಾಡಬಹುದೆಂದು ಆದೇಶಿಸಿದೆ.

ಮೇಲ್ಕಂಡ ವಸ್ತುಗಳನ್ನು ಸಾಗಿಸುವ ವಾಹನಗಳಿಂದ ಗುತ್ತಿಗೆದಾರರ ಮೂಲಕ ವಸೂಲಿ ಮಾಡಲಾದ ಶುಲ್ಕದಲ್ಲಿ ಶೇ. 10ರಷ್ಟು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಉತ್ತೇಜಕ ಅನುದಾನವಾಗಿ ನೀಡಲು ಆದೇಶಿಸಿದೆ.

ಟೋಲ್ ಪ್ಲಾಜಾಗಳನ್ನು ನಿರ್ಮಿಸುವ ವೆಚ್ಚವನ್ನು ಲೆಕ್ಕಶೀರ್ಷಿಕೆ 5054–ORF ಅಡಿಯಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : PWD 414 FC–1/2010 ದಿನಾಂಕ 29–6–2010ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್. ಆರ್. ರೇವಣ್ಣ)

ಸರ್ಕಾರದ ಅಧೀನ ಕಾರ್ಯದರ್ಶಿ,

ಲೋಕೋಪಯೋಗಿ, ಬಂದರು ಮತ್ತು

ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಅನುಬಂಧ

ಟೋಲ್ ಪ್ಲಾಜಾ ನಿರ್ಮಿಸಲು ಉದ್ದೇಶಿಸಿರುವ ರಸ್ತೆ ಮತ್ತು ಸ್ಥಳದ ಹೆಸರು

ಕ್ರಮ ಸಂಖ್ಯೆ	ರಸ್ತೆಯ ಹೆಸರು	ಟೋಲ್ ಪ್ಲಾಜಾ ನಿರ್ಮಿಸುವ ಸ್ಥಳ
1	ಕೊರಟಗೆರೆ–ಬವಲಿ ರಸ್ತೆ (ರಾಜ್ಯ ಹೆದ್ದಾರಿ–33)	ಬುಹತಹಳ್ಳಿ
2	ಮಳವಳ್ಳಿ–ಬಿ.ಜಿ. ಪುರ (ಎಂ.ಡಿ.ಆರ್)	ಸಿರಮೆಹಳ್ಳಿ
3	ಎಸ್‌ಆರ್‌ಪಿ–ಸೊಸಲೆ–ಶಿವನಸಮುದ್ರ ರಸ್ತೆ (ಎಂ.ಡಿ.ಆರ್.)	ಜವನಗಹಳ್ಳಿ
4	ಮಳವಳ್ಳಿ–ಬೆಂಗಳೂರು (ರಾಷ್ಟ್ರೀಯ ಹೆದ್ದಾರಿ–209)	ಕ್ಯಾತೆಗೌಡನದೊಡ್ಡಿ
5	ಉತ್ತಂಬಳ್ಳಿ–ಯಳಂದೂರು	ಮಾಂಬಳ್ಳಿ
6	ಕೊಳ್ಳೇಗಾಲ–ಮಳವಳ್ಳಿ	ಸತ್ತೇಗಾಲ
7	ಎಸ್‌ಆರ್‌ಪಿ–ಮಲೈ ಮಹದೇಶ್ವರ ಬೆಟ್ಟ–ರಾಜ್ಯ ಹೆದ್ದಾರಿ–79	ಸೋಸಲೆ

8	ಎಸ್‌ಆರ್‌ಪಿ-ಮಲೈ ಮಹದೇಶ್ವರ ಬೆಟ್ಟ-ರಾಜ್ಯ ಹೆದ್ದಾರಿ-79	ಚಿನ್ನಾಯಕನಹಳ್ಳಿ
9	ಸಿರಾ-ನಂಜನಗೂಡು ರಸ್ತೆ (ರಾಜ್ಯ ಹೆದ್ದಾರಿ-84)	ಹೊಸೂರು
10	ನಂಜನಗೂಡು-ಮೈಸೂರು	ಚಿಕ್ಕಯ್ಯನ ಛತ್ರ
11	ಮೈಸೂರು-ತಿ.ನರಸೀಪುರ	ಮೇಗಲಪುರ
12	ಗರ್ಗೇಶ್ವರಿ-ರಂಗಸಮುದ್ರ ರಸ್ತೆ (ಎಂ.ಡಿ.ಆರ್.)	ಮುತ್ತತ್ತಿ
13	ಗರ್ಗೇಶ್ವರಿ-ರಂಗಸಮುದ್ರ ರಸ್ತೆ (ಎಂ.ಡಿ.ಆರ್.)	ರಂಗಸಮುದ್ರ
14	ಗರ್ಗೇಶ್ವರಿ-ರಂಗಸಮುದ್ರ ರಸ್ತೆ (ಎಂ.ಡಿ.ಆರ್.)	ಬನ್ನೂರು
15	ವರುಣ-ಹೊಸಕೋಟೆ ರಸ್ತೆ (ರಾಜ್ಯ ಹೆದ್ದಾರಿ-84ಎ)	ದಂಡಿಕೆರೆ
16	ಶ್ರೀರಂಗಪಟ್ಟಣ-ಮಲೈ ಮಹದೇಶ್ವರ ಬೆಟ್ಟ-ರಾಜ್ಯ ಹೆದ್ದಾರಿ-79	ನೆಲಸೋಗೆ
17	ಶ್ರೀರಂಗಪಟ್ಟಣ-ಮಲೈ ಮಹದೇಶ್ವರ ಬೆಟ್ಟ-ರಾಜ್ಯ ಹೆದ್ದಾರಿ-79	ಹೊಸಹಂಪಾಪುರ
18	ಚಾಮರಾಜನಗರ-ತಿ.ನರಸೀಪುರ	ಬನಹಳ್ಳಿ
19	ನಂಜನಗೂಡು-ಬಂಡೀಪುರ	ಹೊಸಹಳ್ಳಿ
20	ಯಳಂದೂರು-ಗುಂಡ್ಲುಪೇಟೆ ರಸ್ತೆ (ರಾಜ್ಯ ಹೆದ್ದಾರಿ-81)	ಉದಿಗಾಲ
21	ಯಳಂದೂರು-ಗುಂಡ್ಲುಪೇಟೆ ರಸ್ತೆ (ರಾಜ್ಯ ಹೆದ್ದಾರಿ-81)	ತೆರಕನಾಂಬಿ
22	ನಂಜನಗೂಡು-ಬಿಳಿಗಿರಿರಂಗನ ಬೆಟ್ಟ (ರಾಜ್ಯ ಹೆದ್ದಾರಿ-80)	ಚಿನ್ನದ ಗುಡಿ ಹುಂಡಿ
23	ನಂಜನಗೂಡು-ಬಿಳಿಗಿರಿರಂಗನ ಬೆಟ್ಟ (ರಾಜ್ಯ ಹೆದ್ದಾರಿ-80)	ಚಾಮರಾಜನಗರ
24	ಬಾಗಲಕೋಟೆ-ಬಿಳಿಗಿರಿರಂಗನ ಬೆಟ್ಟ (ರಾಜ್ಯ ಹೆದ್ದಾರಿ-87)	ಮಡಹಳ್ಳಿ
25	ರಾಷ್ಟ್ರೀಯ ಹೆದ್ದಾರಿ-209	ಅಂಕನಶೆಟ್ಟಿಪುರ
26	ರಾಷ್ಟ್ರೀಯ ಹೆದ್ದಾರಿ-212	ಬಸವಪುರ
27	ಶ್ರೀರಂಗಪಟ್ಟಣ-ಜೇವರ್ಗಿ ರಸ್ತೆ (ರಾಜ್ಯ ಹೆದ್ದಾರಿ-19)	ಕಿ.ಮೀ. 337-00
28	ಶ್ರೀರಂಗಪಟ್ಟಣ-ಜೇವರ್ಗಿ ರಸ್ತೆ (ರಾಜ್ಯ ಹೆದ್ದಾರಿ-19)	ಕಿ.ಮೀ. 324-00
29	ಮೈಲಾರಿ-ತೋರಣಗಲ್ಲು ರಸ್ತೆ (ರಾಜ್ಯ ಹೆದ್ದಾರಿ-40)	ಕಿ.ಮೀ. 129-00
30	ರಾಷ್ಟ್ರೀಯ ಹೆದ್ದಾರಿ-63 ರಿಂದ ಮೆಟ್ರಿಕಿ	ಕಿ.ಮೀ. 5-00
31	ಹಂಪಿ-ಹೆಚ್.ಬಿ.ಹಳ್ಳಿ ರಸ್ತೆ (ರಾಜ್ಯ ಹೆದ್ದಾರಿ-131)	ಕಿ.ಮೀ. 64-00
32	ಸಂಡೂರು-ಹೊಸಪೇಟೆ ರಸ್ತೆ (ರಾಜ್ಯ ಹೆದ್ದಾರಿ-49)	ಕಿ.ಮೀ. 26-20
33	ಮೈಲಾರ-ತೋರಣಗಲ್ಲು ರಸ್ತೆ (ರಾಜ್ಯ ಹೆದ್ದಾರಿ-40)	ಕಿ.ಮೀ. 110-00
34	ಮೈಲಾರ-ತೋರಣಗಲ್ಲು ರಸ್ತೆ (ರಾಜ್ಯ ಹೆದ್ದಾರಿ-40)	ಕಿ.ಮೀ. 151-00
35	ಕೊಡ್ಲಿಗಿ-ತುಂಬರಗುಡ್ಡಿ ರಸ್ತೆ	ಕಿ.ಮೀ. 0-50
36	ದೇವದುರ್ಗ-ಚೋರನೂರು ರಸ್ತೆ	ಕಿ.ಮೀ. 8-00

(ಎಸ್. ಆರ್. ರೇವಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಲೋಇ 111 ಸಿಎನ್‌ಹೆಚ್ 2009, ಬೆಂಗಳೂರು, ದಿನಾಂಕ 29-7-2010

ವಿಷಯ : ಮೈನಿಂಗ್ ಮತ್ತು ಇತರೆ ಲಾರಿಗಳಿಂದ ಟೋಲ್ ಫೀ ಸಂಗ್ರಹಿಸುವ ಬಗ್ಗೆ

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಲೋಇ 111 ಸಿಎನ್‌ಹೆಚ್ 2009, ದಿನಾಂಕ 1-7-2009

***

ಸರ್ಕಾರದ ಆದೇಶ ಸಂಖ್ಯೆ : ಲೋ ಇ 111 ಸಿಎನ್‌ಹೆಚ್ 2009, ದಿನಾಂಕ 1-7-2010ರ ಆದೇಶದ 2ನೇ ಪ್ಯಾರಾದ ಕೊನೆಯಲ್ಲಿ ಟೋಲ್ ಶುಲ್ಕ ಸಂಗ್ರಹಿಸುವ ಹಕ್ಕನ್ನು ಟೆಂಡರ್ ಆಧಾರದ ಮೇಲೆ ಖಾಸಗಿ ಗುತ್ತಿಗೆದಾರರಿಗೆ ವಹಿಸಲು ಆದೇಶಿಸಲಾಗಿದೆ ಎಂಬುದರ ಮುಂದೆ "ಖಾಸಗಿ ಗುತ್ತಿಗೆದಾರರನ್ನು ನೇಮಕ ಮಾಡುವವರಿಗೆ ಇಲಾಖಾ ವತಿಯಿಂದಲೇ ಟೋಲ್ ಶುಲ್ಕ ಸಂಗ್ರಹಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸಿದೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್. ಆರ್. ರೇವಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಪಿ.ಆರ್. 2246

ಕಂದಾಯ ಸಚಿವಾಲಯ

ವಿಷಯ : ಗ್ರಾಮ ಸ್ಥಳಾಂತರಕ್ಕಾಗಿ ಬಾಗಲಕೋಟೆ ಜಿಲ್ಲೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : ಮಾನ್ಯ ಮುಖ್ಯಮಂತ್ರಿಗಳ ಟಿಪ್ಪಣಿ ಸಂಖ್ಯೆ : SCM.913/10, ದಿನಾಂಕ 12-08-2010.

ಪ್ರಸ್ತಾವನೆ :

ಆಸರೆ ಯೋಜನೆ ಅಡಿಯಲ್ಲಿ ನೆರೆ ಪೀಡಿತವಾದ ಜಿಲ್ಲೆಗಳಾದ ಬಾಗಲಕೋಟೆ, ಬಿಜಾಪುರ, ಗದಗ್ ಜಿಲ್ಲೆಗಳಲ್ಲಿ ಮನೆ ಕಟ್ಟಿಸುವ ಕಾರ್ಯವನ್ನು ಮೆ॥ ಮೈಸೂರು ನಾಗರಿಕರ ವೇದಿಕೆ, ಜೆ.ಎಸ್.ಎಸ್. ಮಹಾ ವಿದ್ಯಾಪೀಠ, ಮೈಸೂರು ಇವರಿಗೆ ವಹಸಲಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರು ದಿನಾಂಕ 15-6-2010ರಂದು ರೂ. 1.00 ಕೋಟಿಗಳನ್ನು ಹಾಗೂ ಅಕ್ಕ ಚಾರಿಟಿಬಲ್ ಫೌಂಡೇಷನ್ ಯು.ಎಸ್.ಎ. ಇವರು ರೂ. 25.00 ಲಕ್ಷಗಳನ್ನು ಕರ್ನಾಟಕ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ದೇಣಿಗೆ ನೀಡಿರುತ್ತಾರೆ. ಸದರಿ ಮೊತ್ತವನ್ನು ಮೈಸೂರು ನಾಗರೀಕ ವೇದಿಕೆ ವತಿಯಿಂದ ಆಸರೆ ಮನೆಗಳ ನಿರ್ಮಾಣಕ್ಕಾಗಿ ನೀಡಬೇಕೆಂದು ದಿನಾಂಕ 6-7-2010ರ ಪತ್ರದಲ್ಲಿ ಸದರಿ ಸಂಸ್ಥೆಯವರು ತಿಳಿಸಿರುತ್ತಾರೆ.

ಕರ್ನಾಟಕ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ಇವರಿಗೆ ರೂ. 1.25 ಕೋಟಿ ಹಣವನ್ನು ಬಿಡುಗಡೆ ಮಾಡಲು ಮಾನ್ಯ ಮುಖ್ಯಮಂತ್ರಿಗಳು ಉಲ್ಲೇಖಿತ ಟಿಪ್ಪಣಿಯಲ್ಲಿ ಅನುಮೋದನೆ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಅದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 79 ಟಿಎನ್ಆರ್ 2010, ಬೆಂಗಳೂರು, ದಿನಾಂಕ: 13-8-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಾದ ಬಾಗಲಕೋಟೆ, ಬಿಜಾಪುರ, ಗದಗ ಜಿಲ್ಲೆಗಳಲ್ಲಿ ಪ್ರವಾಹದಿಂದ ಪೀಡಿತವಾದ ಗ್ರಾಮಗಳನ್ನು ಸ್ಥಳಾಂತರಿಸಿ ನೆರೆಸಂತ್ರಸ್ಥರಿಗೆ ಮನೆಗಳನ್ನು ಕಟ್ಟಿಸಿಕೊಡಲು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರಿಗೆ ರೂ. 1.25 ಕೋಟಿ (ರೂಪಾಯಿ ಒಂದು ಕೋಟಿ ಇಪ್ಪತ್ತೈದು ಲಕ್ಷ ಮಾತ್ರ) ಗಳನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ಅಡಿಯಲ್ಲಿ ಭರಿಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ನಿಂದ ಜಿಲ್ಲಾ ಖಜಾನೆಯಲ್ಲಿರುವ ಜಿಲ್ಲಾಧಿಕಾರಿಗಳು ಬಾಗಲಕೋಟೆ ಜಿಲ್ಲೆ ಇವರ Miscellaneous Deposit Account Public Contributions to the Calamity Relief ಖಾತೆಗೆ ಟಿ.ಟಿ.ಆರ್. ಮೂಲಕ ವರ್ಗಾವಣೆ ಮಾಡಲು ಆದೇಶಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರು ಪೇಯಿಸ್ ರಸೀದಿ ಬಿಲ್ಲು (ಸಿಟಿಎಸ್-8) ತಯಾರಿಸಿ ಮೇಲು ರುಜು ಮಾಡಿ. ಚಲನ್ ಲಗತ್ತಿಸಿ ಜಿಲ್ಲಾ ಖಜಾನೆಗೆ ಸಲ್ಲಿಸುವುದು. ಬಾಗಲಕೋಟೆ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು ಈ ಮೊತ್ತವನ್ನು ಮೇಲೆ ತಿಳಿಸಿದಂತೆ ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ನಿಂದ ಟಿ.ಟಿ.ಆರ್. ಮೂಲಕ ಜಿಲ್ಲಾ ಖಜಾನೆಯಲ್ಲಿರುವ ಜಿಲ್ಲಾಧಿಕಾರಿಗಳ Miscellaneous Deposit Account Public Contributions to the Calamity Relief Fund ಖಾತೆಗೆ ವರ್ಗಾವಣೆ ಮಾಡತಕ್ಕದ್ದು.

ಈ ಅನುದಾನವನ್ನು ಜಿಲ್ಲಾಧಿಕಾರಿಗಳು ಬಾಗಲಕೋಟೆ ಜಿಲ್ಲೆ ಇವರು ಪುನರ್ವಸತಿ ಕಾರ್ಯಕ್ಕಾಗಿ (ಮನೆ ಕಟ್ಟಿಸಲು) ಅನಶ್ಯಕತೆಗನುಗುಣವಾಗಿ ನಾಗರೀಕ ವೇದಿಕೆ ಜೆ.ಎಸ್.ಎಸ್. ವಿದ್ಯಾಪೀಠ ಇವರು ಬಾಗಲಕೋಟೆ, ಬಿಜಾಪುರ, ಗದಗ ಜಿಲ್ಲೆಗಳಲ್ಲಿ ಪ್ರವಾಹದಿಂದ ಪೀಡಿತವಾದ ಸ್ಥಳಾಂತರಗೊಳ್ಳಲಿರುವ ಗ್ರಾಮಗಳಲ್ಲಿ ಮನೆಗಳನ್ನು ಕಟ್ಟಿಸಲು ಅವಶ್ಯಕತೆಗನುಗುಣವಾಗಿ ಉಪಯೋಗಿಸುವುದು.

ಈ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸುವುದು.

ಮಾನ್ಯ ಮುಖ್ಯ ಮಂತ್ರಿಯವರ ಟಿಪ್ಪಣಿ ಸಂಖ್ಯೆ : SCM/913/10 ದಿನಾಂಕ 12-8-2010ರಲ್ಲಿ ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಟಿ. ಗಂಗಾಧರ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ

(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2)

ಪಿ.ಆರ್. 2247

INFRASTRUCTURE DEVELOPMENT SECRETARIAT

Sub: Release of funds towards cost sharing Railway projects- Kotturu-Harihar new broad gauge Railway line project.

Read:
1. G.O. No. IDD 1 NSW 2002 dated 22-03-02.
2. G.O. No. IDD 47 NSW 2003 (P) dated 26-03-04.
3. G.O. No. IDD 51 NSW 2004 dated 19-07-04.
4. G.O. No. IDD 98 NSW 2003 dated 21-10-06.
5. G.O. No. IDD 98 NSW 2003 dated 20-12-06.
6. G.O. No. IDD 98 NSW 2003 dated 05-09-07.
7. G.O. No. IDD 15 NSW 2008 dated 22-10-08.
8. G.O. No. IDD 15 NSW 2008 dated 17-12-08.
9. G.O. No. IDD 15 NSW 2008 dated 20-01-09.
10. G.O. No. IDD 15 NSW 2008 dated 04-08-09.

11. G.O. No. IDD 15 NSW 2008 dated 20-03-10.
12. G.O. No. IDD 15 NSW 2008 dated 21-06-10.
13. Letter No. W. 63/CN/BNC/MR/B/GL dated 28-07-2010 of Chief Engineer (Con) SWR, Bangalore.

Preamble:

In the Government Orders referred to at Sl. No. (1) to (12) above Government of Karnataka has so far released an amount of Rs. 205.17 crore towards cost sharing for Kotturu-Harihar New Railway line project.

2. The Chief Engineer, South Western Railway, Bangalore in his letter read at Sl. No. (13) above, has stated there is cost escalation and that the earlier cost of Rs. 304.65 crore is likely to increase to Rs. 326.00 crores and the share of Government of Karnataka will be Rs. 217.33 crores. Money deposited by Government of Karnataka so far is Rs. 205.17 crores. Hence, he has requested to deposit the balance 2/3 share of Government of Karnataka. i.e. Rs. 12.16 crores immediately towards Kotturu-Harihar new Railway line project.

3. The proposal of Railways has been examined and it has been decided to release an amount of Rs. 12.16 crore out of the Budget of Rs. 272.50 crore provided under the Head of Account "5465-01-190-3-05 (Plan) 211 investment towards cost sharing for new Railway line projects during 2010-2011. Hence this order.

GOVERNMENT ORDER NO. IDD 15 NSW 2008, BANGALORE DATED 21-08-2010

After careful examination of the request of Railways, Government are pleased to release an amount of Rs. 12.16 crore (Rupees Twelve Crore Sixteen Lakhs only) towards Kotturu-Harihar new Railway line being the part of the balance 2/3rd share of Government of Karnataka and the above expenditure shall be met under the Head of Account "5465-01-190-3-05 (Plan) 211 investment" out of the budget provision Rs. 272.50 crore towards cost sharing for new railway projects during 2010-11.

2. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

3. This order is issued with the concurrence of Finance Department vide U.O. Note. No. FD 1369 Exp-1/2010 dated 11-08-2010.

By Order and in the name of the Governor of Karnataka

C.A. BABURAVINDRANATH PATEL

Under Secretary to Government,

Infrastructure Development Department

P.R. No. 2258

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಸಾದಿಲ್ವಾರು ವೆಚ್ಚದಲ್ಲಿ ವೇತನ ಪಡೆಯುತ್ತಿರುವ ಪೂರ್ಣಕಾಲಿಕ ನೌಕರರ ನಿವೃತ್ತಿ ವಯಸ್ಸನ್ನು 60 ವರ್ಷಗಳಿಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1. ದಿನಾಂಕ 31-07-1985ರ ಅಧಿಕೃತ ಜ್ಞಾಪನ ಸಂಖ್ಯೆ : ಡಿಪಿಎಆರ್ 18 ಎಸ್‌ಡಿಇ 85.
2. ಆದೇಶ ಸಂಖ್ಯೆ : ಸಿಆಸುಇ 44 ಸೇನಿಸಿ 2008, ದಿನಾಂಕ : 28-07-2008.

ಪ್ರಸ್ತಾವನೆ:

ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ದಿನಾಂಕ 18-07-2008 ರಿಂದ ಜಾರಿಗೆ ಬರುವಂತೆ 58 ರಿಂದ 60 ವರ್ಷಗಳಿಗೆ ಮೇಲೆ (2)ರಲ್ಲಿ ಓದಲಾದ ದಿನಾಂಕ 28-07-2008ರ ಆದೇಶದಲ್ಲಿ ಹೆಚ್ಚಿಸಲಾಗಿದೆ ಈ ಹಿಂದೆ 1984ರಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 55 ರಿಂದ 58 ವರ್ಷಗಳಿಗೆ ಹೆಚ್ಚಿಸಲಾಗಿದ್ದ ಸಂದರ್ಭದಲ್ಲಿ ಉಲ್ಲೇಖ (1)ರಲ್ಲಿ ಓದಲಾದ ದಿನಾಂಕ 31-07-1985ರ ಅಧಿಕೃತ ಜ್ಞಾಪನದಲ್ಲಿ ಸಾದಿಲ್ವಾರು ವೆಚ್ಚದಿಂದ ವೇತನ ಪಡೆಯುತ್ತಿರುವ ಪೂರ್ಣಕಾಲಿಕ ನೌಕರರ ನಿವೃತ್ತಿಯ ವಯಸ್ಸನ್ನು 55 ರಿಂದ 58 ವರ್ಷಕ್ಕೆ ಹೆಚ್ಚಿಸಲಾಗಿತ್ತು.

ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು ಮೇಲೆ ತಿಳಿಸಿರುವಂತೆ 58 ರಿಂದ 60 ವರ್ಷಗಳಿಗೆ ಹೆಚ್ಚಿಸಿರುವ ಸನ್ನಿವೇಶದಲ್ಲಿ ಸಾದಿಲ್ವಾರು ವೆಚ್ಚದಲ್ಲಿ ವೇತನ ಪಡೆಯುತ್ತಿರುವ ಪೂರ್ಣಕಾಲಿಕ ನೌಕರರ ನಿವೃತ್ತಿ ವಯಸ್ಸನ್ನು 58 ವರ್ಷದಿಂದ 60 ವರ್ಷದವರೆಗೆ ಹೆಚ್ಚಿಸಲು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ ಸಿಆಸುಇ 4 ಸೇನಿಸಿ 2010, ಬೆಂಗಳೂರು, ದಿನಾಂಕ: 11.08.2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಾದಿಲ್ವಾರು ವೆಚ್ಚದಿಂದ ವೇತನ ಪಡೆದು ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ನೌಕರರ ನಿವೃತ್ತಿ ವಯಸ್ಸನ್ನು ತಕ್ಷಣದಿಂದ ಜಾರಿಗೆ ಬರುವಂತೆ 58 ರಿಂದ 60 ವರ್ಷಕ್ಕೆ ಹೆಚ್ಚಿಸಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 257 ಸೇ-3/10 ದಿನಾಂಕ : 02-03-2010ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಮಾರ್ಕಂಡೇಯ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಸೇವಾ ನಿಯಮಗಳು-2)

ಪಿ.ಆರ್. ನಂ. 2259

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ-71ರನ್ವಯ ಘೋಷಿಸಿರುವ "ಮೀಸಲು ಅರಣ್ಯ" ಜಮೀನುಗಳ ಮೋಜಣಿ ತಂಡದ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :
1. ಆದೇಶ ಸಂಖ್ಯೆ ಅಪಜೀ 74 ಎಫ್‌ಎಫ್ 2007, ದಿನಾಂಕ : 01-02-2007.
2. ಸರ್ಕಾರಿ ಪತ್ರ ಸಂಖ್ಯೆ ಅಪಜೀ 57 ಎಫ್‌ಎಫ್ 2008, ದಿನಾಂಕ : 14-11-2008.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರ ಪತ್ರ ಸಂಖ್ಯೆ : ಪ್ರಮುಅಸಂ/ಮುಅಸಂ/ಕಾಯೋ/ಎ5/ಸಿಆರ್-5/2005-06, ದಿನಾಂಕ : 14-07-2009.

ಪ್ರಸ್ತಾವನೆ:

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964 ಕಲಂ-71ರನ್ವಯ "ಮೀಸಲು ಅರಣ್ಯ" ಎಂದು ಘೋಷಿಸಿರುವ 136619.30 ಎಕರೆ ಸರ್ಕಾರಿ ಜಮೀನುಗಳನ್ನು ಸರ್ವೆ ಮಾಡಿ ಹದ್ದುಬಸ್ತು ಗುರುತಿಸಲು ಜಂಟಿ ಮೋಜಣಿ ತಂಡವನ್ನು ರಚಿಸಿ, ದಿನಾಂಕ : 30-12-2007 ರೊಳಗಾಗಿ ಮೇಲ್ಕಂಡ ಜಮೀನುಗಳ ಸರ್ವೆ ಮತ್ತು ಹದ್ದುಬಸ್ತು ಗುರುತಿಸುವ ಕೆಲಸವನ್ನು ಪೂರ್ಣಗೊಳಿಸಲು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 01-07-2007ರ ಆದೇಶದಲ್ಲಿ ಸೂಚಿಸಲಾಗಿತ್ತು.

ಸರ್ವೆ ಮತ್ತು ಹದ್ದುಬಸ್ತು ಗುರುತಿಸಲು ವಲಯ ಅರಣ್ಯಾಧಿಕಾರಿಗಳು, ಅರಣ್ಯ ಮೋಜಣಿದಾರರು, ನಕ್ಷೆದಾರರ ಸುಮಾರು 21 ಹುದ್ದೆಗಳು ಖಾಲಿ ಇದ್ದ ಕಾರಣ ಮೋಜಣಿ ಕಾರ್ಯವನ್ನು ನಿಗದಿತ ಕಾಲಾವಧಿಯಲ್ಲಿ ಗುರುತಿಸಿ ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರ ಕೋರಿಕೆಯಂತೆ ಜಂಟಿ ಮೋಜಣಿ ತಂಡದ ಕಾಲಾವಧಿಯನ್ನು ದಿನಾಂಕ : 31-05-2009 ರವರೆಗೆ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ : 14-11-2008ರ ಪತ್ರದಲ್ಲಿ ವಿಸ್ತರಿಸಲಾಗಿತ್ತು.
ಮಳೆಗಾಲ ಪ್ರಾರಂಭವಾದ ಕಾರಣ ಸರ್ವೆ ಕಾರ್ಯವನ್ನು ಸ್ಥಗಿತಗೊಳಿಸಲಾಗಿದ್ದು, ನಿಗಧಿತ ಸಿಬ್ಬಂದಿ ವರ್ಗದ ಅಲಭ್ಯತೆಯಿಂದಾಗಿ ಸರ್ವೆ ಕಾಮಗಾರಿಯನ್ನು ನಿರ್ವಹಿಸಲು ಸಾಧ್ಯವಾಗದ ಕಾರಣ ಮೇಲ್ಕಂಡ ಕೆಲಸವನ್ನು ಪೂರ್ಣಗೊಳಿಸಲು ದಿನಾಂಕ : 31-05-2010ರವರೆಗೆ ಕಾಲಾವಕಾಶವನ್ನು ವಿಸ್ತರಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ದಿನಾಂಕ : 14-07-2009ರ ಪತ್ರದಲ್ಲಿ ಕೋರಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೀಸಲು ಅರಣ್ಯದ ಜಮೀನುಗಳ ಮೋಜಣಿ ಮತ್ತು ಹದ್ದಬಸ್ತು ಕಾರ್ಯಕ್ಕಾಗಿ ರಚಿಸಲಾಗಿರುವ ಜಂಟಿ ಮೋಜಣಿ ತಂಡದ ಅವಧಿಯನ್ನು ವಿಸ್ತರಿಸಲು ನಿರ್ಧರಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಅಪಜೀ 116 ಎಫ್‌ಎಫ್ 2009, ಬೆಂಗಳೂರು, ದಿನಾಂಕ: 08.01.2010

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ-71ರನ್ವಯ ಘೋಷಿಸಿರುವ "ಮೀಸಲು ಅರಣ್ಯ" ಜಮೀನುಗಳ ಸರ್ವೆ ಮಾಡಿ ಹದ್ದುಬಸ್ತು ಗುರುತಿಸುವ ಕಾರ್ಯಕ್ಕೆ ರಚಿಸಿರುವ ಜಂಟಿ ಮೋಜಣಿ ತಂಡದ ಅವಧಿಯನ್ನು ಮೇ 2010ರವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಗೋಪಾಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ಆರ್. ನಂ. 2260

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ.ಎನ್. ಮಂಜುನಾಥ್, ತಹಶೀಲ್ದಾರ್, ಗ್ರೇಡ್-2, ಪ್ರಸ್ತುತ ತಹಶೀಲ್ದಾರ್, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 110 ಎಎಸ್‌ಡಿ 2006, ದಿನಾಂಕ : 22-06-2006.
2. ಶ್ರೀ ಎಂ.ಎನ್. ಮಂಜುನಾಥ್, ತಹಶೀಲ್ದಾರ್ ಇವರ ಮನವಿ ದಿನಾಂಕ : 03-07-2006.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂ. (1), ದಿನಾಂಕ : 22-06-2006ರ ಅಧಿಸೂಚನೆಯಲ್ಲಿ, ಶ್ರೀ ಎಂ.ಎನ್. ಮಂಜುನಾಥ್, ಇವರು ಕಂದಾಯ ಇಲಾಖೆಯ ತಹಶೀಲ್ದಾರ್ ಗುಂಪು-ಬಿ ಹುದ್ದೆಗೆ ನೇಮಕಾತಿಗೊಂಡಿರುತ್ತಾರೆ. ಸದರಿಯವರು ಈ ಹುದ್ದೆಗೆ, ಸೇರುವ ಪೂರ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ದಿನಾಂಕ : 29-01-2004 ರಿಂದ 03-07-2006ರವರೆಗೆ ಸಲ್ಲಿಸಿದ ಸೇವೆಯನ್ನು ಪಿಂಚಣಿ ಮಂಜೂರಾತಿಗೆ ಪರಿಗಣಿಸಲು ಕೋರಿ ಮೇಲೆ ಓದಲಾದ ಕ್ರಸಂ. (2)ರಲ್ಲಿ ಶ್ರೀಯುತರು ಕಂದಾಯ ಇಲಾಖೆಯಲ್ಲಿ ಸೇವೆ ಪ್ರಾರಂಭಿಸುವ ಪೂರ್ವದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಹಶಿಕ್ಷಕರಾಗಿ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ಇವರ ಪತ್ರದ ಸಂ. ಸಿಪ್ರೌಶಿಸೇ/01/03-04, ದಿನಾಂಕ : 28-01-2004 ರಂತೆ ಪ್ರೌಢಶಾಲಾ ಸಹ ಶಿಕ್ಷಕರಾಗಿ ನೇಮಕಗೊಂಡು, ಸರ್ಕಾರಿ ನೂತನ ಪ್ರೌಢಶಾಲೆ, ಸೋಮೇಶ್ವರ ಪಾಳ್ಯ, ಮುಳಬಾಗಿಲು ಇಲ್ಲಿಗೆ ನೇಮಕವಾಗಿದ್ದು, ದಿನಾಂಕ : 29-01-2004ರ ಪೂರ್ವಾಹ್ನ ಇಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆಂದು ತಿಳಿಸಿರುತ್ತಾರೆ. ತದನಂತರ ದಿನಾಂಕ : 03-07-2006 ರಂದು ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ಇವರ ಬಿಡುಗಡೆ ಜ್ಞಾಪನಾ ಸಂ. ಸಿ-1777 ಪ್ರೌ.ಸ.ಶಿ.ಶ್ರೇ.ಬಿ.ಮು. 01/06-07, ದಿನಾಂಕ : 29-06-2006 ರನ್ವಯ ಶಿಕ್ಷಣ ಇಲಾಖೆಯಿಂದ ಬಿಡುಗಡೆ ಹೊಂದಿರುವುದಾಗಿ ಆದ್ದರಿಂದ ಶಿಕ್ಷಣ ಇಲಾಖೆಯಲ್ಲಿ ದಿನಾಂಕ : 29-01-2004 ರಿಂದ 03-07-2006 ರವರೆಗಿನ ಸೇವಾ ಅವಧಿಯನ್ನು ಪೂರೈಸಿದ್ದು, ಇವರ ಹಿಂದಿನ ಸೇವೆಯನ್ನು ಪರಿಗಣಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಶ್ರೀ ಎಂ.ಎನ್. ಮಂಜುನಾಥ್, ತಹಶೀಲ್ದಾರ್ ಇವರ ಮನವಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಶ್ರೀಯುತರ ಮೂಲ ಸೇವೆ ಪುಸ್ತಕದಲ್ಲಿ ದಾಖಲಿಸಿರುವಂತೆ ಶ್ರೀ ಎಂ.ಎನ್. ಮಂಜುನಾಥ್, ತಹಶೀಲ್ದಾರ್, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಈ ಹಿಂದೆ ಶಿಕ್ಷಣ ಇಲಾಖೆಯಲ್ಲಿ, ಸಹ ಶಿಕ್ಷಕರಾಗಿ ಸಲ್ಲಿಸಿದ್ದ ಸೇವೆ ದಿನಾಂಕ : 29-01-2004 ರಿಂದ 03-07-2006 ರವರೆಗಿನ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224(ಎ) ರೀತ್ಯ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 68 ಎಎಸ್‌ಡಿ 2007, ಬೆಂಗಳೂರು, ದಿನಾಂಕ : 16-08-2010

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಂ.ಎನ್. ಮಂಜುನಾಥ್, ತಹಶೀಲ್ದಾರ್, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಕಂದಾಯ ಇಲಾಖೆಯ ಸೇವೆಗೆ ಸೇರುವ ಪೂರ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ದಿನಾಂಕ : 29-01-2004 ರಿಂದ 03-07-2006 ರವರೆಗಿನ ಸಲ್ಲಿಸಲಾಗಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224(ಎ) ರೀತ್ಯ ಅವರ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ 7) ರವರ ಟಿಪ್ಪಣಿ ಸಂಖ್ಯೆ : ಆಇ 291 ವೆಚ್ಚ-7/2008, ದಿನಾಂಕ : 15-05-2008ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2261

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಹೆಚ್. ಕೃಷ್ಣಪ್ಪ, ನಿವೃತ್ತ ತಹಶೀಲ್ದಾರ್ ಇವರಿಗೆ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂ : ಎಸಿಟಿ (1) ಸಿಆರ್ 124/09-10 ದಿನಾಂಕ : 31-05-2010.
2. ಮಹಾಲೇಖಪಾಲರು, ಬೆಂಗಳೂರು ಇವರ ಪತ್ರ ಸಂ : GEO1/09-10 R3/VOL 3301/916 ದಿನಾಂಕ : 11-11-2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂ. (1), ದಿನಾಂಕ : 31-05-2010ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರು ಹೆಚ್. ಕೃಷ್ಣಪ್ಪ ನಿವೃತ್ತ ತಹಶೀಲ್ದಾರ್ ಇವರಿಗೆ ದಿನಾಂಕ : 01-04-2005 ರಿಂದ ಜಾರಿಗೆ ಬರುವಂತೆ ಒಟ್ಟು 3 ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಈ ಬಗ್ಗೆ ಮಹಾಲೇಖಪಾಲರು ಮೇಲೆ ಓದಲಾದ ಕ್ರಸಂ. (2)ರ ದಿನಾಂಕ : 11-11-2009ರ ಪತ್ರದಲ್ಲಿ ಶ್ರೀ ಹೆಚ್. ಕೃಷ್ಣಪ್ಪ ರವರು ವೇತನ ಶ್ರೇಣಿ ರೂ. 6,000-11,200 ರಲ್ಲಿ ದಿನಾಂಕ : 01-04-2004 ರಂದು ಗರಿಷ್ಠ ವೇತನ ಮಿತಿ ತಲುಪಿರುತ್ತಾರೆಂದು, ಸದರಿಯವರು ದಿನಾಂಕ : 01-04-2005 ರಿಂದ ಮೊದಲನೇ ಸ್ಥಗಿತ ವೇತನ ಬಡ್ತಿಗೆ, ದಿನಾಂಕ : 01-04-2006 ರಿಂದ ಎರಡನೇ ಸ್ಥಗಿತ ವೇತನ ಬಡ್ತಿಗೆ, ದಿನಾಂಕ : 01-04-2007 ರಿಂದ ಮೂರನೇ ಸ್ಥಗಿತ ಬಡ್ತಿಗೆ ಅರ್ಹರಿರುವುದಾಗಿ ವರದಿ ಮಾಡಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 465 ಎಎಸ್‌ಡಿ 2010, ಬೆಂಗಳೂರು, ದಿನಾಂಕ : 16-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಹೆಚ್. ಕೃಷ್ಣಪ್ಪ, ನಿವೃತ್ತ ತಹಶೀಲ್ದಾರ್ ಇವರಿಗೆ ದಿನಾಂಕ : 01-04-2005 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಒಟ್ಟು 3 ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಆದೇಶಿಸಿದೆ.

1. ದಿನಾಂಕ : 01-04-2005 ರಿಂದ ಮೊದಲನೇ – ಸ್ಥಗಿತ ವೇತನ ಬಡ್ತಿ – (ವೇತನ ಶ್ರೇಣಿ – ರೂ. 6000-11,200)
2. ದಿನಾಂಕ : 01-04-2006 ರಿಂದ ಎರಡನೇ – ಸ್ಥಗಿತ ವೇತನ ಬಡ್ತಿ – (ವೇತನ ಶ್ರೇಣಿ – ರೂ. 11,400-21,600)
3. ದಿನಾಂಕ : 01-04-2007 ರಿಂದ ಮೂರನೇ – ಸ್ಥಗಿತ ವೇತನ ಬಡ್ತಿ – (ವೇತನ ಶ್ರೇಣಿ – ರೂ. 11,400-21,600)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2262

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆಯ ಕೋಳಿವಾಡದಲ್ಲಿ ಕುಮಾರವ್ಯಾಸ ರವರ ಹೆಸರಿನಲ್ಲಿ ಸ್ಮಾರಕ ನಿರ್ಮಾಣ ಮಾಡುವ ಕುರಿತು.

ಓದಲಾಗಿದೆ : ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರ ಪತ್ರ ಸಂಖ್ಯೆ : ಸನಿಧಾ/ಕಸಂಇ/ಸ್ಮಾಬ/282/2010-11, ದಿನಾಂಕ : 19-06-2010.

ಪ್ರಸ್ತಾವನೆ :

2010-11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕುಮಾರವ್ಯಾಸನ ಜನ್ಮ ಸ್ಥಳವಾದ ಕೋಳಿವಾಡದಲ್ಲಿ ಸ್ಮಾರಕವನ್ನು ನಿರ್ಮಿಸಲು ರೂ. 1.00 ಕೋಟಿಗಳನ್ನು ನೀಡುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಘೋಷಣೆ ಮಾಡಿರುತ್ತಾರೆ.

ಮೇಲೆ ಓದಲಾದ ಪತ್ರದಲ್ಲಿ ಧಾರವಾಡ ಜಿಲ್ಲೆಯ, ಹುಬ್ಬಳ್ಳಿ, ತಾಲ್ಲೂಕಿನ ಕೋಳಿವಾಡದಲ್ಲಿ ಜನಿಸಿದ ಕುಮಾರವ್ಯಾಸನ ಸ್ಮಾರಕ ನಿರ್ಮಾಣಕ್ಕೆ ರೂ. 1.00 ಕೋಟಿ ಮೊತ್ತದ ಅಂದಾಜು ಪಟ್ಟಿ ಮತ್ತು ನೀಲಿ ನಕ್ಷೆ ಸಲ್ಲಿಸಿರುವ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ರೂ. 1.00 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ರವರು ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ರೂ. 1.00 ಕೋಟಿ ಮೊತ್ತದ ಅಂದಾಜು ಪಟ್ಟಿ ಮತ್ತು ನೀಲಿ ನಕ್ಷೆಯನ್ನು ಆರ್ಥಿಕ ಇಲಾಖೆ ಹಾಗೂ ಯೋಜನಾ ಇಲಾಖೆಗೆ ಕಳುಹಿಸಿ, ಪ್ರಸ್ತಾವನೆಗೆ ಅನುದಾನ ಬಿಡುಗಡೆ ಕುರಿತು ಅನುಮೋದನೆ ಪಡೆಯಲಾಯಿತು. ಸದರಿ ಯೋಜನೆಯನ್ನು ಕಾರ್ಯಾನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 36 ಸ್ಮಾಪ್ರನಿ 2010, ಬೆಂಗಳೂರು, ದಿನಾಂಕ : 24-08-2010

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಧಾರವಾಡ ಜಿಲ್ಲೆಯ ಕೋಳಿವಾಡದಲ್ಲಿ ಕುಮಾರವ್ಯಾಸ ರವರ ಹೆಸರಿನಲ್ಲಿ ಸ್ಮಾರಕ ನಿರ್ಮಾಣ ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ರೂ. 1.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ಇವರಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಷರತ್ತುಗಳು :

1. ಕಾಮಗಾರಿಯನ್ನು ಟೆಂಡರ್ ಕರೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000 ರಂತೆ ಕ್ರಮ ಕೈಗೊಳ್ಳತಕ್ಕದ್ದು.
2. ಕಾಮಗಾರಿಯನ್ನು ಪೂರ್ಣಗೊಳಿಸಲು ಸಮಯ ನಿಗಧಿ ಪಡಿಸಿಕೊಂಡು ಆ ಸಮಯದೊಳಗೆ ಪೂರ್ಣಗೊಳಿಸುವುದು. ಕಾಮಗಾರಿಯ ಪ್ರಗತಿ ಆಧರಿಸಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡುವುದು.
3. ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರ ಮೇಲುಸ್ತುವಾರಿಯಲ್ಲಿ ಕೈಗೊಳ್ಳುವುದು.
4. ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 1.00 ಕೋಟಿಗಳಿಗೆ ನಿಗಧಿಪಡಿಸಿಕೊಳ್ಳುವುದು.
5. ಕಾಮಗಾರಿಗೆ ಅನುದಾನ ಉಪಯೋಗಿಸಿದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸುವುದು.

ಈ ಅನುದಾನವನ್ನು 2010-11ನೇ ಸಾಲಿನ ಲೆಕ್ಕ ಶೀರ್ಷಿಕೆ 2205-00-102-4-31-059 (ಯೋಜನೆ) ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ : 26-07-2010ರ ಟಿಪ್ಪಣಿ ಸಂಖ್ಯೆ : ಆಇ 513 ವೆಚ್ಚ-7 2010 ರಲ್ಲಿ ಆರ್ಥಿಕ ಇಲಾಖೆಯ ಸಹಮತಿ ಹಾಗೂ ದಿನಾಂಕ : 22-07-2010 ರ ಟಿಪ್ಪಣಿ ಸಂಖ್ಯೆ : ಯೋಇ 83 ಜಶ 2010ರಲ್ಲಿ ಯೋಜನಾ ಇಲಾಖೆಯ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2263

ಎಂ.ಕೆ. ಭರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ವಸತಿ ಸಚಿವಾಲಯ

ವಿಷಯ : ಹುಬ್ಬಳ್ಳಿಯ ಜೈ ಹನುಮಾನ್ ನಗರದ ಗುಡಿಸಲುವಾಸಿಗಳಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಿಸುವ ಬಗ್ಗೆ.

ಓದಲಾಗಿದೆ :

1. ಧಾರವಾಡ ಜಿಲ್ಲಾಧಿಕಾರಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ : UD CELL/Ashraya/CR/2010-11, ದಿನಾಂಕ : 08-07-2010.
2. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಪತ್ರ ಸಂ. ಎಂಡಿಆರ್‌ಜಿಆರ್‌ಹೆಚ್‌ಸಿಎಲ್ 01 ವಿಹೆಚ್‌ಎಸ್ 06 2010, ದಿನಾಂಕ : 11-08-2010.
3. ಸರ್ಕಾರದ ಆದೇಶ ಸಂ. ವಇ 06 ಹೆಚ್‌ಎಹೆಚ್, ದಿನಾಂಕ : 13-04-2010.
4. ದಿನಾಂಕ : 06-07-2010 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ವಿವಿಧ ವಸತಿ ಯೋಜನೆಗಳ ಪ್ರಗತಿ ಪರಿಶೀಲನೆ ಕುರಿತು ನಡೆದ ವಿಡಿಯೋ ಕಾನ್ಫರೆನ್ಸ್ ಸಭೆಯ ನಡವಳಿಗಳು.

ಪ್ರಸ್ತಾವನೆ :

ಧಾರವಾಡ ಜಿಲ್ಲಾಧಿಕಾರಿಗಳು ಹುಬ್ಬಳ್ಳಿ ನಗರದಲ್ಲಿ ಜೈ ಹನುಮಾನ್ ನಗರದಲ್ಲಿನ ಸರ್ವೆ ನಂ. 3110ರ ಒಟ್ಟು 0.34 ಎಕರೆ ಜಮೀನಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ ಗುರುತಿಸಲ್ಪಟ್ಟ 64 ಕುಟುಂಬಗಳ ಕೊಳಗೇರಿಯಲ್ಲಿ 29.97 ಚ.ಮಿ. ವಿಸ್ತೀರ್ಣದ ಜಮೀನಿನಲ್ಲಿ ತಲಾ 2.00 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ನೆಲಮಹಡಿ + 2 ಮಹಡಿ ಮಾದರಿಯಲ್ಲಿ ಒಟ್ಟು 96 ಮನೆಗಳನ್ನು ನಿರ್ಮಿಸಲು ಪ್ರಸ್ತಾಪಿಸಿರುತ್ತಾರೆ. ಪ್ರತಿ ಮನೆಗೆ ತಗಲುವ ಘಟಕ ವೆಚ್ಚದ 2.00 ಲಕ್ಷ ರೂ.ಗಳ ಮೊತ್ತದಲ್ಲಿ ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಲಭ್ಯವಿರುವ 50,000 ರೂ.ಗಳ ಸಹಾಯಧನ ಹಾಗೂ ಫಲಾನುಭವಿಗಳ ವಂತಿಕೆ ಮತ್ತು ಬ್ಯಾಂಕ್ ಸಾಲದಿಂದ 1.50 ಲಕ್ಷ ರೂ.ಗಳ ಮೊತ್ತವನ್ನು ಸಂಗ್ರಹಿಸಲು ಪ್ರಸ್ತಾಪಿಸಲಾಗಿದೆ. ಈ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 69.05 ಲಕ್ಷಗಳ ಅವಶ್ಯಕತೆ ಇದ್ದು, ಸದರಿ ಮೊತ್ತವನ್ನು ಸಂಗ್ರಹಿಸುವುದಕ್ಕಾಗಿ ಜಿಲ್ಲಾಧಿಕಾರಿಗಳು, ಈ ಕುಟುಂಬಗಳಿಗಾಗಿ ನಿರ್ಮಿಸುವ 64 ಮನೆಗಳಲ್ಲದೆ ಇನ್ನು 32 ಹೆಚ್ಚು ಮನೆಗಳನ್ನು ನಿರ್ಮಿಸಿ ಆ ಮನೆಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಿ ಬಂದ ಮೊತ್ತದಿಂದ ಭರಿಸಲು ಪ್ರಸ್ತಾಪಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 39 ಹೆಚ್‌ಎಹೆಚ್ 2010, ಬೆಂಗಳೂರು, ದಿನಾಂಕ : 24-08-2010

ಹುಬ್ಬಳ್ಳಿಯಲ್ಲಿನ ಜೈ ಹನುಮಾನ್ ನಗರದಲ್ಲಿನ ಸರ್ವೆ ನಂ. 3110ರ ಒಟ್ಟು 0.34 ಎಕರೆ ಜಮೀನಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ ಗುರುತಿಸಲಾದ ಕೊಳಗೇರಿಯಲ್ಲಿ ವಾಸಿಸುತ್ತಿರುವ 64 ಕುಟುಂಬಗಳಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿ ವಸತಿ ಕಲ್ಪಿಸುವುದಕ್ಕಾಗಿ ತಲಾ 2.00 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ 29.97 ಚದರ ಮೀಟರ್ ವಿಸ್ತೀರ್ಣದ ಒಟ್ಟು 96 ಮನೆಗಳನ್ನು ನೆಲ ಮಹಡಿ + 1 ಮಹಡಿಗಳ ಸಂಕೀರ್ಣಗಳಲ್ಲಿ ಒಟ್ಟು 191.13 ಲಕ್ಷ ರೂ.ಗಳ (ಒಂದು ಕೋಟಿ ತೊಂಭತ್ತೊಂದು ಲಕ್ಷದ ಹದಿಮೂರು ಸಾವಿರ ರೂ.ಗಳು ಮಾತ್ರ) ವೆಚ್ಚದಲ್ಲಿ ನಿರ್ಮಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

2. ಬಡಾವಣೆಗೆ ಕುಡಿಯುವ ನೀರು, ವಿದ್ಯುತ್ ಸೌಕರ್ಯ, ರಸ್ತೆ, ಒಳಚರಂಡಿ ಮುಂತಾದವುಗಳಿಗಾಗಿ ಸರ್ಕಾರದ ವಿವಿಧ ಯೋಜನೆಗಳಡಿ ಲಭ್ಯವಿರುವ ಅನುದಾನವನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಆದಾಗ್ಯೂ, ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದಲ್ಲಿ, ಜಿಲ್ಲಾಧಿಕಾರಿಗಳು ಈ ಸಂಕೀರ್ಣಗಳಲ್ಲಿನ ನೆಲಮಹಡಿಯಲ್ಲಿನ ಒಟ್ಟು 32 ಮನೆಗಳನ್ನು ಬಹಿರಂಗವಾಗಿ ಹರಾಜು ಮಾಡಿ, ಬಂದ ಆದಾಯದಿಂದ ವೆಚ್ಚವನ್ನು ಭರಿಸತಕ್ಕದ್ದು, ಹರಾಜಿನಿಂದ ಹೆಚ್ಚುವರಿ ಮೊತ್ತ ಸಂಗ್ರಹವಾದ ಪಕ್ಷದಲ್ಲಿ ಅದನ್ನು ಜಿಲ್ಲೆಯ ಇತರ ವಾಜಪೇಯಿ ನಗರ ವಸತಿ ಯೋಜನೆಗಾಗಿ ಉಪಯೋಗಿಸಿಕೊಳ್ಳತಕ್ಕದ್ದು.

3. ಮನೆಗಳ ನಿರ್ಮಾಣವು ಅನುಬಂಧದಲ್ಲಿನ ನಕ್ಷೆಗೆ ಅನುಗುಣವಾಗಿರತಕ್ಕದ್ದು, ಹಾಗೂ ಈ ಮನೆಗಳನ್ನು ನಿರ್ಮಿತಿ ಕೇಂದ್ರದ ಮೂಲಕ ನಿರ್ಮಿಸಲು ಆದ್ಯತೆ ನೀಡುವುದು.

4. ಪ್ರತಿ ಮನೆ ನಿರ್ಮಾಣಕ್ಕೆ ಅವಶ್ಯವಿರುವ 2.00 ಲಕ್ಷ ರೂ.ಗಳ ಘಟಕ ವೆಚ್ಚವನ್ನು, ಫಲಾನುಭವಿಯ ವಂತಿಕೆ ಮತ್ತು ಬ್ಯಾಂಕ್ ಸಾಲದಿಂದ 1.50 ಲಕ್ಷ ರೂ.ಗಳಿಂದ ಹಾಗೂ ವಾಜಪೇಯಿ ನಗರ ವಸತಿ ಯೋಜನೆಯಡಿ ಲಭ್ಯವಿರುವ 50,000 ರೂ.ಗಳ ಸಹಾಯಧನದಿಂದ ಭರಿಸತಕ್ಕದ್ದು.

5. ಸರ್ಕಾರದ 50,000 ರೂ.ಗಳ ಸಹಾಯಧನಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು 15,000 ರೂ.ಗಳನ್ನು ಮತ್ತು ಕರ್ನಾಟಕ ಗೃಹ ಮಂಡಳಿಯಿಂದ 35,000 ರೂ.ಗಳನ್ನು ಕ್ರೋಢೀಕರಿಸಿ ಫಲಾನುಭವಿಗಳ ಮನೆ ನಿರ್ಮಾಣಕ್ಕೆ ನೀಡಲು ಕ್ರಮ ಕೈಗೊಳ್ಳುವುದು.

6. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತರು ಫಲಾನುಭವಿಗಳಿಂದ ವಂತಿಕೆ ಮತ್ತು ಬ್ಯಾಂಕ್ ಸಾಲದ ಮೊತ್ತ ಪಡೆಯಲು ಎಲ್ಲ ಅವಶ್ಯ ಕ್ರಮ ಕೈಗೊಳ್ಳುವರು ಹಾಗೂ ಸಂಬಂಧಪಟ್ಟ ಬ್ಯಾಂಕುಗಳು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಮತ್ತಿತರ ಸಂಸ್ಥೆಗಳಿಗೆ ಸಮನ್ವಯಾಧಿಕಾರಿಯಾಗಿ ಕಾರ್ಯನಿರ್ವಹಿಸುವರು.

7. ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಕಾರ್ಯಕ್ರಮವನ್ನು ಫಲಪ್ರದವಾಗಿ ಜರುಗಿಸಲು ನಿಯತವಾಗಿ ಸಭೆಗಳನ್ನು ಜರುಗಿಸಿ, ಅವಶ್ಯವಿರುವ ಎಲ್ಲ ಕ್ರಮ ಕೈಗೊಳ್ಳುವರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2264

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2, ವಸತಿ ಇಲಾಖೆ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 2010-11ನೇ ಸಾಲಿನಲ್ಲಿ ಎರಡನೇ ಕಂತಾಗಿ ರೂ. 500.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1. ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಇವರ ಪತ್ರ ಸಂಖ್ಯೆ : ಮಪ್ರಮಂ: ಲೆ.ಅ : ಅನುದಾನ ಬಿಡುಗಡೆ : 2010-11 ದಿನಾಂಕ : 09-08-2010.

2. ಸರ್ಕಾರಿ ಆದೇಶ ಸಂಖ್ಯೆ : ಯೋಇ 15 ಮಪ್ರಮಂ 2010 ದಿನಾಂಕ : 25-06-2010.

ಪ್ರಸ್ತಾವನೆ :

2010-11ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515-00-800-0-05-(ಯೋಜನೆ)" ಅಡಿಯಲ್ಲಿ ರೂ. 100.00ಲಕ್ಷಗಳನ್ನು ಹಾಗೂ "4515-00-800-0-03" ಅಡಿಯಲ್ಲಿ ರೂ. 1900.00 ಲಕ್ಷಗಳನ್ನು ಒದಗಿಸಲಾಗಿದೆ. ಮೇಲೆ ಓದಲಾದ (2)ರ ಆದೇಶದಲ್ಲಿ ಮೊದಲನೇ ಕಂತಾಗಿ ರೂ. 500.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (2)ರ ಪತ್ರದಲ್ಲಿ ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಇವರು ಎರಡನೇ ಕಂತನ್ನು ಬಿಡುಗಡೆ ಮಾಡಲು ಕೋರಿರುವ ಹಿನ್ನೆಲೆಯಲ್ಲಿ ಮಂಡಳಿಗೆ ಎರಡನೇ ಕಂತಾಗಿ ರೂ. 500.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಯೋಇ 15 ಮಪ್ರಮಂ 2010, ಬೆಂಗಳೂರು, ದಿನಾಂಕ : 23-08-2010

2010-11ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "4515-00-800-0-03-132" ಅಡಿಯಲ್ಲಿ ರೂ. 300.00 ಲಕ್ಷಗಳನ್ನು (ಮುನ್ನೂರು ಲಕ್ಷ ರೂಪಾಯಿಗಳು ಮಾತ್ರ) ಹಾಗೂ ವಿಶೇಷ ಘಟಕ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ "4515-00-800-0-03-422" ಅಡಿಯಲ್ಲಿ ರೂ. 200.00 ಲಕ್ಷಗಳಂತೆ (ಇನ್ನೂರು ಲಕ್ಷಗಳು ಮಾತ್ರ) ಒಟ್ಟು ರೂ. 500.00 ಲಕ್ಷಗಳನ್ನು (ಐನ್ನೂರು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

2. ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2010-11ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್ 1 ಟಿಎಫ್‌ಪಿ 2008 ದಿನಾಂಕ : 16-05-2008ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಪಿ.ಆರ್. ನಂ. 2265

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಚಿಕ್ಕರಾಜು
ಸರ್ಕಾರದ ಅಧೀನ ಕಾರ್ಯದರ್ಶಿ 1 & 2
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

WATER RESOURCES SECRETARIAT

Sub: According Administrative Approval to the Minor Irrigation Projects under Accelerated Irrigation Benefit Programme-Regarding.

Read: Letters from Chief Engineer, Minor Irrigation North Zone, Bijapur.

(1) No. CE/MI(N)Zone/BJP/AE-6/2010-11/4259, dated: 27-07-2010.

(2) No. CE/MI (N) Zone/BJP/AE-3/2010-11/4500, dated: 06-08-2010.

Preamble:

As per the modified guidelines issued by the Government of India. Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category states. 81 taluks in the State are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of the central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following schemes in DPAP taluk are being considered for according administrative approval.

Head of Account: 4702-00-101-1-10-139 AIBP Major Works

Rs. In lakhs

Sl. No.	Name of Project	District	Taluka	Estimated cost	Potential planned (in Ha.)	Cost/Ha (Rs. in lakhs)
1	Constn. of Bridge cum Barrage near Kalapatti village	Bidar	Aurad	170.00	90	1.89
2	Constn. Barrage near Muthked village	Bidar	Aurad	120.00	64	1.875
2	Constn. Bridge cum Barrage across halla near Gulaguli village	Gadag	Ron	175.00	119	1.47
	Total			**465.00**		

Government Order No.: SANEEYEE 236 MASAVI 2009 (i), Bangalore, Dated: 19-08-2010

In view of the above, Administrative approval is hereby accorded for taking up the above works with an estimated cost totaling to Rs. 465.00 lakhs (Rupees Four hundred and sixty five laksh only) subject to the following conditions.

1. Implementation of these projects should be taken up only after receipt of necessary approval from the GOI.

2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This order is issued with the concurrence of Finance Department in note No. PWD-890-FC-1/2009 dated 09.12.2009.

By Order and in the name of the Governor of Karnataka
RUDRAMURTHY
Ex-Officio Under Secretary to Government
Water Resources Department (Minor Irrigation)

P.R. No. 2272

WATER RESOURCES SECRETARIAT

Sub: According Administrative Approval to the Minor Irrigation Projects under Accelerated Irrigation Benefit Programme-Regarding.

Read: Letters from Chief Engineer, Minor Irrigation North Zone, Bijapur.
(1) No. CE/MI(N)Zone/BJP/AE-5/2010-11/4479, dated: 05-08-2010.
(2) No. CE/MI (N) Zone/BJP/AE-3/2010-11/4500, dated: 06-08-2010.

Preamble:

As per the modified guidelines issued by the Government of India. Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category states. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of the central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following schemes are DPAP taluk is being considered for according administrtative approval.

Head of Account: 4702-00-101-1-10-139 AIBP Major Works

Rs. In lakhs

Sl. No.	Name of Project	District	Taluka	Estimated cost	Potential planned (in Ha.)	Cost/Ha (Re. in lakhs)
1	Constn. of BCB across Amarja river near Chowdapur village	Gulbarga	Afzalpur	125.00	100	1.25
2	Constn. of B.C.B. across Amarja river near Gowdagaon village	Gulbarga	Afzalpur	120.00	100	1.20
3	Constn. of Pickup Dam near Nabhapura village	Gadag	Gadag	137.00	93	1.47
4	Constn. of B.C.B. across halla near Bendalagatti village	Dharwad	Kalaghatagi	103.00	80	1.29
	Total			**485.00**		

Government Order No.: SANEEYEE 236 MASAVI 2009 (2), Bangalore, Dated: 19-08-2010

In view of the above, Administrative approval is hereby accorded for taking up the above works with an estimated cost totaling to Rs. 485.00 lakhs (Rupees Four hundred and eighty five lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Govrnment of India to these schemes.
3. The funding of the scheme is in the ratio of 90:10 between the Central Govt and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance ana the scheme shall be handed over to the same after its construction for the O & M.

This order is issued with the concurrence of Finance Department in note No. PWD-890-FC-1/2009 dated 09.12.2009.

By Order and in the name of the Governor of Karnataka
RUDRAMURTHY
Ex Officio Under Secretary to Government
Water Resources Department (Minor Irrigation)

P.R. No. 2273

WATER RESOURCES SECRETARIAT

Sub: According Administration Approval to the Minor Irrigation Projects under Accelerated Irrigation Benefit Programme-Regarding.

Read: Letters from Chief Engineer, Minor Irrigation North Zone, Bijapur.

1. No. CE/MI(N)Zone/BJP/AE-6/2010-11/4577, dated: 10-08-2010.
2. No. CE/MI (N) Zone/BJP/AE-1/2010-11/4601, dated: 11-08-2010.
3. No. CE/MI (N) Zone/BJP/AE-6/2010-11/4647, dated: 13-08-2010.

Preamble:

As per the modified guidelines issued by the Government of India. Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category states. 81 taluks in the State are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of the central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following schemes in DPAP taluk are being considered for according administrative approval.

Head of Account: 4702-00-101-1-10-139 AIBP Major Works

Rs. In lakhs

Sl. No.	Name of Project	District	Taluka	Estimated cost	Potential planned (in Ha.)	Cost/Ha (Re. in lakhs)
1	Constn. of Barrage near Dapaka village	Bidar	Aurad	140.00	94.00	1.49
2	Constn. Barrage near Jamkhandi village	Bidar	Balki	95.00	52.00	1.83
3	Constn. of Bridge cum Barrage across chickkahalla near Sangreshkoppa village	Belgaum	Savadatti	80.00	50.00	1.60
4	Construction of Bridge cum Barrage across halla near Honniganur village	Gadag	Ron	180.00	123.00	1.46
				495.00		

Government Order No.: SANEEYEE 236 MASAVI 2009 (3), Bangalore, Dated: 19-08-2010

In view of the above, Administrative approval is hereby accorded for taking up the above works with an estimated cost totaling to Rs. 495.00 lakhs (Rupees Four hundred and ninety five lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This order is issued with the concurrence of Finance Department in note No. PWD-890-FC-1/2009 dated 09.12.2009.

By Order and in the name of the Governor of Karnataka
RUDRAMURTHY
Ex Officio Under Secretary to Government
Water Resources Department (Minor Irrigation)

P.R. No. 2274

WATER RESOURCES SECRETARIAT

Sub: According Administratiove Approval to the Minor Irrigation Projects under Accelerated Irrigation Benefit Programme-Regarding.

Read: Letters from Chief Engineer, Minor Irrigation North Zone, Bijapur.
1. No. CE/MI(N)Zone/BJP/AE-5/2010-11/4627, dated: 12-08-2010.
2. No. CE/MI (N) Zone/BJP/AE-6/2010-11/4647, dated: 13-08-2010.

Preamble:

As per the modified guidelines issued by the Government of India. Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category states. 81 taluks in the State are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of the central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following schemes in DPAP taluks are being considered for according administrative approval.

Head of Account: 4702-00-101-1-10-139 AIBP Major Works

Rs. In lakhs

Sl. No.	Name of Project	District	Taluka	Estimated cost	Potential planned (in Ha.)	Cost/Ha (Re. in lakhs)
1	Constn. of M.I. Tank near Boodihala village	Yadgir	Shorapur	100.00	73.00	1.37
2	Constn. of Barrage near Bandalli village	Yadgir	Yadgir	115.00	80.00	1.30
3	Constn. of Anikut near Gundagurthi village	Gulbarga	Chittapur	45.00	51.00	0.88
4	Construction of Anikut near Savura village.	Yadgir	Shahpur	50.00	50.00	1.00
5	Construction of Bridge cum Barrage near Kabirabad wadi.	Bidar	Humnabad	180.00	120.00	1.50
	Total			490.00		

Government Order No.: SANEEYEE 236 MASAVI 2009 (4), Bangalore, Dated: 19-08-2010

In view of the above, Administrative approval is hereby accorded for taking up the above works with an estimated cost totaling to Rs. 490.00 lakhs (Rupees Four hundred and ninty lakhs only) subject to the following conditions.

1. Implementation of these projects should be taken up only after receipt of necessary approval from the GOI.

2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This order is issued with the concurrence of Finance Department in note No. PWD-890-FC-1/2009 dated 09.12.2009.

By Order and in the name of the Governor of Karnataka
RUDRAMURTHY
Ex Officio Under Secretary to Government
Water Resources Department (Minor Irrigation)

P.R. No. 2275

WATER RESOURCES SECRETARIAT

Sub: According Administrative Approval to the Minor Irrigation Projects under Accelerated Irrigation Benefit Programme-Regarding.

Read: Letter No. CE/MI (N) Zone/BJP/AE-5/2010-11/4627, dated: 12-08-2010 from Chief Engineer, Minor Irrigation North Zone, Bijapur.

Preamble:

As per the modified guidelines issued by the Government of India. Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category States. 81 taluks in the State are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of the central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following schemes in DPAP taluk are being considered for according administrtative approval.

Head of Account: 4702-00-101-1-10-139 AIBP Major Works

Rs. In lakhs

Sl. No.	Name of Project	District	Taluka	Estimated cost	Potential planned (in Ha.)	Cost/Ha (Re. in lakhs)
1	Constn. of BCB across karadal nala near Karadal village	Gulbarga	Chittapur	156.00	104.00	1.50
2	Constn. of New Tank near Nimbaraga Thanda.	Gulbarga	Aland	295.00	150.00	1.96
	Total			**451.00**		

Government Order No.: SANEEYEE 236 MASAVI 2009 (5), Bangalore, Dated: 19-08-2010

In view of the above, Administrative approval is hereby accorded for taking up the above works with an estimated cost totaling to Rs. 451.00 lakhs (Rupees Four hundred and fifty one lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed within a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central share is in the form of grant to the State.

5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This order is issued with the concurrence of Finance Department in note No. PWD-890-FC-1/2009 dated 09.12.2009.

By Order and in the name of the Governor of Karnataka

RUDRAMURTHY

Ex Officio Under Secretary to Government

Water Resources Department (Minor Irrigation)

P.R. No. 2276

ನಗರಾಭಿವೃದ್ಧಿ ಸಚಿವಾಲಯ

ಸೇರ್ಪಡೆ

ಸಂಖ್ಯೆ : ನಅಇ 161 ಇಎಂಸಿ 2010, ಬೆಂಗಳೂರು, ದಿನಾಂಕ 09–08–2010

ಸರ್ಕಾರದ ಆದೇಶ ಸಂಖ್ಯೆ : ನಅಇ 161 ಇಎಂಸಿ 2010, ದಿನಾಂಕ 22–07–2010ರ ಆದೇಶ ಭಾಗದ 2 ಪ್ಯಾರಾಗಳನ್ನು ಈ ಕೆಳಗಿನಂತೆ ಸೇರಿಸಿ ಓದಿಕೊಳ್ಳತಕ್ಕದ್ದು.

"ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 4 ಸೆರವ 94, ದಿನಾಂಕ 24–05–1994 ರಲ್ಲಿ ಕಾರ್ಯ ನಿರ್ವಹಣಾ ವರದಿಗಳನ್ನು ಸಲ್ಲಿಸುವ ಬಗ್ಗೆ ಸೂಚನೆಗಳನ್ನು ನೀಡಿದ್ದು, ಅವುಗಳನ್ನು ಅನುಸರಿಸುವಂತೆ ಹಾಗೂ ವರದಿಯನ್ನು ಕಾಲಮಿತಿಯೊಳಗೆ ಸಲ್ಲಿಸುವಂತೆ ತಿಳಿಸಿದೆ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಆರ್. ರವೀಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಪಿ.ಆರ್. 2290

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆಗಳ ಕಾಮಗಾರಿ ಅನುಷ್ಠಾನಕ್ಕಾಗಿ 2010–11ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ಸಿಐ 87 ಎಸ್‌ಜಿಎಫ್ 2010, ದಿನಾಂಕ 16–06–2010

2) ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರವರ ಪತ್ರ ಸಂಖ್ಯೆ : ಡಿಎಸ್‌ಕೆ/ರಕರ/ಅನುದಾನ/3/2010–11, ದಿನಾಂಕ 21–07–2010.

3) ಸರ್ಕಾರದ ಆದೇಶ ಸಂಖ್ಯೆ : ವಾಕೈ 52 ಆಂಆಸ (1) 2010, ದಿನಾಂಕ 01–04–2010

ಪ್ರಸ್ತಾವನೆ :

ರಾಜ್ಯದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ 2010–11ನೇ ಸಾಲಿನಲ್ಲಿ ಒದಗಿಸಲಾಗಿದ್ದ ರೂ. 250.00 ಲಕ್ಷಗಳ ಅನುದಾನದಲ್ಲಿ ಮೊದಲನೇ ಕಂತಾಗಿ ರೂ. 62.50 ಲಕ್ಷಗಳನ್ನು ಮೇಲೆ ಓದಲಾದ (1)ರಲ್ಲಿರುವ ದಿನಾಂಕ 16–06–2010ರ ಸರ್ಕಾರದ ಆದೇಶದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿರವರಿಗೆ ಬಿಡುಗಡೆ ಮಾಡಲಾಗಿದೆ.

ರಾಜ್ಯದ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ 2010–11ನೇ ಸಾಲಿನಲ್ಲಿ ಒದಗಿಸಲಾಗಿರುವ ರೂ. 250/– ಲಕ್ಷಗಳಲ್ಲಿ ಎರಡನೇ ತ್ರೈಮಾಸಿಕಕ್ಕೆ 62.50 ರೂ.ಗಳನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ (2)ರಲ್ಲಿನ ದಿನಾಂಕ 21–07–2010ರ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿರವರು ಪ್ರಸ್ತಾಪಿಸಿರುತ್ತಾರೆ.

ರೂ. ಲಕ್ಷಗಳಲ್ಲಿ

ಕ್ರ.ಸಂ.	ಕಾರ್ಖಾನೆಯ ಹೆಸರು	ವರ್ಷ	ಮೊತ್ತ
1	ದೂಧ್ ಗಂಗಾ ಕೃಷ್ಣಾ ಸ.ಸ.ಕಾ, ಚಿಕ್ಕೋಡಿ ತಾ. ಬೆಳಗಾಂ ಜಿಲ್ಲೆ	2002–2003	15.00
2	ಮೈಸೂರು ಪೇಪರ್ ಮಿಲ್ಸ್ ಸಕ್ಕರೆ ಕಾರ್ಖಾನೆ, ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ	2001–2002 2003–2004	15.00
3	ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಅಲಗಂಚಿ, ನಂಜನಗೂಡು ತಾ. ಮೈಸೂರು ಜಿಲ್ಲೆ	2005–2006	30.00
4	ಕೋರಮಂಡಲ್ ಶುಗರ್ಸ್ ಲಿಮಿಟೆಡ್ (ಐ.ಸಿ.ಎಲ್. ಸಕ್ಕರೆ ಕಾರ್ಖಾನೆ) ಮಾಕವಳ್ಳಿ, ಕೆ.ಆರ್. ಪೇಟೆ ತಾ. ಮಂಡ್ಯ ಜಿಲ್ಲೆ	2005–2006	2.50
	ಒಟ್ಟು		62.50

ಮೇಲೆ ಓದಲಾದ (3)ರಲ್ಲಿರುವ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ 16-05-2008ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದಡಿಯಲ್ಲಿ ರೆವಿನ್ಯೂ ಲೆಕ್ಕದಲ್ಲಿ ಪ್ರತಿ ಪ್ರಕರಣದಲ್ಲಿ ಹಂಚಿಕೆಯಾದ ಆಯವ್ಯಯದಲ್ಲಿ ಶೇ. 25ರಷ್ಟು ಬಿಡುಗಡೆಗೆ ಮಾತ್ರ ಅವಕಾಶ ಇರುವುದರಿಂದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನದಲ್ಲಿ ಒದಗಿಸಲಾಗಿರುವ 250.00 ಲಕ್ಷ ರೂ.ಗಳಲ್ಲಿ ಶೇ. 25ರಷ್ಟು ಅಂದರೆ 62.50 ಲಕ್ಷ ರೂ.ಗಳನ್ನು ಮಾತ್ರ 2ನೇ ತ್ರೈಮಾಸಿಕಕ್ಕೆ ಬಿಡುಗಡೆ ಮಾಡಬಹುದಾಗಿದ್ದು, ಆಯುಕ್ತರು ಕಬ್ಬು ಅಭಿವೃದ್ಧಿರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 87 ಎಸ್‌ಜಿಎಫ್ 2010, ಬೆಂಗಳೂರು, ದಿನಾಂಕ: 26-08-2010

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಪ್ರಸ್ತಾವನೆಯಲ್ಲಿ ಕೋರಿರುವಂತೆ ರಾಜ್ಯದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಕ್ರಿಯಾ ಯೋಜನೆಯನ್ನು ಕಾರ್ಯಗತಗೊಳಿಸಲು 2010-11ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4860-04-800-0-01 ರಸ್ತೆಗಳು 172 (ಯೋಜನೆ) ಅಡಿಯಲ್ಲಿ ಒದಗಿಸಲಾಗಿರುವ ರೂ. 250.00 ಲಕ್ಷಗಳ ಅನುದಾನದಲ್ಲಿ 2ನೇ ತ್ರೈಮಾಸಿಕಕ್ಕೆ ರೂ. 62.50 ಲಕ್ಷಗಳನ್ನು (ಅರವತ್ತೆರಡು ಲಕ್ಷದ ಐವತ್ತು ಸಾವಿರ ರೂ.ಗಳು ಮಾತ್ರ) ಪ್ರಸ್ತಾವನೆಯಲ್ಲಿ ನಮೂದಿಸಿರುವ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡುವ ಸಲುವಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರಿಗೆ ಬಿಡುಗಡೆ ಮಾಡಿದೆ.

3) ಸದರಿ ಅಭ್ಯರ್ಥಿಯನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿನ ನಿಬಂಧನೆಗಳಿಗೆ ಒಳಪಡಿಸಿ ಮತ್ತು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷದ ಪರೀಕ್ಷಾರ್ಥ ಅವಧಿಗೆ ಒಳಪಡಿಸಿ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ.

4) ಎರಡು ವರ್ಷದ ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಗಳು ತಮ್ಮ ವರ್ಗಾವಣೆಗಾಗಿ ರಾಜಕೀಯ ಅಥವಾ ಇನ್ಯಾವುದೇ ರೀತಿಯ ಒತ್ತಡ ತಂದಲ್ಲಿ ಅಂತಹವರ ವಿರುದ್ಧ ಕಾನೂನು ರೀತ್ಯಾ ಶಿಸ್ತು ಕ್ರಮ ಜರುಗಿಸಲಾಗುವುದು.

5) ನೇಮಕಾತಿ ಮಾಡಿರುವ ಸ್ಥಳದ ಅಥವಾ ಕಛೇರಿಯ ಮಾರ್ಪಾಡಿಗಾಗಿ ಯಾವುದೇ ಮನವಿಗಳನ್ನು ಯಾವುದೇ ಕಾರಣಕ್ಕಾಗಲೀ ಪುರಸ್ಕರಿಸಲಾಗುವುದಿಲ್ಲ.

6) ಈ ನೇಮಕಾತಿಯು ಆಗಿಂದಾಗ್ಗೆ ಜಾರಿಯಲ್ಲಿರುವ ಸೇವಾ ಷರತ್ತುಗಳು ನಿಯಮ ಮತ್ತು ಆದೇಶಗಳಿಗೆ ಒಳಪಡುತ್ತದೆ. ಹಾಗೂ ಸದರಿ ಅಭ್ಯರ್ಥಿಗಳು ಕೆ.ಸಿ.ಎಸ್.ಆರ್. ಮತ್ತು ಕೆ.ಸಿ.ಎಸ್ (ನಡತೆ) ನಿಯಮಗಳು 1966ರಲ್ಲಿನ ಮತ್ತು ಕೆ.ಸಿ.ಎಸ್. (ಸಿ.ಸಿ.ಎ.) ನಿಯಮಗಳು 1957ರಲ್ಲಿನ ಹಾಗೂ ಆಗಿಂದಾಗ್ಗೆ ಜಾರಿಗೆ ಬರುವ ಹಾಗೂ ಜಾರಿಯಲ್ಲಿರುವ ಇತರೆ ಸೇವಾ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ಒಳಪಡುತ್ತಾರೆ.

7) ಈ ಆದೇಶ ಮುಟ್ಟಿದ 15 (ಹದಿನೈದು) ದಿನಗಳ ಅವಧಿಯೊಳಗೆ ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗತಕ್ಕದ್ದು ಒಂದು ವೇಳೆ ನಿಗದಿತ ಅವಧಿಯೊಳಗೆ ಕೆಲಸಕ್ಕೆ ಹಾಜರಾಗದಿದ್ದಲ್ಲಿ ಈ ನೇಮಕಾತಿ ರದ್ದಾಗುವುದು ಹಾಗೂ ನೇಮಕಾತಿ ಬಗ್ಗೆ ಅಭ್ಯರ್ಥಿಯು ಯಾವ ಹಕ್ಕನ್ನೂ ಹೊಂದಿರುವುದಿಲ್ಲವೆಂದು ತಿಳಿಯತಕ್ಕದ್ದು.

8) ಅಭ್ಯರ್ಥಿಗಳು ಅವರ ಕಾರ್ಯ, ಕರ್ತವ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ತೃಪ್ತಿಕರವಾಗಿ ಮಾಡತಕ್ಕದ್ದು.

9) ಅಭ್ಯರ್ಥಿಗಳು ಅವರ ದುರ್ವರ್ತನೆಯಿಂದ, ದುರ್ನಡತೆಯಿಂದ ಹಾಗೂ ಉದಾಸೀನತೆಯಿಂದ ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಿದಂತೆ ಉಂಟುಮಾಡುವ ಎಲ್ಲಾ ರೀತಿಯ ಆರ್ಥಿಕ ನಷ್ಟಗಳನ್ನು ಸರ್ಕಾರಕ್ಕೆ ಸದರಿ ಅಭ್ಯರ್ಥಿಗಳು ಭರಿಸಿಕೊಡಲು ಬದ್ಧರಾಗಿರುತ್ತಾರೆ ಹಾಗೂ ಹೊಣೆಗಾರರಾಗಿರುತ್ತಾರೆಂದು ತಿಳಿಯತಕ್ಕದ್ದು.

10) ಅಭ್ಯರ್ಥಿಗಳು ಅವರ ಕರ್ತವ್ಯಗಳನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಗಳನ್ನು ಗುಪ್ತವಾಗಿಟ್ಟು ಅದರ ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಪಾಡತಕ್ಕದ್ದು.

11) ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸಕ್ಷಮ ಪ್ರಾಧಿಕಾರದಿಂದ ಸತ್ಯಾಪನೆಗೆ ಒಳಪಡುತ್ತವೆ.

12) ಅಭ್ಯರ್ಥಿಯು ತಮ್ಮ ಜಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ ಇತ್ಯಾದಿಯಾಗಿ ಯಾವುದೇ ವಿಚಾರದಲ್ಲಿ ಅಭ್ಯರ್ಥಿಯು ನೀಡಿರುವ ವಿವರಗಳು ಸುಳ್ಳೆಂದಾಗಲೀ ಅಥವಾ ತಪ್ಪೆಂದಾಗಲೀ ತಿಳಿದು ಬಂದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲಂಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಕೆ.ಸಿ.ಎಸ್. (ಸಿ.ಸಿ.ಎ.) ನಿಯಮಗಳು 1957ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

13) ಅಭ್ಯರ್ಥಿಗಳು ಸಲ್ಲಿಸಿರುವ ಆಯಾಯ ಮೀಸಲಾತಿ ಪ್ರಮಾಣ ಪತ್ರಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯಾಯ ಮೀಸಲಾತಿ category ಯಲ್ಲಿ ನೇಮಕ ಮಾಡಿರುವುದರಿಂದ ಸದರಿ ಅಭ್ಯರ್ಥಿಗಳು ಆಯಾಯ ಮೀಸಲಾತಿ category ಗೆ ಸೇರಿದವರಲ್ಲವೆಂದು ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಶಾಶ್ವತವಾಗಿ ಯಾವುದೇ ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು.

14) ಅಭ್ಯರ್ಥಿಗಳು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಲ್ಲವೆಂದು ಸತ್ಯಾಪನೆಯಿಂದ ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ಶಾಶ್ವತವಾಗಿ ಯಾವುದೇ ಸೂಚನೆ ಇಲ್ಲದೇ ರದ್ದುಪಡಿಸಲಾಗುವುದು.

15) ಅಭ್ಯರ್ಥಿಯು KGID ಯಲ್ಲಿ ಸರ್ಕಾರಿ ವಿಮೆಯನ್ನು ಕಡ್ಡಾಯವಾಗಿ ಕೆಲಸಕ್ಕೆ ಹಾಜರಾದ ಕೂಡಲೇ ಮಾಡತಕ್ಕದ್ದು.

16) ಅಭ್ಯರ್ಥಿಯು ಕೆಳಕಂಡ ದಾಖಲೆಗಳನ್ನು ತಾವು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ತಪ್ಪದೇ ಹಾಜರುಪಡಿಸತಕ್ಕದ್ದು.

(1) ಅಭ್ಯರ್ಥಿಯು ತಮ್ಮ passport Size ನ ಎರಡು ಇತ್ತೀಚಿನ ಫೋಟೋ

(2) ವಿದ್ಯಾರ್ಹತೆಯ ಬಗ್ಗೆ ಏಳನೇ ತರಗತಿ ಮೂಲ ಅಂಕಪಟ್ಟಿ (Original)

(3) ಜನ್ಮ ದಿನಾಂಕದ ಬಗ್ಗೆ ಮೂಲ T.C. (Original)

(4) ಸಂಬಂಧಪಟ್ಟ ಸರ್ಕಾರಿ ಜಿಲ್ಲಾ ಸರ್ಜನ್‌ನಿಂದ ನಿಗದಿತ್ತ ನಮೂನೆಯಲ್ಲಿ ಪಡೆದ ವೈದ್ಯಕೀಯ ದೈಹಿಕ ಪ್ರಮಾಣ ಪತ್ರ (Original) (Physical Fitness Certificate)

(5) ಅಭ್ಯರ್ಥಿಯು ಕಡೆಯದಾಗಿ ಹಾಜರಾಗಿದ್ದ ಶಾಲೆಯ ಮುಖ್ಯೋಪಾಧ್ಯಾಯರು ನೀಡಿರುವ ನಡತೆ ಪ್ರಮಾಣ ಪತ್ರ (Original)

17) ನೇಮಕಾತಿ ಹೊಂದಿರುವವರು ಕೆಳಕಂಡ ಮೀಸಲಾತಿ ದಾಖಲೆಗಳಲ್ಲಿ ಯಾವುದು ಅನ್ವಯವಾಗುವುದೋ ಅದನ್ನು ಅಂದರೆ

(i) ಗ್ರಾಮೀಣ ಅಭ್ಯರ್ಥಿಗಳಾಗಿದ್ದಲ್ಲಿ ನಿಗದಿತ ನಮೂನೆ-2 ರಲ್ಲಿ ಗ್ರಾಮೀಣ ಮೂಲ ಮೀಸಲಾತಿ ಪ್ರಮಾಣ ಪತ್ರವನ್ನು,

(ii) ಕನ್ನಡ ಮಾಧ್ಯಮ ಅಭ್ಯರ್ಥಿಗಳಾಗಿದ್ದಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಇರುವ ನಿಗದಿತ ನಮೂನೆಯ ಮೂಲ ಪ್ರಮಾಣ ಪತ್ರವನ್ನು.

(iii) ಮಾಜಿ ಸೈನಿಕ ಅಭ್ಯರ್ಥಿಗಳಾಗಿದ್ದಲ್ಲಿ ಸೇನಾ ಬಿಡುಗಡೆ ಮೂಲ ಪ್ರಮಾಣ ಪತ್ರವನ್ನು,

(iv) ಯೋಜನಾ ನಿರಾಶ್ರಿತ ಅಭ್ಯರ್ಥಿಗಳಾಗಿದ್ದಲ್ಲಿ ನಿಗದಿತ ನಮೂನೆಯ ಯೋಜನಾ ನಿರಾಶ್ರಿತ ಮೂಲ ಪ್ರಮಾಣ ಪತ್ರವನ್ನು

(v) ಹಾಗೂ ಅಂಗವಿಕಲ ಅಭ್ಯರ್ಥಿಗಳಾಗಿದ್ದಲ್ಲಿ, ಅಂಗವಿಕಲರೆಂಬುದಕ್ಕೆ ನಿಗದಿತ ನಮೂನೆ-ಎ ಮತ್ತು ನಮೂನೆ-ಬಿ ಯಲ್ಲಿ ನೀಡಿರುವ ಸರ್ಕಾರಿ ವೈದ್ಯಕೀಯ ಪ್ರಮಾಣ ಪತ್ರವನ್ನು

ಅಭ್ಯರ್ಥಿಗಳು ಮೇಲ್ಕಂಡವುಗಳಲ್ಲಿ ಯಾವುದು ಅನ್ವಯವಾಗುವುದೋ ಅದನ್ನು ಕೆಲಸಕ್ಕೆ ಹಾಜರಾಗುವ ಸಮಯದಲ್ಲಿ ಆ ಕಛೇರಿಯ ಮುಖ್ಯಸ್ಥರ ಮುಂದೆ ಹಾಜರುಪಡಿಸತಕ್ಕದ್ದು.

ಅಭ್ಯರ್ಥಿಗಳು ಕೆಳಕಂಡ ನಮೂನೆಗಳನ್ನು ಮತ್ತು ಮುಚ್ಚಳಿಕೆಗಳನ್ನು ಕೆಲಸಕ್ಕೆ ಹಾಜರಾಗುವ ಮುನ್ನ ತಪ್ಪದೇ ಬರೆದುಕೊಡತಕ್ಕದ್ದು

18) ಅಭ್ಯರ್ಥಿಯು ಭಾರತದ ಸಂವಿಧಾನಕ್ಕೆ ಬದ್ಧರಾಗಿರುವ ಬಗ್ಗೆ ಪ್ರತಿಜ್ಞಾ ವಿಧಿಯನ್ನು ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.

19) ಅಭ್ಯರ್ಥಿಯು ಮದುವೆಯಾಗಿದ್ದಲ್ಲಿ ಒಬ್ಬರೇ ಪತಿ ಅಥವಾ ಪತ್ನಿ ಹೊಂದಿರುವ ಬಗ್ಗೆ ಕೆ.ಸಿ.ಎಸ್. (ನಡತೆ) ನಿಯಮಗಳು 1966 ರಲ್ಲಿನ ನಿಯಮ 28ರ ರೀತ್ಯ ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿರುವ ಘೋಷಣಾ ಪತ್ರವನ್ನು ಕೆಲಸಕ್ಕೆ ಹಾಜರಾಗುವ ಕಛೇರಿಯಲ್ಲಿ ಆ ಕಛೇರಿಯ ಮುಖ್ಯಸ್ಥರಿಗೆ ಬರೆದುಕೊಡತಕ್ಕದ್ದು.

20) ಒಂದು ವೇಳೆ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸುಳ್ಳು ಅಥವಾ ನಕಲಿ ಎಂದು ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಮತ್ತು ನೇಮಕಾತಿಯನ್ನು ಶಾಶ್ವತವಾಗಿ ರದ್ದುಪಡಿಸಲಾಗುವುದು ಹಾಗೂ ಅಭ್ಯರ್ಥಿಯ ವಿರುದ್ಧ ಭಾರತೀಯ ದಂಡ ಸಂಹಿತೆಯಲ್ಲಿನ ಸೂಕ್ತ ಕಲಂಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಹಾಗೂ KCS (CCA) ನಿಯಮಗಳು 1957ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಬದ್ಧನಾಗಿರುತ್ತೇನೆ ಎಂಬ ಬಗ್ಗೆ ಅಭ್ಯರ್ಥಿಯು 20/- ರೂ.ಗಳ ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ-1 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

21) ಈ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಬೇರೆ ಇನ್ಯಾವುದೇ ಅಭ್ಯರ್ಥಿಯು ಅವರ ಆಯ್ಕೆಯನ್ನು ದಾಖಲೆ ಸಹಿತ establish ಮಾಡಿದಲ್ಲಿ ಅಥವಾ ನನ್ನ ನೇಮಕಾತಿಯು ಅಸಿಂಧುವೆಂದು ದಾಖಲೆಗಳ ಸಹಿತ ಸಾಬೀತುಪಡಿಸಿದಲ್ಲಿ ನನ್ನ ನೇಮಕಾತಿಯನ್ನು ಯಾವುದೇ ಸೂಚನೆ ಇಲ್ಲದೇ ಶಾಶ್ವತವಾಗಿ ರದ್ದುಗೊಳಿಸಿ ನನ್ನ ಬದಲಿಗೆ ಬೇರೊಬ್ಬರನ್ನು ಆಯ್ಕೆ ಮಾಡಬಹುದು ಎಂಬ ಬಗ್ಗೆ ಅಭ್ಯರ್ಥಿಯು 20/- ರೂ. ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ-2 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

22) ಒಂದು ವೇಳೆ ನಾನು ಈ ಇಲಾಖೆಯಲ್ಲಿ ಜವಾನರೆಂದು ನೇಮಕಾತಿ ಹೊಂದುವ ಮೊದಲು ಅಥವಾ ನಾನು ಜವಾನರೆಂದು ನೇಮಕಾತಿ ಹೊಂದಿ ಈ ಇಲಾಖೆಯಲ್ಲಿ ಜವಾನರಾಗಿ ಸರ್ಕಾರಿ ಕೆಲಸಕ್ಕೆ ಹಾಜರಾದ ದಿನಾಂಕದ ನಂತರ ನಾನು ಸರ್ಕಾರಿ ಸೇವೆಯಿಂದ ಶಾಶ್ವತವಾಗಿ ನಿರ್ಗಮಿಸುವ ದಿನಾಂಕದವರೆಗಿನ ಅವಧಿಯಲ್ಲಿ ಅಂದರೆ ನಾನು ಈ ಇಲಾಖೆಯಲ್ಲಿ ಸರ್ಕಾರಿ ನೌಕರನಾಗಿರುವ ಅವಧಿಯಲ್ಲಿ ಈ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಬೇರೆ ಇನ್ಯಾವುದೇ ಅಭ್ಯರ್ಥಿಯಾಗಲೀ ಅಥವಾ ಬೇರೆ ಇನ್ಯಾವುದೇ, ಸಾರ್ವಜನಿಕರಾಗಲೀ ದಾಖಲೆಗಳ ಸಹಿತ ಸಕಾರಣಗಳೊಂದಿಗೆ ನಾನು ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿಲ್ಲವೆಂದಾಗಲೀ ಅಥವಾ ನಾನು ಸಲ್ಲಿಸಿರುವ ಏಳನೇ ತರಗತಿ ಅಂಕಪಟ್ಟಿಯು ನಕಲಿ (ಖೊಟ್ಟಿ) ಎಂದಾಗಲೀ ದಾಖಲೆಗಳ ಸಹಿತ ಸಾಬೀತುಪಡಿಸಿದಲ್ಲಿ ನನ್ನ ಆಯ್ಕೆಯನ್ನು ಮತ್ತು ಈ ನನ್ನ ನೇಮಕಾತಿಯನ್ನು ಯಾವುದೇ ಕಾರಣ ನೀಡದೇ ಯಾವುದೇ ಘಳಿಗೆಯಲ್ಲಾದರೂ ಶಾಶ್ವತವಾಗಿ ರದ್ದುಪಡಿಸುವುದಕ್ಕೂ ಹಾಗೂ ಯಾವುದೇ ಕಾರಣ ನೀಡದೇ ಅಥವಾ ಯಾವುದೇ ನೋಟೀಸ್ ನೀಡದೇ ನನ್ನನ್ನು ಸರ್ಕಾರಿ ಸೇವೆಯಿಂದ ಶಾಶ್ವತವಾಗಿ ವಜಾ ಮಾಡುವುದಕ್ಕೂ ನಾನು ಒಪ್ಪಿರುತ್ತೇನೆ ಎಂಬ ಬಗ್ಗೆ ಅಭ್ಯರ್ಥಿಯು 20/- ರೂ. ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ-3 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

23) ಮಹಿಳಾ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಎಲ್ಲಾ ಮಹಿಳಾ ಅಭ್ಯರ್ಥಿಗಳು ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ (ಸಿವಿಲ್) ಸಂಖ್ಯೆ 232/99 (ಶ್ರೀ ಬಿ.ಎಲ್. ನಾರಾಯಣ –VS - ಕರ್ನಾಟಕ ರಾಜ್ಯ ಮತ್ತು ಇತರರು) ಇದರಲ್ಲಿ ಆಗುವ ಅಂತಿಮ ತೀರ್ಪಿಗೆ ಬದ್ಧರಾಗಿರತಕ್ಕದ್ದು ಹಾಗೂ ಮುಂಬರುವ ಸದರಿ ತೀರ್ಪಿನ ಪ್ರಕಾರ ಮಹಿಳಾ ಅಭ್ಯರ್ಥಿಗಳು ಜವಾನರ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ಹಕ್ಕನ್ನು ಸಾಧಿಸತಕ್ಕದ್ದಲ್ಲವೆಂದು ತಿಳಿಯತಕ್ಕದ್ದು ಹಾಗೂ ಸದರಿ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 232:99ರಲ್ಲಿ ಆಗುವ ಅಂತಿಮ ತೀರ್ಪಿಗೆ ಬದ್ಧಳಾಗಿರುತ್ತೇನೆ ಎಂಬ ಬಗ್ಗೆ 20/- ರೂ. ಗಳ ಛಾಪಾ ಕಾಗದದಲ್ಲಿ ಇದಕ್ಕೆ ಲಗತ್ತಿಸಿರುವ ಮುಚ್ಚಳಿಕೆ ನಮೂನೆ-4 ಅನ್ನು ಕೆಲಸಕ್ಕೆ ಹಾಜರಾಗುವ ಮುನ್ನ ಈ ಕಛೇರಿಗೆ ಬರೆದುಕೊಡತಕ್ಕದ್ದು.

24) ಸರ್ಕಾರದವರು ಈ ಹಿಂದೆ ಜಾರಿಯಲ್ಲಿದ್ದ ನಿವೃತ್ತಿ ಪಿಂಚಣಿ ಸೌಲಭ್ಯ ಯೋಜನೆಗೆ ಬದಲಾಗಿ ದಿನಾಂಕ:01.04.2006 ರಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂಖ್ಯೆ: RD SPL-04 PET 2005, ದಿನಾಂಕ:31.03.2006ರ ಆದೇಶದಲ್ಲಿ ಹೊಸದಾಗಿ New defined Contributory Pension Scheme ಎಂಬ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುತ್ತಾರೆ. ಈ ಹೊಸ ಪಿಂಚಣಿ ಯೋಜನೆಯು ದಿನಾಂಕ:01.04.2006 ರಿಂದ ಅಥವಾ ತದನಂತರ ನೇಮಕಾತಿ ಹೊಂದಿದ ಎಲ್ಲಾ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ ಎಂದು ಆದೇಶ ಮಾಡಿರುತ್ತಾರೆ. ಆದ್ದರಿಂದ ಈ ಜಿಲ್ಲೆಯಲ್ಲಿ ನೇಮಕ ಹೊಂದಿದ ಸದರಿ ನೌಕರರು ದಿನಾಂಕ:31.03.2006ರ ಸದರಿ ಸರ್ಕಾರದ ಆದೇಶದನ್ವಯ ಹೊಸ ಪಿಂಚಣಿ ಯೋಜನೆಗೆ ಒಳಪಡುತ್ತಾರೆಂದು ಈ ಮೂಲಕ ಆದೇಶಿಸಿದೆ ಹಾಗೂ ದಿನಾಂಕ:31.03.2006ರ ಸದರಿ ಸರ್ಕಾರದ ಆದೇಶದಲ್ಲಿನ ನಿರ್ದೇಶನಕ್ಕೆ ಸದರಿ ನೌಕರರು ಬದ್ಧರಾಗಿರತಕ್ಕದ್ದು.

ನೇಮಕಾತಿ ಪ್ರಾಧಿಕಾರಿ ಹಾಗೂ

ಪಿ.ಆರ್.738 ಜಿಲ್ಲಾ ನೋಂದಣಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ಶಿಕ್ಷಣ ಇಲಾಖೆ

ಅಧಿಸೂಚನೆ ಸಂಖ್ಯೆ: ಇಡಿ 159 ಡಿಟಇ 2010, ಬೆಂಗಳೂರು, ದಿನಾಂಕ:13ನೇ ಅಕ್ಟೋಬರ್, 2010

ಕರ್ನಾಟಕ ಲೋಕಸೇವಾ ಆಯೋಗದಿಂದ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಆಯ್ಕೆಯಾಗಿರುವ ಈ ಕೆಳಕಂಡ ಅಭ್ಯರ್ಥಿಗಳು ದಿನಾಂಕ:27.09.2010ರಂದು ನಡೆದ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುವಂತೆ ರೂ.12,000–18,300/–ರ ಎಐಸಿಟಿಇ ವೇತನ ಶ್ರೇಣಿಯಲ್ಲಿ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಸ್ಥಳಗಳಿಗೆ ಸ್ಥಳನಿಯುಕ್ತಿಗೊಳಿಸಲಾಗಿದೆ.

ಕ್ರಮ ಸಂಖ್ಯೆ	ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ ಶ್ರೀ:ಶ್ರೀಮತಿ	ನೇಮಿಸಲಾದ ಸ್ಥಳ
1	2	3
1.	ಇಮ್ರಾನ್‌ಖಾನ್, ನಂ.4155/ಎ, 1ನೇ ಮಹಡಿ, ಟೆಲಿಫೋನ್ ಎಕ್ಸ್‌ಛೇಂಜ್ ಕ್ರಾಸ್, ಟಿ.ಬಿ. ಎಕ್ಸ್ಟೆಂಷನ್, ರಾಮನಗರ–571511.	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ.
2.	ರೇಖಾ ಆರ್.ಎಸ್. C/o ಲಿಂಗರಾಜು ಆರ್. ನಂ.650, 12ನೇ ಕ್ರಾಸ್, 3ನೇ ಹಂತ, ಗೋಕುಲಂ, ಮೈಸೂರು–570002.	ಸರ್ಕಾರಿ ಇಂಜಿನಿಂಯರಿಂಗ್ ಕಾಲೇಜು, ಹೂವಿನಹಡಗಲಿ.

ಸದರಿ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೊಳಪಟ್ಟಿರುತ್ತವೆ.

1) ಇವರನ್ನು ಎರಡು ವರ್ಷಗಳ ಪರಿವೀಕ್ಷಣಾ ಅವಧಿಗೆ ಒಳಪಡಿಸಲಾಗಿರುತ್ತದೆ.
2) ಈ ನೇಮಕಾತಿ ತಾತ್ಕಾಲಿಕವಾಗಿದ್ದು ಆಗಿಂದಾಗ್ಗೆ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3) ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ಹಾಗೂ ನಡತೆಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.
4) ಕರ್ನಾಟಕ ಸೇವಾ (ಸೇವಾ ಮತ್ತು ಕನ್ನಡ ಭಾಷೆ ಪರೀಕ್ಷೆಗಳು) ನಿಯಮಗಳು (1974)ರ ಅಡಿ ನಿಗದಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆ ಹಾಗೂ ಇತರೆ ಪರೀಕ್ಷೆಗಳಲ್ಲಿ ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.
5) ಇವರ ಸೇವಾ ಜೇಷ್ಠತೆಯು ಪ್ರಸ್ತುತ ಕರ್ನಾಟಕ ಲೋಕಸೇವಾ ಆಯೋಗದ ಆಯಾಯ ವಿಷಯದಲ್ಲಿ ನಿರ್ಧರಿಸಿದಂತೆ ಇರತಕ್ಕದ್ದು. ನಂತರ ಕರ್ನಾಟಕ ಲೋಕಸೇವಾ ಆಯೋಗವು ಕ್ರೋಢೀಕೃತ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದಂತೆ ಹಾಗೂ ತದನಂತರ ಹಾಗೂ ಸರ್ಕಾರ ಹೊರಡಿಸುವ ಅಧಿಸೂಚನೆಯಲ್ಲಿ ಇರತಕ್ಕದ್ದು.
6) ಇವರ ನೇಮಕಾತಿಯು ಪ್ರಸ್ತಾಪಿತ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾಗಿರುವ ಅರ್ಜಿ ಸಂಖ್ಯೆ:1927/09, 1929–1959/2009, 1381–83/2010, 3108–10, 4007/10 ಇತ್ಯಾದಿಗಳಲ್ಲಿನ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.
7) ನೇಮಿಸಲಾದ ಸ್ಥಳಗಳಿಗೆ ನೇಮಕಾತಿ ಆದೇಶವನ್ನು ಸ್ವೀಕರಿಸಿದ 15 ದಿನಗಳೊಳಗೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.
8) ಗುಣ ನಡತೆ ಪ್ರಮಾಣ ಪತ್ರ ಬಂದಿಲ್ಲದಿರುವ ಪ್ರಕರಣಗಳಲ್ಲಿ ಗುಣ ನಡತೆ ಪ್ರಮಾಣ ಪತ್ರ ಬಂದಾಗ ಅದರಲ್ಲಿ ನ್ಯೂನತೆ ಕಂಡುಬಂದಲ್ಲಿ ಅಂತಹ ನೇಮಕಾತಿಗಳ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.
9) ಪಿಹೆಚ್.ಡಿ. ಪಡೆಯದ ಅಭ್ಯರ್ಥಿಗಳು ಸೇವೆಗೆ ಸೇರಿದ ಏಳು ವರ್ಷಗಳ ಅವಧಿಯೊಳಗೆ ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪಿಹೆಚ್‌ಡಿ ಪದವಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎನ್. ಜಗದೀಶ್

ಪಿ.ಆರ್.739 ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ನವೆಂಬರ್ ೧೮, ೨೦೧೦ (ಕಾರ್ತೀಕ ೨೭ ಶಕ ವರ್ಷ ೧೯೩೨)	ಸಂಚಿಕೆ ೪೫

ಭಾಗ-೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಪ್ರಿಲಿಮಿನರಿ ಅಧಿಸೂಚನೆ

ಸಂ.ಕೆ.ಎಸ್.ಎ.:ಸಿಆರ್:12/02–03, ದಿನಾಂಕ:11/12ನೇ ಅಕ್ಟೋಬರ್, 2010

ಬೆಂಗಳೂರು ನಗರ, ಗಾಂಧಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುಭಾಷ್‌ನಗರದ ವಿ.ಎಸ್.ಟಿ. ಕಾಲೋನಿ ಕೊಳಚೆ ಪ್ರದೇಶದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶದಲ್ಲಿ ಇರುವ ಮನೆಗಳು ಒತ್ತೊತ್ತಾಗಿದ್ದು ಜನರು ಸಾಮಾನ್ಯ ಸ್ಥಿತಿಯಲ್ಲಿ ವಾಸಿಸಲು ಅನಾನುಕೂಲ ಉಂಟಾಗಿದ್ದು, ಹಾಲಿ ಇರುವ ಗುಡಿಸಲುಗಳ ದುರಸ್ಥಿ ಇಲ್ಲದೇ ಕುಡಿಯುವ ನೀರು, ದೀಪ, ರಸ್ತೆ, ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳಿಲ್ಲದ ಕಾರಣ ಅನಾರೋಗ್ಯಕರ ವಾತಾವರಣ ಉಂಟಾಗಿರುವುದನ್ನು ಅಧಿಕಾರಿಗಳು ವರದಿ ಮಾಡಿರುತ್ತಾರೆ. ಈ ಪ್ರದೇಶವು ಜನಸಂದಣಿಯಿಂದ ಕೂಡಿದ್ದು, ಮಾಲಿನ್ಯ ಮತ್ತು ಅನಾರೋಗ್ಯಕರ ವಾತಾವರಣದಿಂದ ಕೂಡಿರುವುದರಿಂದ ಈ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 3 ರಡಿಯಲ್ಲಿ ಕೊಳಚೆ ಪ್ರದೇಶವೆಂದು ಘೋಷಿಸುವುದು ಅವಶ್ಯವೆಂದು ಕಂಡುಬಂದಿರುತ್ತದೆ.

ಏತನ್ಮಧ್ಯೆ ಸರ್ಕಾರದ ಸುತ್ತೋಲೆ ಸಂ.71 ಕೊಮಂಇ 2009, ದಿನಾಂಕ:24.02.2010ರಲ್ಲಿ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಕಲಂ 3 ಮತ್ತು 11ರಡಿಯಲ್ಲಿ ಜಿಲ್ಲಾಧಿಕಾರಿಗಳು, ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಿ ಅಧಿಸೂಚನೆ ಹೊರಡಿಸುವ ಮುನ್ನ ವಸತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರ ಅನುಮೋದನೆ ಪಡೆಯತಕ್ಕದ್ದೆಂದು ಸೂಚನೆಯಿದ್ದು, ಆ ಪ್ರಕಾರವಾಗಿ ಕೊಳಚೆ ಪ್ರದೇಶಗಳೆಂದು ಘೋಷಣೆ ಮಾಡಬೇಕಾದ ಪ್ರಸ್ತಾವನೆಗಳನ್ನು ಈ ಕಛೇರಿಯಿಂದ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ತದನಂತರದಲ್ಲಿ ಸರ್ಕಾರದ ಪತ್ರ ಸಂ.ವಇ 71 ಕೊಮಂಇ 2009, ದಿನಾಂಕ:12.07.2010ರ ಪತ್ರದಲ್ಲಿ ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸುವ ಬಗ್ಗೆ ಇನ್ನು ಮುಂದೆ ಸರ್ಕಾರದ ಪೂರ್ವಾನುಮೋದನೆ ಕೋರಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವ ಬದಲು ದಿನಾಂಕ:02.07.2010ರಲ್ಲಿನ ಸೂಚನೆಯಂತೆ ಮತ್ತು ಹಾಲಿ ಅಸ್ತಿತ್ವದಲ್ಲಿರುವ ನಿಯಮಗಳಡಿಯ ಕಾರ್ಯವಿಧಾನವನ್ನನುಸರಿಸಿದಂತೆ ಕ್ರಮವಹಿಸಿ, ಅಧಿಸೂಚನೆ ಸಂಖ್ಯೆ: ವಇ 73 ಕೊಮಂಇ 2001, ದಿನಾಂಕ:26.06.2002ರಲ್ಲಿ ಜಿಲ್ಲಾಧಿಕಾರಿಗಳಿಗೆ ಪ್ರದತ್ತ ಮಾಡಲಾಗಿರುವ ಅಧಿಕಾರ ವ್ಯಾಪ್ತಿಯಲ್ಲಿ ಘೋಷಣೆಗೆ ಕ್ರಮವಹಿಸುವುದು ಎಂದು ಸರ್ಕಾರವು ನಿರ್ದೇಶನ ನೀಡಿ ಪ್ರಸ್ತಾವನೆಗಳನ್ನು ಹಿಂದಿರುಗಿಸಲ್ಪಟ್ಟಿರುತ್ತದೆ ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಅವರಿಗೆ ಹಿಂದಿರುಗಿಸಿದಂತೆ ತಮ್ಮ ಕಛೇರಿಯ ಹಂತದಲ್ಲಿಯೇ ಕೊಳಚೆ ಪ್ರದೇಶಗಳ ಘೋಷಣೆಯನ್ನು ಮಾಡಲು ನಿರ್ದೇಶನ ನೀಡಿರುತ್ತದೆ.

ಆದ್ದರಿಂದ ಈ ಕೆಳ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) ಕಾಯ್ದೆ 1973ರ ಸೆಕ್ಷೆನ್ 3ರಡಿ ಜಿಲ್ಲಾಧಿಕಾರಿಗಳಿಗೆ ದತ್ತವಾಗಿರುವ ಅಧಿಕಾರದಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರು 'ಕೊಳಚೆ ಪ್ರದೇಶ' ವೆಂದು ಘೋಷಿಸಲು ಉದ್ದೇಶಿಸಿರುತ್ತಾರೆ.

ಮೇಲ್ಕಂಡ ಈ ಕ್ರಮದ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಶೇಷಾದ್ರಿಪುರ, ಬೆಂಗಳೂರು-20 ರವರಿಗೆ ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ (15) ಹದಿನೈದು ದಿವಸಗಳ ಕಾಲಾವಕಾಶ ನೀಡಲಾಗಿದೆ. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

ಬೆಂಗಳೂರು ನಗರ, ಗಾಂಧಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ, ಸುಭಾಷ್‌ನಗರದ ವಿ.ಎಸ್.ಟಿ. ಕಾಲೋನಿ ಕೊಳಚೆ ಪ್ರದೇಶದ ಚಕ್ಕುಬಂದಿ ಮತ್ತು ಹದ್ದುಬಸ್ತು ತಃಖ್ತೆ.

ಕ್ರ ಸಂ.	ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ	ಕೊಳಚೆ ಪ್ರದೇಶದಲ್ಲಿರುವ ಜಮೀನಿನ ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ.ಗುಂ.	ಚೆಕ್ಕುಬಂದಿಗಳು			
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9
1.	ವಿ.ಎಸ್.ಟಿ. ಕಾಲೋನಿ ಕೊಳಚೆ ಪ್ರದೇಶ, ಸುಭಾಷ್‌ನಗರ, ಬೆಂಗಳೂರು ನಗರ.	ಬಿ.ಬಿ.ಎಂ.ಪಿ.	ಸಿ.ಟಿ.ಎಸ್. ನಂ.243	0–04.08 0–18.12	ಖಾಸಗಿ ಮನೆಗಳು	ರಸ್ತೆ	ರಸ್ತೆ	ಚರಂಡಿ
			ಒಟ್ಟು	0–23				

ಎಂ.ಕೆ. ಅಯ್ಯಪ್ಪ
ಪಿ.ಆರ್. 412 ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ

ಅಧಿಸೂಚನೆ

ನಂ.ಎಲ್‌ಎನ್‌ಡಿ.ಸಿಆರ್.9/2010-11, ದಿನಾಂಕ:19ನೇ ಆಗಸ್ಟ್, 2010

ನಮೂನೆ-27

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ತೌಡನಹಳ್ಳಿ ಗ್ರಾಮದ ಸ.ನಂ.78ರ ಪೈಕಿ 1-24 ಎಕರೆ ಜಮೀನನ್ನು ಉತ್ತಮ ಸಾಗುವಳಿಯಡಿ ಶ್ರೀ ಪಿ.ವಿ. ಮಂಜುನಾಥ್ ಬಿನ್ ಪಿ.ವಿ. ಕೃಷ್ಣಪ್ಪರವರಿಗೆ ಮಂಜೂರು ಮಾಡುವ ವಿಚಾರದಲ್ಲಿ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ, ಸದರಿ ಶೀರ್ಷಿಕೆಯಿಂದ ತಗ್ಗಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ: 1) ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.63/2009-10, ದಿನಾಂಕ:25.03.2010.

2) ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್‌ಎನ್‌ಡಿ. ಸಿಆರ್.119/2009-10, ದಿನಾಂಕ:25.08.2009.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ "ಖರಾಬ್" ಪ್ರದೇಶದ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ "ಖರಾಬ್" ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಸದರಿ "ಖರಾಬ್" ಪ್ರದೇಶದ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಸದರಿ "ಖರಾಬ್ ಪ್ರದೇಶದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದುಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಮತ್ತು ಕ್ಲೈಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ : ಚಿಕ್ಕಬಳ್ಳಾಪುರ

ತಾಲ್ಲೂಕು : ಚಿಕ್ಕಬಳ್ಳಾಪುರ

ಹೋಬಳಿ : ನಂದಿ

ಗ್ರಾಮ : ತೌಡನಹಳ್ಳಿ

ಸರ್ವೆ ನಂಬರು 78ರ ಪೈಕಿ 1-24 ಎಕರೆ ಜಮೀನನ್ನು ಉತ್ತಮ ಸಾಗುವಳಿಯಡಿ ಶ್ರೀ ಪಿ.ವಿ. ಮಂಜುನಾಥ್ ಬಿನ್ ಪಿ.ವಿ. ಕೃಷ್ಣಪ್ಪರವರಿಗೆ ಇವರಿಗೆ ಮಂಜೂರು ಮಾಡುವ ಸಲುವಾಗಿ ಸಾರ್ವಜನಿಕರ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ

ಪೂರ್ವಕ್ಕೆ	:	ಸ.ನಂ. 78ರ ಪೈಕಿ
ಪಶ್ಚಿಮಕ್ಕೆ	:	ಸ.ನಂ.90
ಉತ್ತರಕ್ಕೆ	:	ಸ.ನಂ. 91
ದಕ್ಷಿಣಕ್ಕೆ	:	ಸ.ನಂ.78ರ ಪೈಕಿ

ಜಿಲ್ಲಾಧಿಕಾರಿ,
ಚಿಕ್ಕಬಳ್ಳಾಪುರ ಜಿಲ್ಲೆ.

ಪಿ.ಆರ್. 304

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ

ಅಧಿಸೂಚನೆ

ನಂ.ಎಲ್‌ಎನ್‌ಡಿ.ಸಿಆರ್.62/2009-10, ದಿನಾಂಕ:18ನೇ ಆಗಸ್ಟ್, 2010

ನಮೂನೆ-27

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಹಾರೋಬಂಡೆ ಗ್ರಾಮದ ಸ.ನಂ.53ರ ಪೈಕಿ 1-00 ಎಕರೆ ಜಮೀನನ್ನು ಚಿಕ್ಕಬಳ್ಳಾಪುರದ ಕಮ್ಮ ಕ್ಷೇಮಾಭಿವೃದ್ಧಿ ಸಂಘಕ್ಕೆ ವಿದ್ಯಾರ್ಥಿ ನಿಲಯ ಹಾಗೂ ಸಮುದಾಯ ಭವನ ನಿರ್ಮಾಣ ಮಾಡಲು ಮಂಜೂರು ಮಾಡುವ ವಿಚಾರದಲ್ಲಿ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ, ಸದರಿ ಶೀರ್ಷಿಕೆಯಿಂದ ತಗ್ಗಿಸಿ, ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ: 1) ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.34/2009-10, ದಿನಾಂಕ:20.07.2009 ಮತ್ತು 18.06.2010.

2) ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್‌ಎನ್‌ಡಿ. ಸಿಆರ್.3/09-10, ದಿನಾಂಕ:01.07.2009 & 14.06.2010.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸೊತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ "ಸರ್ಕಾರಿ ಬಂಡೆ" ಪ್ರದೇಶದ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ "ಸರ್ಕಾರಿ ಬಂಡೆ" ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು "ಸರ್ಕಾರಿ ಬಂಡೆ" ಪ್ರದೇಶದ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಸದರಿ "ಸರ್ಕಾರಿ ಬಂಡೆ" ಪ್ರದೇಶದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದುಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ 90 ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಮತ್ತು ಕ್ಲೈಮುಗಳನ್ನು ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ	:	ಚಿಕ್ಕಬಳ್ಳಾಪುರ
ತಾಲ್ಲೂಕು	:	ಚಿಕ್ಕಬಳ್ಳಾಪುರ
ಹೋಬಳಿ	:	ಕಸಬಾ
ಗ್ರಾಮ	:	ಹಾರೋಬಂಡೆ

ಸರ್ವೆ ನಂಬರು 53ರ ಪೈಕಿ 1.00 ಎಕರೆ ಜಮೀನನ್ನು ಚಿಕ್ಕಬಳ್ಳಾಪುರದ ಕಮ್ಮ ಕ್ಷೇಮಾಭಿವೃದ್ಧಿ ಸಂಘಕ್ಕೆ ವಿದ್ಯಾರ್ಥಿ ನಿಲಯ ಹಾಗೂ ಸಮುದಾಯ ಭವನ ನಿರ್ಮಾಣ ಮಾಡಲು ಮಂಜೂರು ಮಾಡುವ ವಿಚಾರದಲ್ಲಿ ಸಾರ್ವಜನಿಕ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ

ಪೂರ್ವಕ್ಕೆ	:	ರಸ್ತೆ
ಪಶ್ಚಿಮಕ್ಕೆ	:	ಸ.ನಂ.52
ಉತ್ತರಕ್ಕೆ	:	ಸ.ನಂ. 53ರ ಉಳಿಕೆ
ದಕ್ಷಿಣಕ್ಕೆ	:	ಸ.ನಂ.47

ಜಿಲ್ಲಾಧಿಕಾರಿ,
ಚಿಕ್ಕಬಳ್ಳಾಪುರ ಜಿಲ್ಲೆ.

ಪಿ.ಆರ್. 305

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ

ಅಧಿಸೂಚನೆ

ನಂ.ಎಲ್‌ಎನ್‌ಡಿ.ಸಿಆರ್.89/2009-10, ದಿನಾಂಕ:19ನೇ ಆಗಸ್ಟ್, 2010

ನಮೂನೆ-27

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಜಡಲತಿಮ್ಮನಹಳ್ಳಿ ಗ್ರಾಮದ ಸ.ನಂ.7ರಲ್ಲಿ 19 ಗುಂಟೆ ಜಮೀನನ್ನು ಶ್ರೀ ಸತ್ಯಜ್ಞಾನ ಸಿದ್ದಾಶ್ರಮ ಟ್ರಸ್ಟ್, (ರಿ) ಉತ್ತರ ಬಡಾವಣೆ, ಚಿಕ್ಕಬಳ್ಳಾಪುರ ರವರಿಗೆ ಮಂಜೂರು ಮಾಡುವ ವಿಚಾರದಲ್ಲಿ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ, ಸದರಿ ಶೀರ್ಷಿಕೆಯಿಂದ ತಗ್ಗಿಸಿ, ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ: 1) ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.46/2009-10, ದಿನಾಂಕ:08.09.2009.

2) ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್‌ಎನ್‌ಡಿ. ಸಿಆರ್.163/07-08, ದಿನಾಂಕ:29.07.2009 & 03.09.2009.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸೊತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ "ಖರಾಬು" ಪ್ರದೇಶದ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ "ಖರಾಬು" ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು "ಖರಾಬು" ಪ್ರದೇಶದ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಸದರಿ "ಖರಾಬು" ಪ್ರದೇಶದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದುಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ 90 ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆ ಮತ್ತು ಕ್ಲೈಮುಗಳನ್ನು ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ : ಚಿಕ್ಕಬಳ್ಳಾಪುರ

ತಾಲ್ಲೂಕು : ಚಿಕ್ಕಬಳ್ಳಾಪುರ

ಹೋಬಳಿ : ಕಸಬಾ

ಗ್ರಾಮ : ಜಡಲತಿಮ್ಮನಹಳ್ಳಿ

ಸರ್ವೆ ನಂಬರು 7ರ ಪೈಕಿ 0.19 ಗುಂಟೆ ಜಮೀನನ್ನು ಶ್ರೀ ಸತ್ಯಜ್ಞಾನ ಸಿದ್ದಾಶ್ರಮ ಟ್ರಸ್ಟ್ (ರಿ) ಚಿಕ್ಕಬಳ್ಳಾಪುರ ರವರಿಗೆ ಆಶ್ರಮದ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡುವ ಸಲುವಾಗಿ ಸಾರ್ವಜನಿಕ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ

ಪೂರ್ವಕ್ಕೆ : ಸ.ನಂ.6

ಪಶ್ಚಿಮಕ್ಕೆ : ಸ.ನಂ.16

ಉತ್ತರಕ್ಕೆ : ರಸ್ತೆ

ದಕ್ಷಿಣಕ್ಕೆ : ಸ.ನಂ.8

ಜಿಲ್ಲಾಧಿಕಾರಿ,

ಪಿ.ಆರ್. 311 ಚಿಕ್ಕಬಳ್ಳಾಪುರ ಜಿಲ್ಲೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ

ಅಧಿಸೂಚನೆ

ನಂ.ಎಲ್‌ಎನ್‌ಡಿ.ಸಿಆರ್.112/2008-09, ದಿನಾಂಕ:29ನೇ ಅಕ್ಟೋಬರ್, 2010

ನಮೂನೆ-27

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ಮಂದಿಕಲ್ ಹೋಬಳಿ, ಅರೂರು ಗ್ರಾಮದ ಸ.ನಂ.206 ಮತ್ತು 262 ರಲ್ಲಿ ಒಟ್ಟು 26-20 ಎಕರೆ ಜಮೀನನ್ನು ಜೀತವಿಮುಕ್ತರಿಗೆ ಮಂಜೂರು ಮಾಡುವ ವಿಚಾರದಲ್ಲಿ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ, ಸದರಿ ಶೀರ್ಷಿಕೆಯಿಂದ ತಗ್ಗಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ: ಆರ್.ಡಿ.167.ಎಲ್‌ಜೆಕೆ.2008, ದಿನಾಂಕ:03.12.2009.

2) ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.73/2008-09, ದಿನಾಂಕ:03.09.2009.

3) ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್‌ಎನ್‌ಡಿ. ಸಿಆರ್.89/2009-10, ದಿನಾಂಕ:01.09.2009 ಮತ್ತು 24.05.2010.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸೊತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ "ಸರ್ಕಾರಿ ಖರಾಬು" ಪ್ರದೇಶದ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ "ಸರ್ಕಾರಿ ಖರಾಬು" ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಸದರಿ "ಸರ್ಕಾರಿ ಖರಾಬು" ಪ್ರದೇಶದ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಸದರಿ "ಸರ್ಕಾರಿ ಖರಾಬು" ಪ್ರದೇಶದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದುಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಮತ್ತು ಕ್ಲೈಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ : ಚಿಕ್ಕಬಳ್ಳಾಪುರ
ತಾಲ್ಲೂಕು : ಚಿಕ್ಕಬಳ್ಳಾಪುರ
ಹೋಬಳಿ : ಮಂಡಿಕಲ್
ಗ್ರಾಮ : ಅರೂರು

ಸರ್ವೆ ನಂಬರು 206 ಮತ್ತು 262ರ ಪೈಕಿ 26-20 ಎಕರೆ ಜಮೀನನ್ನು ಜೀತವಿಮುಕ್ತರಿಗೆ ಮಂಜೂರು ಮಾಡುವ ಸಲುವಾಗಿ ಸಾರ್ವಜನಿಕರ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ

ಪೂರ್ವಕ್ಕೆ : ರಾಷ್ಟ್ರೀಯ ಹೆದ್ದಾರಿ ನಂ.7
ಪಶ್ಚಿಮಕ್ಕೆ : ಕೆರೆ ಮತ್ತು ರಿ.ಸ.ನಂ.262 ರ ಉಳಿಕೆ
ಉತ್ತರಕ್ಕೆ : ರಿ.ಸ.ನಂ.262ರ ಉಳಿಕೆ
ದಕ್ಷಿಣಕ್ಕೆ : ಹಾಲಿ ರಸ್ತೆ

ಜಿಲ್ಲಾಧಿಕಾರಿ,
ಚಿಕ್ಕಬಳ್ಳಾಪುರ ಜಿಲ್ಲೆ.

ಪಿ.ಆರ್. 423

ವಿಶೇಷ ಭೂಸ್ವಾಧೀನಾಧಿಕಾರಿಗಳವರ ಕಾರ್ಯಾಲಯ, ಹೇಮಾವತಿ ನಾಲಾ ವಲಯ, ತುಮಕೂರು

ಭೂಸ್ವಾಧೀನ ಅಧಿನಿಯಮ 1894ರ ಪ್ರಕರಣ 16(2)ರ ಅನ್ವಯ ಅಧಿಸೂಚನೆ

ಪ್ರಕರಣ ಸಂಖ್ಯೆ: ಎಸ್‌ಎಲ್‌ಎಒ/ಎಸ್‌ಆರ್(ಗು)/02/2005-06, ದಿನಾಂಕ:19ನೇ ಆಗಸ್ಟ್, 2010

ಕರ್ನಾಟಕ ಸರ್ಕಾರದವರು 1961ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರಮಸಂಖ್ಯೆ:17ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂಸಂಗ್ರಹಣ ಅಧಿನಿಯಮ (1894ರ ಸಾಲಿನ ಕೇಂದ್ರ ಅಧಿನಿಯಮ 1ರ) ಪ್ರಕರಣ 16(2)ರ ಮೇರೆಗೆ ಈ ಮೂಲಕ ಅನುಸೂಚಿಯಿಂದ ಸೂಚಿಸಲಾದ ಜಮೀನುಗಳನ್ನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಹೇಮಾವತಿ ನಾಲಾ ಯೋಜನೆಯ ನಾಲಾ ನಿರ್ಮಾಣಕ್ಕಾಗಿ ಅಧಿಕೃತವಾಗಿ ಸದರಿ ಭೂಸ್ವಾಧೀನ ಅಧಿನಿಯಮದ ಪ್ರಕರಣ 16(1)ರಂತೆ ವಶಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ ಹಾಗೂ ಕಾವೇರಿ ನೀರಾವರಿ ನಿಗಮ ನಿಯಮಿತ ರವರಿಗೆ ವಹಿಸಿಕೊಡಲಾಗಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು ತಾಲ್ಲೂಕು: ತಿಪಟೂರು ಹೋಬಳಿ: ನೊಣವಿನಕೆರೆ ಗ್ರಾಮಗಳು:1) ಬುರುಡೆಘಟ್ಟ, 2) ಕರೀಕೆರೆ

ಕ್ರ ಸಂ.	ಸ.ನಂ.	ತರಹೆ	ವಿಸ್ತೀರ್ಣ	ಆಕಾರ ರೂ.ಪೈ.	ವಶಪಡಿಸಿಕೊಂಡ ದಿನಾಂಕ
1	2	3	4	5	6
ಗ್ರಾಮ: 1. ಬುರುಡೆಘಟ್ಟ					
1.	6/3	ಖುಷ್ಕಿ	0-03	0-10	14.03.2002
		ಭಾಗಾಯ್ತು	0-02	0-22	14.03.2002

ಕ್ರ. ಸಂ.	ಸ.ನಂ.	ತರಹೆ	ವಿಸ್ತೀರ್ಣ	ಆಕಾರ ರೂ.ಪೈ.	ವಶಪಡಿಸಿಕೊಂಡ ದಿನಾಂಕ
1	2	3	4	5	6
2.	6/2	ಖುಷ್ಕಿ	0–02	0–06	14.03.2002
3.	6/6	ಖುಷ್ಕಿ	0–06	0–20	14.03.2002
4.	8/4	ಭಾಗಾಯ್ತು	0–02	0–23	14.03.2002
5.	14	ಖುಷ್ಕಿ	0–15	0–30	14.03.2002
6.	17	ಖುಷ್ಕಿ	0–05	0–13	14.03.2002
7.	20/1	ಖುಷ್ಕಿ	0–03	0–09	14.03.2002
8.	35/1	ಖುಷ್ಕಿ	0–14	0–40	14.03.2002
9.	35/2	ಖುಷ್ಕಿ	0–02	0–05	14.03.2002
10.	40/1	ಖುಷ್ಕಿ	0–37	1–20	14.03.2002
11.	40/2	ಖುಷ್ಕಿ	0–05	0–15	14.03.2002
		ಭಾಗಾಯ್ತು	0–0	2–00	14.03.2002
12.	41/1	ಖುಷ್ಕಿ	0–05	0–15	14.03.2002
13.	41/2	ಖುಷ್ಕಿ	0–02	0–06	14.03.2002
14.	41/3	ಖುಷ್ಕಿ	0–04	0–10	14.03.2002
15.	41/4	ಖುಷ್ಕಿ	0–01	0–03	14.03.2002
16.	41/5	ಖುಷ್ಕಿ	0–01	0–03	14.03.2002
17.	48	ಖುಷ್ಕಿ	0–01	0–03	14.03.2002
18.	72/2	ಖುಷ್ಕಿ	0–02	0–06	14.03.2002
19.	72/3	ಖುಷ್ಕಿ	0–02	0–06	14.03.2002
20.	75/1	ಭಾಗಾಯ್ತು	0–02	0–25	14.03.2002
21.	75/2ಸಿ	ಭಾಗಾಯ್ತು	0–04	0–50	14.03.2002
22.	144/1	ಖುಷ್ಕಿ	0–15	0–40	14.03.2002
23.	144/3ಎ	ಖುಷ್ಕಿ	0–01	0–03	14.03.2002
24.	144/5ಎ	ಖುಷ್ಕಿ	0–02	0–06	14.03.2002
25.	147/7	ಖುಷ್ಕಿ	0–01	0–03	14.03.2002
26.	148/1	ಖುಷ್ಕಿ	0–26	0–90	14.03.2002
27.	150/3	ಖುಷ್ಕಿ	0–01	0–03	14.03.2002
28.	152	ಖುಷ್ಕಿ	0–03	0–09	14.03.2002
29ಎ.	151/1	ಖುಷ್ಕಿ	0–02	0–06	14.03.2002
29ಬಿ.	151/3	ಖುಷ್ಕಿ	0–03	0–09	14.03.2002
30.	161/3	ಖುಷ್ಕಿ	0–05	0–13	14.03.2002
31.	162	ಖುಷ್ಕಿ	0–06	0–18	14.03.2002
32.	163/3ಎ	ಖುಷ್ಕಿ	0–10	0–50	14.03.2002
33.	29	ಖುಷ್ಕಿ	0–12	0–40	14.03.2002
34.	28/1ಎ	ಖುಷ್ಕಿ	0–10	0–30	14.03.2002
35.	28/1ಬಿ	ಖುಷ್ಕಿ	0–03	0–09	14.03.2002
36.	31	ಖುಷ್ಕಿ	0–21	0–84	14.03.2002
37.	36	ಖುಷ್ಕಿ	0–23	0–86	14.03.2002
38.	147/9ಬಿ	ಖುಷ್ಕಿ	0–02	0–06	14.03.2002

ಕ್ರ. ಸಂ.	ಸ.ನಂ.	ತರಹೆ	ವಿಸ್ತೀರ್ಣ	ಆಕಾರ ರೂ.ಪೈ.	ವಶಪಡಿಸಿಕೊಂಡ ದಿನಾಂಕ
1	2	3	4	5	6
39.	147/9ಎ	ಖುಷ್ಕಿ	0–02	0–06	14.03.2002
40.	147/7	ಖುಷ್ಕಿ	0–02	0–06	14.03.2002
41.	147/6	ಖುಷ್ಕಿ	0–02	0–06	14.03.2002
42.	147/5	ಖುಷ್ಕಿ	0–02	0–06	14.03.2002
43.	147/4	ಖುಷ್ಕಿ	0–01	0–03	14.03.2002
44.	137/2ಎ	ಖುಷ್ಕಿ	0–06	0–18	14.03.2002
	137/2ಬಿ	ಖುಷ್ಕಿ	0–0 1/2	0–02	14.03.2002
	ಒಟ್ಟು		7–11 1/2	11–95	
			ಗ್ರಾಮ: 2. ಕರೀಕೆರೆ		
45.	123/1ಸಿ	ಖುಷ್ಕಿ	0–01	0–03	14.03.2002
46.	117/2	ಖುಷ್ಕಿ	0–05	0–15	14.03.2002
47.	125/2	ಖುಷ್ಕಿ	0–01	0–03	14.03.2002
48.	124/2ಬಿ	ಖುಷ್ಕಿ	0–01	0–03	14.03.2002
49.	124/1	ಖುಷ್ಕಿ	0–02	0–06	14.03.2002
50.	122	ಖುಷ್ಕಿ	0–09	0–27	14.03.2002
51.	117/1	ಖುಷ್ಕಿ	0–02	0–06	14.03.2002
52.	22	ಖುಷ್ಕಿ	1–00	1–37	14.03.2002
53.	27	ಖುಷ್ಕಿ	0–21	0–60	14.03.2002
	ಒಟ್ಟು		2–02	2–60	

ವಿಶೇಷ ಭೂ ಸ್ವಾಧೀನಾಧಿಕಾರಿಗಳು,
ಹೇಮಾವತಿ ನಾಲಾವಲಯ, ತುಮಕೂರು.

ಪಿ.ಆರ್. 333

ಉಪವಿಭಾಗಾಧಿಕಾರಿಗಳು ಹಾಗೂ ಭೂ ಸ್ವಾಧೀನಾಧಿಕಾರಿಗಳು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ

ಸಂ.ಎಲ್ಎಕ್ಯೂ.ಎಸ್.ಆರ್.1/2008–09, ದಿನಾಂಕ:23ನೇ ಸೆಪ್ಟೆಂಬರ್, 2010

ಭೂ ಸ್ವಾಧೀನ ಅಧಿನಿಯಮ 1984ರ ಕಲಂ 16(2)ರ ಅನ್ವಯ ಅಧಿಸೂಚನೆ

ರಾಜ್ಯ ಸರ್ಕಾರದ ಕರ್ನಾಟಕ ಅಧಿನಿಯಮ 17/1961ರಲ್ಲಿ ತಿದ್ದುಪಡಿಯಾದಂತೆ ಭೂಸ್ವಾಧೀನ ಅಧಿನಿಯಮ 1994 ರನ್ವಯ ಕಲಂ 16ರ ಉಪಪ್ರಕರಣ (2)ರ ಮೇರೆಗೆ ಮುಂದಿನ ಅನುಸೂಚಿಯಲ್ಲಿ ಸೂಚಿಸಲಾದ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಕಂಗುವಳ್ಳಿ ಗ್ರಾಮದ ಸಮೀಪದ ಹಳ್ಳಕ್ಕೆ ಚೆಕ್ ಡ್ಯಾಂ ಕಂ ಬ್ಯಾರೇಜ್ ನಿರ್ಮಾಣದ ಉದ್ದೇಶಕ್ಕಾಗಿ ಅಧಿಕೃತವಾಗಿ ಸದರಿ ಭೂ ಸ್ವಾಧೀನ ಅಧಿನಿಯಮ ಪ್ರಕರಣ 16ರ ಉಪಪ್ರಕರಣ (1)ರಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಸಾರ್ವಜನಿಕರ ಹಾಗೂ ಸಂಬಂಧಿಸಿದವರ ತಿಳುವಳಿಕೆಗಾಗಿ ಈ ಅಧಿಸೂಚನೆ ನೀಡುವುದರ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ಚಿತ್ರದುರ್ಗ ತಾಲ್ಲೂಕು: ಹೊಸದುರ್ಗ ಹೋಬಳಿ: ಕಸಬ ಗ್ರಾಮ: ಮಳಲಿ

ಕ್ರ. ಸಂ.	ಸ.ನಂ.	ಜಮೀನಿನ ತರಹೆಯ ವಿವರ	ವಿಸ್ತೀರ್ಣ (ಎ–ಗುಂ)	ವಶಪಡಿಸಿಕೊಂಡ ದಿನಾಂಕ
1.	198/113 ಬ್ಲಾಕ್	ಖುಷ್ಕಿ	2–00	16.11.2009
2.	198/116ಪಿ1 ಬ್ಲಾಕ್	ಖುಷ್ಕಿ	1–20	16.11.2009
3.	198/116ಪಿ ಬ್ಲಾಕ್	ಖುಷ್ಕಿ	1–00	16.11.2009
	ಜುಮ್ಲಾ	–	4–20	

ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ,
ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ.

ಪಿ.ಆರ್. 372

ಕಂದಾಯ ಇಲಾಖೆ

ಭೂಸ್ವಾಧೀನ ಕಾಯ್ದೆ ಕಲಂ 17(1)ರ ಅನ್ವಯ ಕಲಂ 6(1)ರ ಅಂತಿಮ ಘೋಷಣೆ

ಕ್ರಮಾಂಕ: ಕಂಇ ಭೂಸ್ವಾ I: CR :40/2010–11, ದಿನಾಂಕ:12ನೇ ಆಗಸ್ಟ್, 2010

ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಉಬ್ರಾಣಿ ಅಮೃತಾಪುರ ಏತ ನೀರಾವರಿ ಯೋಜನೆ ನಿರ್ಮಾಣದ ಸಲುವಾಗಿ ಅವಶ್ಯ ಬೇಕಾಗಿರುವುದರಿಂದ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಪತ್ರದ ಎಲ್ಎಕ್ಯೂ ಎಸಿಆರ್31/08–09 ದಿನಾಂಕ:31.10.2008ರ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ ಹಾಗೂ ದಿನಾಂಕ:20.11.2008ರಂದು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಸದರಿ ಅಧಿನಿಯಮದ 17ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ 9ನೇ ಪ್ರಕರಣದ (1) ಉಪ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕಟಣೆಯ ದಿನಾಂಕದಿಂದ 15 ದಿವಸಗಳ ಮುಕ್ತಾಯದ ನಂತರ ಸದರಿ ಭೂಮಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದೆಂದು ನಿರ್ದೇಶಿಸಿರುತ್ತಾರೆ.

ಸದರಿ ಭೂಸ್ವಾಧೀನ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಸದರಿ ಜಮೀನುಗಳು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಿರುವುದೆಂದು ಈ ಮೂಲಕ ಘೋಷಿಸಲಾಗಿದೆ. ಸದರಿ ಭೂ ಸ್ವಾಧೀನ ಅಧಿನಿಯಮದ [illegible] 3ನೆ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರನ್ನು ಸದರಿ ಜಮೀನುಗಳ ಸಂಬಂಧದಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು [illegible] ಪ್ರಶಾಸನ ಕಾರ್ಯವನ್ನು ನಿರ್ವಹಿಸುವಂತೆ ಈ ಮೂಲಕ ನೇಮಿಸಲಾಗಿದೆ. ಮತ್ತು ಜಮೀನಿನ ಅಧಿಕೃತ ಸ್ವಾಧೀನ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ [illegible]ದರಿ ಭೂಮಿಗಳಲ್ಲಿ ನಕಾಶೆಯನ್ನು ಪರಿವೀಕ್ಷಣೆಗಾಗಿ ವಿಶೇಷ ಭೂ ಸ್ವಾಧೀನಾಧಿಕಾರಿ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರ ಕಛೇರಿಯಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ:ದಾವಣಗೆರೆ ತಾಲ್ಲೂಕು:ಚನ್ನಗಿರಿ ಹೋಬಳಿ: ಉಬ್ರಾಣಿ ಗ್ರಾಮ:ಉಬ್ರಾಣಿ

ಕ್ರ ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಅನುಭವದಾರರ ಹೆಸರು	ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮರ	ಬಾವಿ	ಮನೆ
1	2	3	4	5	6	7	8	9	10	11	12	13	14	15
1	ಮೀನಾಕ್ಷಮ್ಮ ಕೋಂ ಮಲ್ಲಪ್ಪ		ಸ್ವಂತ	15	ತರಿ	14	21	12	16	0–03	0–07	–	–	–
2	ಕೆ. ವೆಂಕಟಪ್ಪ ಬಿನ್ ಕರಿಯಪ್ಪ		ಸ್ವಂತ	14/1	ತರಿ	13	15	12	14/2	0–23	0–74	–	–	–
3	ಓಬಳಪ್ಪ ಬಿನ್ ರಂಗಣ್ಣ		ಸ್ವಂತ	14/2	ತರಿ	13	15	14/1	14/3			–	–	–
4	ದಸ್ತಗೀರ್ ಸಾಬ್ ಬಿನ್ ಮಸ್ತಾನ್ ಸಾಬ್		ಸ್ವಂತ	16/1	ಖುಷ್ಕಿ	52	21	14,13	16/2	0–02 ½	0–07	–	–	–
5	ಅಬ್ದುಲ್ ರಹೀಂ ಶಬ್ಬೀರ್ ಮಹಮದ್ ಯಾಸೂಫ್ ಬಿನ್ ಇಮಾಂಸಾಬ್		ಸ್ವಂತ	16/2	ತರಿ	52	21	16/1	17	–		–	–	–

ಕ್ರ.ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಅನುಭವದಾರರ ಹೆಸರು	ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮರ	ಬಾವಿ	ಮನೆ
1	2	3	4	5	6	7	8	9	10	11	12	13	14	15
6	1) ರುದ್ರಪ್ಪ ಬಿನ್ ಹೆಚ್.ಮಲ್ಲಪ್ಪ 2) ಹನುಮಂತಪ್ಪ ಬಿನ್ ಹೆಚ್.ಮಲ್ಲಪ್ಪ		ಸ್ವಂತ	17/1	ಖುಷ್ಕಿ	52	21	17/2	48,49 17/1	0–02	0–06	–	–	–
7	ಪೀರ್ ಸಾಬ್ ಬಿನ್ ಮಸ್ತಾನ್ ಸಾಬ್		ಸ್ವಂತ	17/2	ಖುಷ್ಕಿ	52	21	16		–		–	–	–
8	ಗಾರ್ಡ್ ಮಸ್ತಾನ್ ಸಾಬ್ ಬಿನ್ ಕೆರೆ ಇಮಾಮ್‌ಸಾಬ್		ಸ್ವಂತ	52/1	ಖುಷ್ಕಿ	52/2	16,17	53	51 51 51 55/1,2,3,43	–		5 ಮಾವಿನ ಮರ	–	–
9	ದಸ್ತಗಿರಿ ಸಾಬ್ ಬುಡೇನ್ ಸಾಬ್		ಸ್ವಂತ	52/2	ಖುಷ್ಕಿ	52/3	52/1	53		0–15	0–30	3 ಮಾವಿನಮರ 2 ತೆಂಗಿನ ಮರ	–	–
10	ಮಸ್ತಾನ್ ಸಾಬ್ ಬಿನ್ ಬುಡೇನ್ ಸಾಬ್		ಸ್ವಂತ	52/3	ಖುಷ್ಕಿ	52/4	52/2	53		–	–	4 ಮಾವಿನ ಮರ	–	–
11	ಟಿ. ಶೌಕತ್ ಸಾಬ್ ಬಿನ್ ರೋಶನ್ ಸಾಬ್		ಸ್ವಂತ	52/4	ಖುಷ್ಕಿ	55	52/3	54+ ಗ್ರಾಮಠಾಣ		–	–	2 ತೆಂಗಿನ ಮರ 1 ಮಾವಿನಮರ	–	–
12	ಎ)ಓಬಳಣ್ಣ ಬಿನ್ ರಂಗಣ್ಣ ಬಿ)ರಂಗಪ್ಪ ಬಿನ್ ಭೀಮಪ್ಪ		ಸ್ವಂತ	(55/4) 55/4ಪಿ1 55/4ಪಿ 4	ಖುಷ್ಕಿ	56	52	54+ ಗ್ರಾಮಠಾಣ	55/1,2,3,43	0–24 ½ <u>0-02pk</u> <u>0-26½</u>	0.50	–	–	–
13	ಎ)ಕರಿಯಪ್ಪ ಬಿನ್ ಕರೇಗೌಡ್ರು 0–06		ಸ್ವಂತ	(56) 56ಪಿ	ಖುಷ್ಕಿ	33+79	55 ಊರು		38	0–15	0.32	–	–	–

ಕ್ರ ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಅನುಭವದಾರರ ಹೆಸರು	ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮರ	ಬಾವಿ	ಮನೆ
1	2	3	4	5	6	7	8	9	10	11	12	13	14	15
	ಬಿ) ಅಬ್ದುಲ್ ಅಜೀಜ್ ಸಾಬ್ ಬಿನ್ ಮಹಮದ್ ಗೌಸ್ 0–04			56ಪಿ3	ಖುಷ್ಕಿ							–	–	–
	ಸಿ) ಸುಶೀಲಮ್ಮ ಕೋಂ ಚಂದ್ರಪ್ಪ			56ಪಿ4	ಖುಷ್ಕಿ							–	–	–
14	ರಾಮಪ್ಪ ಬಿನ್ ಮಲ್ಲಪ್ಪ 0–05		ಸ್ವಂತ	33	ಖುಷ್ಕಿ	32/2 34	37	79	34	0–02 1/2	0.07	–	–	–
15	ಚನ್ನಬಸಪ್ಪ ಬಿನ್ ಹನುಮಂತಪ್ಪ	ಆರ್ ಆರ್ 452 ಎಸ್ ಇ ಎಸ್ ದುರ್ಬಿಗೆರೆ		32/1	ಖುಷ್ಕಿ	ಕೆರೆ	33	–	34	0–05 1/2	0.15	–	–	–
										2–15				

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಎಂ. ಶಿರೋಳ, ಐ.ಎ.ಎಸ್.

ಆಯುಕ್ತರು,

ಪುನರ್ವಸತಿ ಹಾಗೂ ಭೂ ಸ್ವಾಧೀನ ಕೃ.ಮೇ.ಯೋ.

ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ,

ಕಂದಾಯ ಇಲಾಖೆ.

ಪಿ.ಆರ್.420

ಕಂದಾಯ ಇಲಾಖೆ

ಭೂಸ್ವಾಧೀನ ಕಾಯ್ದೆ ಕಲಂ 17(1)ರ ಅನ್ವಯ ಕಲಂ 6(1)ರ ಅಂತಿಮ ಘೋಷಣೆ

ಕ್ರಮಾಂಕ: ಕಂಇ ಭೂಸ್ವಾ-1/ಸಿಆರ್-59/10-11, ದಿನಾಂಕ:19ನೇ ಅಕ್ಟೋಬರ್, 2010

ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ತುಂಗಾ ಮೇಲ್ದಂಡೆ ಯೋಜನೆಯ ಹಿನ್ನೀರಿನ ಜಲಾಶಯದಲ್ಲಿ ಮುಳುಗಡೆ ಸಲುವಾಗಿ ಅವಶ್ಯ ಬೇಕಾಗಿರುವುದರಿಂದ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರ ಪತ್ರ ನಂ.ಎಲ್.ಎ.ಕ್ಯೂ/ಸಿಆರ್-06/07-08, ದಿನಾಂಕ:20.01.2009ರ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ ಹಾಗೂ ದಿನಾಂಕ:28.05.2009ರಂದು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಸದರಿ ಅಧಿನಿಯಮದ 17ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ 9ನೇ ಪ್ರಕರಣ (1)ನೇ ಉಪ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕರಣದಲ್ಲಿ ಸೂಚಿಸಿರುವ ನೋಟೀಸಿನ ಪ್ರಕಟಣೆಯ ದಿನಾಂಕದಿಂದ 15 ದಿವಸಗಳ ಮುಕ್ತಾಯದ ನಂತರ ಸದರಿ ಭೂಮಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದೆಂದು ನಿರ್ದೇಶಿಸಿರುತ್ತಾರೆ.

ಸದರಿ ಭೂಸ್ವಾಧೀನ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಸದರಿ ಜಮೀನುಗಳು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಿರುವುದೆಂದು ಈ ಮೂಲಕ ಘೋಷಿಸಲಾಗಿದೆ. ಸದರಿ ಭೂ ಸ್ವಾಧೀನ ಅಧಿನಿಯಮದ ಪ್ರಕಾರ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರನ್ನು ಸದರಿ ಜಮೀನುಗಳ ಸಂಬಂಧದಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳವರ ಪ್ರಶಾಸನ ಕಾರ್ಯವನ್ನು ನಿರ್ವಹಿಸುವಂತೆ ಈ ಮೂಲಕ ನೇಮಿಸಲಾಗಿದೆ. ಮತ್ತು ಜಮೀನಿನ ಅಧಿಕೃತ ಸ್ವಾಧೀನ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ. ಸದರಿ ಭೂಮಿಗಳಲ್ಲಿ ನಕಾಶೆಯನ್ನು ಪರಿವೀಕ್ಷಣೆಗಾಗಿ ವಿಶೇಷ ಭೂ ಸ್ವಾಧೀನಾಧಿಕಾರಿ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರ ಕಛೇರಿಯಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಚಿಕ್ಕಮಗಳೂರು ತಾಲ್ಲೂಕು: ನರಸಿಂಹರಾಜಪುರ ಹೋಬಳಿ: ಕಸಬಾ ಗ್ರಾಮ: ಮುತ್ತಿನಕೊಪ್ಪ

ಕ್ರ ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಸ.ನಂ	ಅನುಭವದಾರರ ಹೆಸರು ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮನೆ	ಬಾವಿ	ಮರ
1	2	3	4	5	6	7	8	9	10	11	12	13	14	15
1	ಬಿ.ಬಿ. ಸೋಮಣ್ಣ ಬಿನ್ ವೆಂಕಟೇಗೌಡ	ಎಸ್ ಬಿ ಎಂ ಕೆ ಎಂ ಆರ್ 21/93-94 22/94-95	57/2ಎ	ಸ್ವಂತ	ತರಿ	57/2ಎ ಮುಳುಗಡೆ ಪ್ರದೇಶ	ರಸ್ತೆ	57/1	ಸ.ನಂ. 197	1-00	5-61			
2	ಬಿ.ಬಿ. ಸೋಮಣ್ಣ ಬಿನ್ ವೆಂಕಟೇಗೌಡ	ಎಂ ಆರ್ 45/ 94-95 25000/- ಆಧಾರ	57/1	ಸ್ವಂತ	ತರಿ	57/1 ಮುಳುಗಡೆ ಪ್ರದೇಶ	ರಸ್ತೆ	ಸ.ನಂ. 60	57/2ಎ	1-05	6-31			
3	ಬಿ.ಎಸ್. ಶ್ರೀನಿವಾಸ ಬಿನ್ ಸಿದ್ದಪ್ಪಗೌಡ, ಬಿ.ಎಸ್.ಮಂಜುನಾಥ ಬಿನ್ ಸಿದ್ದಪ್ಪಗೌಡ, ಬಿ.ಎಸ್. ಚಂದ್ರಪ್ಪ ಬಿನ್ ಸಿದ್ದಪ್ಪಗೌಡ, ಬಿ.ಎಸ್. ಜಯರಾಮ ಬಿನ್ ಸಿದ್ದಪ್ಪಗೌಡ	ಡಿಸಿ ಎ ಆರ್ ಬಿ ಗೆ ಆಧಾರ 43900/-	62/2	ಸ್ವಂತ	ತರಿ	62/2 ರಲ್ಲಿ ಉಳಿಕೆ ಪ್ರದೇಶ	62/1	ಸ.ನಂ.60	61	3-00	15-15			

ಕ್ರ ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಸ.ನಂ	ಅನುಭವದಾರರ ಹೆಸರು ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮನೆ	ಬಾವಿ	ಮರ
1	2	3	4	5	6	7	8	9	10	11	12	13	14	15
4	ಬಿ.ಜಿ. ಶಾಮಣ್ಣ ಬಿನ್ ಗಿಡ್ಡಣ್ಣ	ಎಂ ಆರ್ 38/99-00 ಎಸ್ ಬಿ ಎಂ ಕೆ 45000/- ಆಧಾರ	64/3	ಸ್ವಂತ	ತರಿ	41	65 ಕೆರೆ	66	64/4	0-35	4-67			120 ಅಡಿಕೆ ಮರ ತೆಂಗು 10 ಹೊನ್ನಾಲು 1, ಮತ್ತಿ ಮರ2
5	ಕೆ.ಎನ್. ಅಶೋಕ್‌ಕುಮಾರ ಬಿನ್ ಕೆ.ಜಿ. ನಾಗಪ್ಪ	ಎಂ ಆರ್ 17/96-97 ಎಸ್ ಬಿ ಎಂ ಕೆ	64/4	ಸ್ವಂತ	ತರಿ	41	64/5	64/3	63	0-35	4-67			
6	ಹೆಚ್. ಶ್ರೀಧರ್ ಐತಾಳ್ ಬಿನ್ ನರಸಿಂಹ ಐತಾಳ್	ಎಂ ಆರ್ 24/88-89ಎಂ 49/99-00 ಎಸ್ ಬಿ ಎಂ ಕೆ	66	ಸ್ವಂತ	ತರಿ	40	67	69	65 ಕೆರೆ ಮತ್ತು 64	3-36	20-67			996 ಅಡಿಕೆ ಮರಗಳು 1 ಮತ್ತಿ 11 ತೆಂಗಿನ ಮರಗಳು 1 ಬೀಟೆ 3 ಸಾಗುವಾನಿ, 2 ಹುಣಸೆಮರ
7	ಶೃತಿನೀತಿ		67	ಸ್ವಂತ	ಖುಷ್ಕಿ	66	ತುಂಗಾನದಿ	68	64	5-08	4-22			2680 ಅಡಿಕೆ ಮರ ಸಾಗುವಾನಿ 10, 25 ತೆಂಗು
8	ಕೆ.ಸಿ. ಪುಟ್ಟಸ್ವಾಮಿ ಬಿನ್ ಚನ್ನಪ್ಪಗೌಡ		68	ಸ್ವಂತ	ಖುಷ್ಕಿ	71 ಮತ್ತು 69 ಕೆರೆ	ತುಂಗಾನದಿ	72	67	9-34	7-98			4800 ಅಡಿಕೆ ಮರಗಳು 75 ತೆಂಗಿನ ಮರಗಳು 16 ಸಾಗುವಾಣಿ ಮರಗಳು

ಕ್ರ ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಸ.ನಂ	ಅನುಭವದಾರರ ಹೆಸರು ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮನೆ	ಬಾವಿ	ಮರ
1	2	3	4	5	6	7	8	9	10	11	12	13	14	15
9	ಕೆ.ಸಿ. ಪುಟ್ಟಸ್ವಾಮಿ ಬಿನ್ ಚನ್ನಪ್ಪಗೌಡ		70	ಸ್ವಂತ	ಖುಷ್ಕಿ ತರಿ	70	69 ಕೆರೆ	73	40	1–00 3–00	0–70 15–15			2120 ಅಡಿಕೆ ಮರಗಳು, 500 ವೆನಿಲಾ, 12 ಸಾಗುವಾನಿ ಮರಗಳು, 50ಜಾಯಿ ಕಾಯಿ ಮರ
10	ಸಿ.ಎಂ. ಹರಿಯಪ್ಪ ಬಿನ್ ಸಿ.ವಿ. ಮಂಜಪ್ಪಗೌಡ, ಸಿ.ವಿ.ಲಕ್ಷ್ಮಣ ಬಿನ್ ಸಿ.ವಿ. ಮಂಜಪ್ಪಗೌಡ	ಎಂ ಆರ್ 16/87–88 ಎಂಆರ್ 12/95–96 ಎಸ್ ಬಿ ಎಂ ಕೆ 21/95–96 ಪಿ ಎಲ್ ಎ ಆರ್ ಡಿ ಮುತ್ತಿನಕೊಪ್ಪ ಸಿ ಎಂ ಬ್ಯಾಂಕ್ 30000/– 40000/–	136	ಸ್ವಂತ	ತರಿ	122, 123	137	139	135	2–13	13–80			
11	ಸಿ.ಆರ್. ದಾಸಣ್ಣ ಬಿನ್ ರಾಮೇಗೌಡ	ಎಂ ಆರ್ 2/00–01 ಎಸ್ ಬಿಎಂ ಗೆ ಆಧಾರ	137/1	ಸ್ವಂತ	ತರಿ	137/2	130	139	130	0–39	5–72			

ಕ್ರ. ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಸ.ನಂ	ಅನುಭವದಾರರ ಹೆಸರು ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮನೆ	ಬಾವಿ	ಮರ
1	2	3	4	5	6	7	8	9	10	11	12	13	14	15
12	ಸಿ.ಆರ್. ದಾಸಣ್ಣ ಬಿನ್ ರಾಮೇಗೌಡ, ಸಿ.ಆರ್. ಡಾಕಣ್ಣ ಬಿನ್ ರಾಮೇಗೌಡ, ಸಿ.ವಿ.ಮಂಜಪ್ಪಗೌಡ ಬಿನ್ ವೆಂಕಟೇಗೌಡ	ಸಿಂಡಿಕೇಟ್ ಬ್ಯಾಂಕ್ 30000,13000 30,000/–	137/2	ಸ್ವಂತ	ತರಿ	137/3	137/1	139	130	0–28 ½ 0–20 0–16 ½	4–18 2–93 2–41			
13	ಸಿ.ವಿ. ಕೃಷ್ಣಮೂರ್ತಿ ಬಿನ್ ಮಂಜಪ್ಪಗೌಡ, ಸಿ.ಎಂ.ಹರಿಯಪ್ಪ, ಬಿನ್ ಮಂಜಪ್ಪಗೌಡ		137/3	ಸ್ವಂತ	ತರಿ	136	137/2	139	130	1–14 0–17	7–92 2–49			
14	ಲೋಕೇಶ್ ಬಿನ್ ವೆಂಕಟೇಗೌಡ ಉಮೇಶ ಬಿನ್ ವೆಂಕಟೇಗೌಡ, ಉಮೇಶ ಬಿನ್ ವೆಂಕಟೇಗೌಡ, ರಾಧ ಕೋಂ ಸುಬ್ರಮಣ್ಯ, ನಿಧಿ ಬಿನ್ ಸುಬ್ರಮಣ್ಯ, ನಿಖಿಲ ಬಿನ್ ಸುಬ್ರಮಣ್ಯ, ವಸಂತ ಬಿನ್ ವೆಂಕಟೇಗೌಡ		139/1	ಸ್ವಂತ	ಖುಷ್ಕಿ	139/1ರಲ್ಲಿ ಉಳಿಕೆ ಜಾಗ	ತುಂಗಾ ನದಿ	140	139/2	2–18	1–98			300 ಅಡಿಕೆ ಮರಗಳು 4 ತೆಂಗು, 25 ಗೇರುಮರ, 300 ಅಡಿಕೆ ಮರ 30 ಗೇರು ಗಿಡ 20 ಸಿಲ್ವಾರ ಮರಗಳು ಬೆಳೆದ 300 ಅಡಿಕೆ ಮರಗಳು ತೆಂಗು ಗಿಡ 3

ಕ್ರ ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಸ.ನಂ	ಅನುಭವದಾರರ ಹೆಸರು ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮನೆ	ಬಾವಿ	ಮರ
1	2	3	4	5	6	7	8	9	10	11	12	13	14	15
15	ಹೆಚ್.ಎಂ. ಶಂಕರಪ್ಪಗೌಡ ಬಿನ್ ಮಂಜಪ್ಪಗೌಡ	ಎಂ ಆರ್ 38/87-88 ಎಂ ಆರ್ 17/94-95 ಎಸ್ ಬಿಎಂ ಬ್ಯಾಂಕ್ 25000/-	153	ಸ್ವಂತ	ಭಾಗಾಯ್ತು	153 ರಲ್ಲಿ ಉಳಿಕೆ ಜಾಗ	153 ರಲ್ಲಿ ಉಳಿಕೆ ಜಾಗ	ಹಳ್ಳ	153 ರಲ್ಲಿ ಉಳಿಕೆ ಜಾಗ	0-17	10-87			ತೆಂಗಿನಮರ 7, ಹಲಸಿನಮರ 6, ಅಡಿಕೆ ಮರ 415
16	ಹೆಚ್.ಎಂ. ಕೃಷ್ಣಮೂರ್ತಿ ಗೌಡ ಬಿನ್ ಮಂಜಪ್ಪಗೌಡ	ಪಿ ಸಿ ಎ ಡಿಬಿ ಗೆ 25000/-, 20,000/- ಗೆ ಆಧಾರ	173/2	ಸ್ವಂತ	ಖುಷ್ಕಿ	189	ತುಂಗಾ ನದಿ	190	173/3	0-37	0-99			510 ಅಡಿಕೆ ಮರಗಳು, ಸಾಗುವಾನಿ 16, ಬಿಲ್ವಾರ 5
17	ಹೆಚ್.ಎಂ. ಷಣ್ಮುಖಪ್ಪ ಗೌಡ ಬಿನ್ ಮಂಜಪ್ಪಗೌಡ	ಪಿ ಸಿ ಎ ಡಿಬಿ ಗೆ 34500/-, 29,600/- ಗೆ ಆಧಾರ ವಿ ಎಸ್ ಎಸ್ ಎನ್ 2000/-, 75000/-	173/3	ಸ್ವಂತ	ತರಿ	173/1	ಗ್ರಾಮಠಾಣಾ	ರಿ.ಸ.ನಂ.173/3 ರಲ್ಲಿ ಹಿಂದೆ ಮುಳುಗಡೆಯಾಗಿರುವ ಪ್ರದೇಶ	173/5	1-09	7-26			638 ಅಡಿಕೆ ಮರಗಳು
18	ಹೆಚ್.ಎಂ. ಕೃಷ್ಣಮೂರ್ತಿ ಗೌಡ ಬಿನ್ ಮಂಜಪ್ಪಗೌಡ	ಪಿಸಿಎಡಿಬಿ ಗೆ 29000/- ಆಧಾರ.	173/4	ಸ್ವಂತ	ತರಿ	178,177	173/3 173/5	173/1	173/6	1-11	7-56			
19	ಎಂ.ಆರ್. ಕೃಷ್ಣಮೂರ್ತಿ ಬಿನ್ ರಂಗಪ್ಪಗೌಡ	ಎಸ್ ಬಿ ಎಂ ಗೆ ಆಧಾರ	188 (188p)	ಸ್ವಂತ	ತರಿ	180	189	188 ರಲ್ಲಿ ಹಿಂದೆ ಮುಳುಗಡೆ ಪ್ರದೇಶ	173, 178	2-35	16-13			

ಕ್ರ ಸಂ.	ಖಾತೆದಾರರ ಹೆಸರು	ಋಣಭಾರ ಹಕ್ಕುಗಳು	ಸ.ನಂ	ಅನುಭವದಾರರ ಹೆಸರು ಸ.ನಂ	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ		ಮನೆ,ಮರ,ಬಾವಿ ಇತ್ಯಾದಿ		
						ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ	ವಿಸ್ತೀರ್ಣ ಸ.ನಂ	ಆಕಾರ ರೂ.ಪೈ	ಮನೆ	ಬಾವಿ	ಮರ
1	2	3	4	5	6	7	8	9	10	11	12	13	14	15
20	ಎಂ.ಆರ್. ಸುಂದರೇಶ ಬಿನ್ ರಂಗಪ್ಪ ಗೌಡ	ಎಂ ಆರ್ 11/97–98 ವಿ ಎಸ್ ಎಸ್ ಎನ್ ,ಎಸ್ ಬಿ ಎಂ ನರಸಿಂಹ ಆಧಾರ 50000/– ವಿಎಸ್ ಎಸ್ ಎನ್ ಮುತ್ತಿನಕೊಪ್ಪ 95,000/–	189	ಸ್ವಂತ	ತರಿ	188	173	190	173	1–03	5–54			1263 ಅಡಿಕೆ ಮರಗಳು
21	ಅಬ್ದುಲ್ ಖಲೀಲ್ ಬಿನ್ ಮಹಮ್ಮದ್ ಹಯಾತ್ ಮಹಮ್ಮದ್ ಷರೀಫ್ ಬಿನ್ ಮಹಮ್ಮದ್ ಹಯಾತ್		191/1	ಸ್ವಂತ	ತರಿ	191/2	ತುಂಗಾ ನದಿ	192 ಮತ್ತು 193	190	1–00	5–14			
22	ಬಿ.ಎಸ್. ನಾರಾಯಣಮೂರ್ತಿ ಬಿನ್ ಬಿ.ಜಿ. ಶೀನಪ್ಪ	ಎಂ.ಆರ್ 12/95–96 ಎಸ್ ಬಿ ಎಂ ಗೆ	201/2	ಸ್ವಂತ	ತರಿ	202	200/2	201/1	201/3	1–04	6–17			
									ಒಟ್ಟು ವಿಸ್ತೀರ್ಣ	48–35				

ಒಟ್ಟು ನಲವತ್ತೆಂಟು ಎಕರೆ ಮುವತ್ತೈದು ಗುಂಟೆ ಮಾತ್ರ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಎಂ. ಶಿರೋಳ, ಐ.ಎ.ಎಸ್.
ಆಯುಕ್ತರು,
ಪುನರ್ವಸತಿ ಹಾಗೂ ಭೂ ಸ್ವಾಧೀನ ಕೈ.ಮೇ.ಯೋ.
ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ,
ಕಂದಾಯ ಇಲಾಖೆ.

ಪಿ.ಆರ್.421